ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 26 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 101 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪ್ರಥಮ ವರ್ಷದ ಪುಣ್ಯಸ್ಮರಣೆ



ಡಿ. ಬಿ. ಬಸವರಾಜು

ಮಾಜಿ ಪ್ರಧಾನರು & ಮಾಜಿ APMC ಸದಸ್ಯರು ದೂರಗ್ರಾಮ.

ಸ್ಥಳ : ದೂರಗ್ರಾಮ ದಿನಾಂಕ : 26.07.2024

ಪ್ರೀತಿಯ ಚಿಲುಮೆ, ಮಮತೆಯ ಮನಸ್ಸು, ಮಾತು ಕೃತಿಯಿಂದ
ಆದರ್ಶದ ಬದುಕನ್ನು ತೋರಿದ ಹಾಗೂ ಬಂಧು–ಬಳಗಕ್ಕೆಲ್ಲಾ ಆಶಾಕಿರಣವಾಗಿ,
ಹೃದಯಕ್ಕೆ ಹತ್ತಿರವಾಗಿ, ಮಾರ್ಗದರ್ಶಿಯಾಗಿ, ನಮ್ಮೆಲ್ಲರ ಬಾಳಿಗೆ ನಂದಾದೀಪವಾಗಿ,
ನೀವು ನೀಡಿದ ಆದರ್ಶ ನಮ್ಮ ಬದುಕಿಗೆ ದಾರಿದೀಪ.
ಅನುದಿನ ನಿಮ್ಮ ಪುಣ್ಯಸ್ಮರಣೆಯಲ್ಲಿರುವ..

ಶ್ರೀಮತಿ ಚಿನ್ನಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀಮತಿ ಮಹದೇವಮ್ಮ W/O ಲೇಟ್ ನಂಜಪ್ಪನವರು & ಕುಟುಂಬವರ್ಗ ಹಾರೋಹಳ್ಳಿ.
ಶ್ರೀಮತಿ ಸರೋಜ W/O ಲೇಟ್ ಶ್ರೀ ಡಿ. ಬಿ. ಶಿವಮಲ್ಲಪ್ಪ ನಿವೃತ್ತ ರೆವಿನ್ಯೂ ಇನ್ಸಪೆಕ್ಟರ್,
ಕುಟುಂಬವರ್ಗ ದೂರಗ್ರಾಮ.
ಶ್ರೀ ಡಿ. ಬಿ. ನಾಗರಾಜುರವರು PLD ಬ್ಯಾಂಕ್ ಅಧ್ಯಕ್ಷರು, ಮೈಸೂರು ತಾಲೂಕು,
ಕುಟುಂಬವರ್ಗ ದೂರಗ್ರಾಮ
ಶ್ರೀ ಮತಿ ಡಿ. ಬಿ. ನಾಗರತ್ನಮ್ಮ W/O ಶ್ರೀ ಚನ್ನಮಲ್ಲಪ್ಪ ನವರು ನಿವೃತ್ತ ಶಿಕ್ಷಕರು
ಹಾಗೂ ಕುಟುಂಬವರ್ಗ, ಮೈಸೂರು.
ಶ್ರೀ ಡಿ. ಬಿ. ನಟರಾಜುರವರು & ಕುಟುಂಬವರ್ಗ, ದೂರಗ್ರಾಮ
ಶ್ರೀ ಡಿ. ಬಿ. ರಾಜಶೇಖರಮೂರ್ತಿ ವಕೀಲರು & ಕುಟುಂಬವರ್ಗ ದೂರಗ್ರಾಮ
ಶ್ರೀಮತಿ ಸುವರ್ಣ W/O ಲೇಟ್ ಶ್ರೀ ಡಿ. ಬಿ. ನಂಜುಂಡಸ್ವಾಮಿರವರು
& ಕುಟುಂಬವರ್ಗ ದೂರಗ್ರಾಮ

ಅಭಿಮಾನಿಗಳು, ಬಂಧುಮಿತ್ರರು ಹಾಗೂ ದೂರ ಗ್ರಾಮಸ್ಥರು.

ದಸರೆಗೆ 3 ತಿಂಗಳ ಮುಂಚಿತವಾಗಿಯೇ ಸಿದ್ಧತೆ

ಅರಮನೆ ಸುತ್ತ, ರಾಜ ಮಾರ್ಗದ ಫುಟ್‌ಪಾತ್, ಕಲ್ಲಿನ ಬ್ಯಾರಿಕೇಡ್ ದುರಸ್ತಿ ಕಾಮಗಾರಿಗಳಿಗೆ ಪಾಲಿಕೆಯಿಂದ ಟೆಂಡರ್

ಮುಖ್ಯಮಂತ್ರಿಗಳ ನೇತೃತ್ವದ ಉನ್ನತ ಮಟ್ಟದ ಸಭೆಯಲ್ಲಿ ವಿವಿಧ ಪ್ರಸ್ತಾವನೆಗಳ ಮಂಡಿಸಿ ಅನುಮೋದನೆ ಪಡೆಯಲು ತಯಾರಿ





ಮೈಸೂರು, ಜು.25(ಆರ್‌ಕೆ)– ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಎಂಬಂತೆ ದಸರಾ ಸಮೀಪಿಸುತ್ತಿದ್ದಂತೆ ತರಾತುರಿಯಲ್ಲಿ ಕಾಮಗಾರಿ ಕೈಗೊಂಡು ಅವಾಂತರ ಸೃಷ್ಟಿಸುವುದು ಮೈಸೂರು ಜಿಲ್ಲಾಡಳಿತಕ್ಕೆ ಮಾಮೂಲಿ ಎಂಬ ಮಾತಿದೆ. ಇದಕ್ಕೆ ಅಪವಾದವೆಂಬಂತೆ ಪ್ರಸಕ್ತ ಸಾಲಿನ ದಸರಾ ಮಹೋತ್ಸವಕ್ಕೆ ಮೈಸೂರು ಜಿಲ್ಲಾಡಳಿತವು ಮೂರು ತಿಂಗಳು ಮುಂಚಿತವಾಗಿಯೇ ಸಿದ್ಧತಾ ಕಾರ್ಯ ಆರಂಭಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ನಿರ್ದೇಶನದಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಅವರು 2024ರ ಅಕ್ಟೋಬರ್ ತಿಂಗಳಲ್ಲಿ ನಡೆಯುವ ದಸರಾ ಮಹೋತ್ಸವಕ್ಕೆ ತಕ್ಷಣದಿಂದಲೇ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾ ಪಂಚಾಯ್ತಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ), ಮೈಸೂರು ಮಹಾನಗರ ಪಾಲಿಕೆ(ಎಂಸಿಸಿ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಲಿಮಿಟೆಡ್ (ಚೆಸ್ಕಾಂ), ಚಾಮುಂಡಿ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹೀಗೆ ಸಂಬಂಧಪಟ್ಟ ಇಲಾಖೆ, ನಿಗಮ–ಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮುಖ್ಯಮಂತ್ರಿಗಳ ನೇತೃತ್ವದ ದಸರಾ ಉನ್ನತ ಮಟ್ಟದ ಸಭೆಗೂ ಮುನ್ನ ನಾನಾ ಜವಾಬ್ದಾರಿ, ಉದ್ದೇಶಿತ ಕಾಮಗಾರಿ ನಿರ್ಧರಿಸಿ, ನಂತರ ಅದನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಬೇಕಾಗಿದೆ. ಜೊತೆಗೆ ಅಂದಾಜು ತಯಾರಿಸಿ ಮುಂಚಿತವಾಗಿಯೇ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಉನ್ನತ ಮಟ್ಟದ ಸಭೆ ಮುಗಿಯುತ್ತಿದ್ದಂತೆಯೇ ದಸರಾ ಕಾಮಗಾರಿಗಳನ್ನು ಮಳೆ ನೋಡಿಕೊಂಡು ಕೈಗೆತ್ತಿಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಿರಂತರ ಸಭೆಗಳನ್ನು ನಡೆಸಿ ಕಳೆದ ವರ್ಷಕ್ಕಿಂತ ಈ ಬಾರಿ ವಿಭಿನ್ನವಾಗಿ ದಸರಾ ಆಚರಿಸಬೇಕು ಎಂದು ಲಕ್ಷ್ಮಿಕಾಂತ್ ರೆಡ್ಡಿ ಅವರು ಸೂಚನೆ ನೀಡುತ್ತಿದ್ದಂತೆ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಅರಮನೆ ಸುತ್ತಲು ಫುಟ್‌ಪಾತ್‌ಗಳಲ್ಲಿ ಒಡೆದು ಹೋಗಿರುವ ಟೈಲ್ಸ್‌ಗಳನ್ನು ತೆಗೆದು, ಹೊಸ ಟೈಲ್ಸ್ ಅಳವಡಿಸುವುದು. ಕಲ್ಲಿನ ಬ್ಯಾರಿಕೇಡ್ ದುರಸ್ತಿ, ಕರ್ಬ ಸ್ಟೋನ್‌ಗಳಿಗೆ ಬಣ್ಣ ಬಳಿಯುವುದು, ಅರಮನೆ ಉತ್ತರ ದ್ವಾರದಿಂದ ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ ಬಂಬೂ ಬಜಾರ್, ಹೈವೇ ಸರ್ಕಲ್, ಬನ್ನಿ ಮಂಟಪದ ಎಲ್‌ಐಸಿ ಸರ್ಕಲ್‌ವರೆಗಿನ ರಾಜ ಮಾರ್ಗದ ಫುಟ್‌ಪಾತ್ ದುರಸ್ತಿ, ಕಬ್ಬಿಣದ ಬ್ಯಾರಿಕೇಡ್ ಅಳವಡಿಸುವುದು ಸೇರಿದಂತೆ ಸಿವಿಲ್ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆದಿದ್ದಾರೆ.

ಈಗ ಅಂದಾಜು ತಯಾರಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ದಸರಾ ಉನ್ನತ ಮಟ್ಟದ ಸಮಿತಿ ಸಭೆ ನಂತರ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲು ಅಧಿಕಾರಿಗಳು ಪ್ರಕ್ರಿಯೆ ಕೈಗೊಂಡಿದ್ದಾರೆ. ಅದೇ ರೀತಿ ಶ್ವಾನ ಪ್ರದರ್ಶನ, ಯುವ ದಸರಾ, ಯುವ ಸಂಭ್ರಮ, ಆಹಾರ ಮೇಳ, ದಸರಾ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಸಂಬಂಧಪಟ್ಟ ಅಧಿಕಾರಿಗಳು ಅಂದಾಜು ತಯಾರಿಸಿ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿಗಳ ಅನುಮೋದನೆ ಪಡೆಯಲು ಸರ್ವ ರೀತಿ ಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ಈ ಬಾರಿ ವಿದ್ಯುದ್ದೀಪಾಲಂಕಾರವನ್ನು ವಿಭಿನ್ನವಾಗಿ ಮಾಡಲು ಮುಂದಾಗಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳು ಬೇರೆ ರಾಜ್ಯ ಮತ್ತು ದೇಶಗಳು ವಿಶೇಷ ಸಂದರ್ಭಗಳಲ್ಲಿ ಮಾಡುವ ದೀಪಾಲಂಕಾರದಂತೆ ದಸರಾ ಮಹೋತ್ಸವದಲ್ಲೂ ಮಾಡಲು ತಯಾರಿ ನಡೆಸುತ್ತಿದ್ದಾರೆ.

ಅತೀ ಮುಖ್ಯವಾಗಿ ರಸ್ತೆಗಳ ಗುಂಡಿ ಮುಚ್ಚುವುದು, ಡಾಂಬರೀಕರಣ, ಸರ್ಕಲ್‌ಗಳ ಸೌಂದರ್ಯೀಕರಣದಂತಹ ಸಿವಿಲ್ ಕಾಮಗಾರಿಗಳನ್ನು ಮುಂಚಿತವಾಗಿಯೇ ಆರಂಭಿಸಿ ಗುಣಮಟ್ಟ ಕಾಯ್ದುಕೊಳ್ಳುವ ಜೊತೆಗೆ ತರಾತುರಿ ಕೆಲಸ ತಪ್ಪಿಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಮೆಡಿಕಲ್,ಇಂಜಿನಿಯರಿಂಗ್ ಸೀಟುಗಳು ಏಕಕಾಲದಲ್ಲಿ ಹಂಚಿಕೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾಹಿತಿ

ಬೆಂಗಳೂರು, ಜು.25– ರಾಜ್ಯದಲ್ಲಿ ಸಿಇಟಿ ಹಾಗೂ ನೀಟ್ ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳಿಗೆ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಸೀಟುಗಳನ್ನು ಏಕಕಾಲದಲ್ಲಿ ಹಂಚಿಕೆ ಮಾಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಧಿಕೃತವಾಗಿ ಮಾಹಿತಿ ನೀಡಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಕೆಇಎ ತಿಳಿಸಿದೆ.

ರಾಷ್ಟ್ರಮಟ್ಟದಲ್ಲಿ ನೀಟ್ ಪರೀಕ್ಷೆ ಬರೆದು ಮೆಡಿಕಲ್ ಸೀಟಿಗಾಗಿ ಕಾಯುತ್ತಿರುವ ಅಭ್ಯರ್ಥಿಗಳಿಗೆ ಕೆಲವೆಡೆ ಪರೀಕ್ಷಾ ಅಕ್ರಮದಿಂದ ಉಂಟಾದ ಗೊಂದಲಗಳಿಂದ ಆತಂಕ ಸೃಷ್ಟಿಯಾಗಿದೆ. ನೀಟ್ ಫಲಿತಾಂಶದ ನಂತರ ಮೆಡಿಕಲ್ ಸೀಟು ಸಿಗುವ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಸೀಟು ಹಂಚಿಕೆ ಪ್ರಕ್ರಿಯೆಗೆ ಎದುರು ನೋಡುತ್ತಿದ್ದಾರೆ. ಆದರೆ, ಮೆಡಿಕಲ್ ಸೀಟು ಹಂಚಿಕೆಗೂ ಮುನ್ನವೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇಂಜಿನಿಯರಿಂಗ್ ಹಾಗೂ ಪಶು ವೈದ್ಯಕೀಯ ಕೋರ್ಸ್‌ಗಳ ಸೀಟು ಹಂಚಿಕೆ ಮಾಡುತ್ತದೆಯೋ ಎಂಬ ಆತಂಕ ಎದುರಿಸುತ್ತಿದ್ದಾರೆ. ಒಂದು ವೇಳೆ ಮೆಡಿಕಲ್ ಸೀಟಿಗಾಗಿ ರ‍್ಯಾಂಕ್ ಪಡೆಯದಿದ್ದು, ಎಂಜಿನಿಯರಿಂಗ್ ಸೀಟು ಆಯ್ದುಕೊಳ್ಳದಿದ್ದರೆ ಒಂದು ವರ್ಷದ ಭವಿಷ್ಯವೇ ಹಾಳಾಗಿ ಹೋಗಲಿದೆ ಎಂಬ ಆತಂಕದಲ್ಲಿದ್ದಾರೆ. ಇನ್ನು ಸಿಇಟಿ, ನೀಟ್ ಪರೀಕ್ಷೆ ಬರೆದು ರ‍್ಯಾಂಕಿಂಗ್ ಅನುಸಾರ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗೆ ಸೇರುವ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಭಯ ನೀಡಿದೆ. ಏಕಕಾಲದಲ್ಲಿಯೇ ಮೆಡಿಕಲ್, ಇಂಜಿನಿಯರಿಂಗ್ ಸೀಟು ಹಂಚಿಕೆ ಮಾಡುವುದಾಗಿ ತಿಳಿಸಿದೆ. ಇನ್ನು ಮೊದಲ ಸುತ್ತಿನ ಸೀಟು ಹಂಚಿಕೆಗೆ ಆದ್ಯತೆಗಳನ್ನು ದಾಖಲಿಸಲು ಎಂಜಿನಿಯರಿಂಗ್, ಪಶುವೈದ್ಯಕೀಯ ಇತ್ಯಾದಿ ಕೋರ್ಸ್‌ಗಳಿಗೆ ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗ ನೀಟ್ ಪರೀಕ್ಷೆಯ ಫಲಿತಾಂಶದ ಪಟ್ಟಿಯನ್ನು ಕೆಇಎಗೆ ಹಸ್ತಾಂತರಿಸಿದ ನಂತರ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಆದ್ಯತೆ ತಿಳಿಸಲಾಗುತ್ತದೆ. ಆದರೆ, ನೀಟ್‌ನಿಂದ ಮಾಹಿತಿ ತಡವಾಗುತ್ತಿರುವ ಕಾರಣ ಎಂಜಿನಿಯರಿಂಗ್ ಸೇರಿದಂತೆ ಇತರ ಕೋರ್ಸ್‌ಗಳ ಪ್ರವೇಶ ಸಂಬಂಧ ಆದ್ಯತೆಗಳನ್ನು ದಾಖಲಿಸಲು ಅವಕಾಶ ನೀಡಲಾಗಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕ ಪಡುವ ಅವಶ್ಯಕತೆ ಇಲ್ಲ. ಅಭ್ಯರ್ಥಿಗಳು ಪ್ರತಿನಿತ್ಯ ಕನಿಷ್ಠ ಎರಡು ಬಾರಿ ಕೆಇಎ ವೆಬ್‌ಸೈಟ್‌ಗೆ ಭೇಟಿ ಕೊಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿರ್ದೇಶಕ ಪ್ರಸನ್ನ ಮಾಹಿತಿ ನೀಡಿದ್ದಾರೆ.

ಕ್ಷುಲ್ಲಕ ವಿಚಾರಕ್ಕೆ ಜಗಳ; ಆತ್ಮಹತ್ಯೆಗೆ ಶರಣಾದ ಪ್ರೇಮಿಗಳು!



ಮೋನಿಕಾ



ಮನು

ಮೈಸೂರು, ಜು.25(ಎಸ್‌ಬಿಡಿ)– ಪ್ರೀತಿಸುತ್ತಿದ್ದ ಅತ್ತೆ ಮಗಳ ಆತ್ಮಹತ್ಯೆಯಿಂದ ಮನನೊಂದ ಯುವಕನೋರ್ವ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರಿನ ಮಂಡಕಳ್ಳಿಯ ನಿವಾಸಿ ನಾಗರಾಜು ಮತ್ತು ಮಂಜುಳಾ ದಂಪತಿ ಪುತ್ರಿ ಮೋನಿಕಾ(20) ಹಾಗೂ ಜ್ಯೋತಿ ನಗರ ಎಂಸಿಸಿ ಕಾಲೋನಿ ನಿವಾಸಿ ಮುರುಗೇಶ್ ಅವರ ಪುತ್ರ ಮನು(22) ಸಾವಿನಲ್ಲೂ ಒಂದಾದ ಪ್ರೇಮಿಗಳು.

ಮೋನಿಕಾ ತಾಯಿ ಮಂಜುಳಾ ಅವರು ಮನುವಿನ ತಂದೆ ಮುರುಗೇಶ್ ಅವರ ಸೋದರಿ. ಹಾಗಾಗಿ ಚಿಕ್ಕಂದಿನಿಂದಲೂ ಒಡನಾಟವಿದ್ದ ಮೋನಿಕಾ ಹಾಗೂ ಮನು ಕೆಲ ವರ್ಷಗಳಿಂದ ಪ್ರೀತಿಸುತ್ತಿದ್ದರು. ಈ ವಿಚಾರ ಎರಡು ಕುಟುಂಬಗಳಿಗೂ ತಿಳಿದಿತ್ತು. ಸಂಬಂಧಿಕರೇ ಆಗಿದ್ದರಿಂದ ಇವರ ಪ್ರೀತಿಗೆ ಯಾರಿಂದಲೂ ಆಕ್ಷೇಪ ವ್ಯಕ್ತವಾಗಿರಲಿಲ್ಲ. ಹಾಗಾಗಿ ಮನು ಮತ್ತು ಮೋನಿಕಾ ಮದುವೆಗೆ ಎಲ್ಲರೂ ಒಪ್ಪಿದ್ದರು. ಆದರೆ ವಿವಾಹವಾಗಿ ಸಂತೋಷದಿಂದ ಜೀವನ ನಡೆಸಬೇಕಿದ್ದ ಜೋಡಿ, ಕ್ಷುಲ್ಲಕ ಕಾರಣಕ್ಕೆ ಅಂತ್ಯ ಕಂಡಿದ್ದು ದುರ್ವಿಧಿ. ಮೋನಿಕಾ ದಟ್ಟಗಳ್ಳಿ ಬಡಾವಣೆಯ ಮನೆಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದರು. ಮನು, ನಗರ ಪಾಲಿಕೆ ತಾತ್ಕಾಲಿಕ ಸ್ವಚ್ಛತಾ ಕಾರ್ಮಿಕನಾಗಿದ್ದರು. ಖುಷಿಯಿಂದಲೇ ಇದ್ದ ಇಬ್ಬರ ನಡುವೆ ಬುಧವಾರ ರಾತ್ರಿ ಕ್ಷುಲ್ಲಕ ಕಾರಣಕ್ಕೆ ಸಣ್ಣ ಜಗಳವಾಗಿತ್ತು. ಇದರಿಂದ ಮನನೊಂದಿದ್ದ ಮೋನಿಕಾ ತಾನು ಕೆಲಸ ಮಾಡಿ ಕೊಂಡಿದ್ದ ಮನೆಯಲ್ಲೇ ನೇಣು ಹಾಕಿಕೊಂಡಿದ್ದರು. ಗುರುವಾರ ಬೆಳಗ್ಗೆ ಕೋಣೆಯಿಂದ ಮೋನಿಕಾ ಹೊರ ಬಾರದಿದ್ದಾಗ ಮನೆ ಮಾಲೀಕರು ಬಾಗಿಲು ಬಡಿದಿದ್ದಾರೆ. ಆದರೂ ಬಾಗಿಲು ತೆರೆಯದ ಕಾರಣ ಆಕೆಯ ಪೋಷಕರಿಗೆ ಮಾಹಿತಿ ನೀಡಿದ್ದಾರೆ.

ಮೋನಿಕಾಳನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆಕೆ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಅಷ್ಟರಲ್ಲಿ ಆಸ್ಪತ್ರೆಗೆ ಬಂದಿದ್ದ ಮನು, ವೈದ್ಯರು ಹೇಳಿದ್ದನ್ನು ಕೇಳಿ ತೀವ್ರವಾಗಿ ನೊಂದಿದ್ದಾನೆ. ಕೆಲಹೊತ್ತಿನ ಬಳಿಕ ತಮ್ಮ ಮನೆಗೆ ಹೋಗಿ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮೋನಿಕಾ ಸಾವಿನ ಸಂಬಂಧ ಕುವೆಂಪುನಗರ ಠಾಣೆ ಹಾಗೂ ಮನು ಸಾವಿನ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜ ಕ್ಷೇತ್ರದಲ್ಲಿ ಹೊಸ ಕಾಮಗಾರಿಗಳಿಗೆ ಅನುದಾನ ನೀಡಲು ಪರಿಶೀಲನೆ

ವಿಧಾನಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡರಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉತ್ತರ



ಮಹದೇವಪ್ಪ



ಕೆ.ಹರೀಶ್‌ಗೌಡ

ಮೈಸೂರು, ಜು.25–ಪರಿಶಿಷ್ಟ ಜಾತಿಯ ಕಾಲೋನಿಗಳ ಅಭಿವೃದ್ಧಿಗಾಗಿ ಹಾಗೂ ಮುಂದುವರಿದ ಕಾಮಗಾರಿಗಳಿಗೆ ಜಿಲ್ಲಾವಾರು ಅನುದಾನ ಬಿಡುಗಡೆಗೊಳಿಸಿರುವ ಬಗ್ಗೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ವಿಧಾನಸಭಾ ಅಧಿವೇಶನದಲ್ಲಿ ಪ್ರಶ್ನಿಸಿದ್ದಾರೆ.

ಪ್ರಗತಿ ಕಾಲೋನಿ ಯೋಜನೆಯ ಅನುಷ್ಠಾನಕ್ಕಾಗಿ ನಿಗದಿಪಡಿಸುವ ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ಮತ್ತು ಬಾಕಿ ಅನುದಾನ ಬಿಡುಗಡೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳನ್ವಯ ಜಿಲ್ಲೆಗಳಿಗೆ ಅರ್ಹ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು ಎಂದು ಹರೀಶ್‌ಗೌಡ ಅವರ ಪ್ರಶ್ನೆಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉತ್ತರಿಸಿದರು.

ಅಲ್ಲದೇ ಮುಂದುವರೆದ ಕಾಮಗಾರಿಗಳಿಗೆ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಅನುದಾನದಲ್ಲಿ ಹೊಸ ಕಾಮಗಾರಿಗಳಿಗೆ ಅನುದಾನ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಹೊಸ ಕಾಮಗಾರಿಗಳಿಗೆ ಅನುದಾನ ನೀಡಲು ಪರಿಶೀಲಿಸಲಾಗುವುದು. ಅಲ್ಲದೇ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಾನಾ ಕಾಮಗಾರಿಗಳು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಬಂಜಾರ ಸಮುದಾಯ ಅಭಿವೃದ್ಧಿ ನಿಗಮ, ಸಫಾಯಿ ಕರ್ಮಚಾರಿಗಳ ಆಯೋಗ ಸೇರಿದಂತೆ ನಾನಾ ನಿಗಮಗಳು, ನಾನಾ ಯೋಜನೆ ಸೇರಿದಂತೆ ಒಟ್ಟು ಕಾರ್ಯಚಟುವಟಿಕೆಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದಲ್ಲದೇ ಕೂಡಲೇ ಎಲ್ಲಾ ಚಟುವಟಿಕೆಗಳಿಗೆ ಅನುದಾನ ನೀಡಿ ಕೆಲಸ ಪೂರ್ಣಗೊಳಿಸಲು ಕ್ರಮವಹಿಸಲಾಗುವುದೆಂದರು.

ನಾಳೆ ಚಂಡಿಕಾ ಹೋಮ

ಮೈಸುರು, ಜು.25–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜು.27ರ ಶನಿವಾರ ರೇವತಿ ನಕ್ಷತ್ರದಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಜನ್ಮ ದಿನೋತ್ಸವದ ಅಂಗವಾಗಿ ಶ್ರೀ ಬಾಲಾತ್ರಿಪುರ ಸುಂದರಿ ಹಾಗೂ ಶ್ರೀ ಚಕ್ರಾಂಕಿತೆ ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮೀ ದಿವ್ಯ ಸಾನ್ನಿಧ್ಯದಲ್ಲಿ ಚಂಡಿಕಾ ಹೋಮ ಲೋಕೇಶ್ ಭಟ್ ಮತ್ತು ಸಂಗಡಿಗರಿಂದ ನೆರವೇರಲ್ಪಡುತ್ತದೆ. ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಚೇತನ್ ಶರ್ಮಾ (ಮೊ.919945161304) ಅವರನ್ನು ಸಂಪರ್ಕಿಸಬಹುದು.

'ಮಿಸ್ಟಿಕ್ ಬಾಂಡ್'ಗೆ 'ಮೈಸೂರ್ ಟ್ರೋಫಿ'



ಮೈಸೂರು ರೇಸ್ ಕ್ಲಬ್(ಎಂಆರ್‌ಸಿ)ನಲ್ಲಿ ಬುಧವಾರ ನಡೆದ ರೇಸ್‌ನಲ್ಲಿ ಪ್ರಮುಖ ರೇಸ್‌ನ ವಿಜೇತ ಕುದುರೆ 'ಮಿಸ್ಟಿಕ್ ಬಾಂಡ್' ಮಾಲೀಕರಾದ ಪಿ.ಎಂ. ನಾಣಯ್ಯ ಅವರಿಗೆ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ದಿ ಮೈಸೂರು ಟ್ರೋಫಿ–1 ವಿತರಿಸಿದರು. ಎಂಆರ್‌ಸಿ ಛೇರ್ಮನ್, ಸ್ಟೀವರ್ಡ್‌ಗಳು, ಕಮಿಟಿ ಸದಸ್ಯರು, ವಿಜೇತ ಕುದುರೆ ತರಬೇತುದಾರ ಎಂ.ಪ್ರತಾಪ್ ಕಾಮತ್, ಇದರ ಜಾಕಿ ಟಿ. ಪವನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಕೆ.ಆರ್.ಪೇಟೆ ನಿವಾಸಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.25– ನಗರದಲ್ಲಿ ವಾಸವಾಗಿರುವ ಕೆ.ಆರ್.ಪೇಟೆ ತಾಲೂಕಿನ ನಿವಾಸಿಗಳ ಮಕ್ಕಳು ಪ್ರಸಕ್ತ ವರ್ಷ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದವರಿಗೆ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಭಾನ್ವಿತರನ್ನು ಜು.27 (ಶನಿವಾರ)ರಂದು ಮೈಸೂರು ಲಕ್ಷ್ಮೀಕಾಂತನಗರದ ಆದಿಚುಂಚನಗಿರಿ ಶಾಖಾ ಮಠದಲ್ಲಿ ಮೈಸೂರಿನ ಕೆ.ಆರ್.ಪೇಟೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಸನ್ಮಾನಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ.ನಂ. 84948–42389 ಅಥವಾ 99001–31477 ಇವರನ್ನು ಸಂಪರ್ಕಿಸುವುದು.

ನಿಧನ



ಡಾ.ಬಿ.ಚೆನ್ನಮಲ್ಲದೇವರು

ಮೈಸೂರು,ಜು.25– ಕುವೆಂಪುನಗರ ನಿವಾಸಿ ಮತ್ತು ಮೈಸೂರಿನ ಎಸ್‌ಜೆಸಿಇ ಕಾಲೇಜಿನ ನಿವೃತ್ತ ಸಹ ಪ್ರಾಧ್ಯಾಪಕ ಡಾ.ಬಿ.ಚೆನ್ನಮಲ್ಲದೇವರು (77) ವಯೋಸಹಜ ಅನಾರೋಗ್ಯದಿಂದ ಗುರುವಾರ ನಿಧನರಾದರು.


ಮೃತರು ಪತ್ನಿ ರೇವಮ್ಮ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಸ್ವಗ್ರಾಮವಾದ ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯ ಬಸವನಹಳ್ಳಿಯಲ್ಲಿ ಅವರ ಸ್ವಂತ ಜಮೀನಿನಲ್ಲಿ ಜು.26ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.



ಅಂಬಿಕಾ

ಮೈಸೂರು, ಜು.25–ಮೈಸೂರು ಅಗ್ರಹಾರ ಬಿ.ಬಿ.ಗಾರ್ಡನ್ ವಾಸಿ, ಶ್ರೀ ಗಣೇಶ್ ಕಾಂಡಿಮೆಂಟ್ಸ್ ಕಾರ–ತಿಂಡಿ ಮಾಲೀಕರಾದ ಶಿವಕುಮಾರ್ ಧರ್ಮಪತ್ನಿ ಅಂಬಿಕಾ (ಬೇಬಿ) ಅವರು ಇಂದು ಸಂಜೆ ನಿಧನರಾದರು. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಇವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12ಕ್ಕೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.07.2024 ಶುಕ್ರವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ :** ಕಾರ್ಗಿಲ್ ವಿಜಯ್ ದಿವಸ್ ಆಚರಣೆ, ಮುಖ್ಯ ಅತಿಥಿಗಳು : ಮುಡಾ ಅಧ್ಯಕ್ಷ ಕೆ. ಮರೀಗೌಡ, ಮೈಸೂರು ಉತ್ತರ ರೋಟರಿ ಸಮುದಾಯ ಸಂಘದ ಅಧ್ಯಕ್ಷ ನಾಗೇಶ್, ಉಪಸ್ಥಿತರು : ಸಂಘದ ಅಧ್ಯಕ್ಷ ಪಿ.ಕೆ. ಬಿದ್ದಪ್ಪ, ಉಪಾಧ್ಯಕ್ಷ ನರಸೇಗೌಡ, ಕಾರ್ಯದರ್ಶಿ ಎಸ್.ಆರ್. ರವಿಕುಮಾರ್, ಖಜಾಂಚಿ ಬಿ.ಎಂ. ಗೋಪಾಲ್, ಸಹ ಕಾರ್ಯದರ್ಶಿ ಕೆ.ಎಸ್. ಸುರೇಶ್, ಸ್ಥಳ: ಮೆಟ್ರೋಪೋಲ್ ಸರ್ಕಲ್, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಪುತ್ಥಳಿ ಮುಂಭಾಗ, ಬೆಳಗ್ಗೆ 8.30 ರಿಂದ.

■ **ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕ :** ಕಾರ್ಗಿಲ್ ವಿಜಯ ದಿವಸದ ರಜತ ಮಹೋತ್ಸವದ ಪ್ರಯುಕ್ತ ಬೈಕ್ ರ‍್ಯಾಲಿ, ಬೆಳಗ್ಗೆ 9ಕ್ಕೆ ಮೆಟ್ರೊಪೋಲ್ ವೃತ್ತದಿಂದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದವರೆಗೆ, ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ, ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆ ಮತ್ತು ಚರ್ಮರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಸೈನೊಸೈಟಿಸ್, ತಲೆನೋವಿಗೆ ಉಚಿತ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ ಸಂಜೆ 4ರವರೆಗೆ.

■ **ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ :** ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗ್ಯಾಸ್ಟ್ರೋ ಓಪಿಡಿ ಕೊಠಡಿ ಸಂಖ್ಯೆ 10, ಬೆಳಗ್ಗೆ 10 ರಿಂದ.

■ **ಸಿರಿಕ್ಯಾರಿ ಐವಿಎಫ್ ಸೆಂಟರ್ :** ವಿಶ್ವ ಐವಿಎಫ್ ದಿನದ ಪ್ರಯುಕ್ತ ಉಚಿತ ಐವಿಎಫ್ ಶಿಬಿರ, ಸ್ಥಳ: ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಯ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಉದ್ಘಾಟನೆ : ಪ್ರಾಕ್ಟಿಸಿಂಗ್ ಚಾರ್ಟರ್ಡ್ ಅಕೌಂಟೆಂಟ್ ಎಸ್.ಡಿ. ದಿಲೀಪ್ ಅಡಿಗ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಮಸ್ವಾಮಿ, ಉಪಸ್ಥಿತರು : ಪ್ರಾಂಶುಪಾಲ ಡಾ. ಅನಿಲ್ ಎಸ್. ಕರಭೀಮಗೋಳ, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಶ್ರೀರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ:** ಕಾರ್ಗಿಲ್ ವಿಜಯ್ ದಿವಸ್ –2024 ರಜತೋತ್ಸವ ವರ್ಷ, ಅಧ್ಯಕ್ಷತೆ : ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಮುಖ್ಯ ಅತಿಥಿಗಳು: ಸೀನಿಯರ್ ನಾನ್ ಕಮೀಷನ್ಡ್ ಆಫೀಸರ್ ಆರ್.ಶ್ವೇತಾದ್ರಿ, ಉಪಸ್ಥಿತರು : ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಜಿ. ಚಂದ್ರಶೇಖರ್, ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್, ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ. ಹೆಗಡೆ, ಸ್ಥಳ: ಶಾರದಾ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಉದ್ಘಾಟನೆ, ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ, ಉದ್ಘಾಟನೆ : ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಂ. ಮರಿಸ್ವಾಮಿ, ಅಧ್ಯಕ್ಷತೆ : ವಿಶ್ರಾಂತ ಕುಲಪತಿ ಪ್ರೊ. ಜೆ. ಶಶಿಧರ ಪ್ರಸಾದ್, ಮುಖ್ಯ ಅತಿಥಿಗಳು : ಪ್ರಾಂಶುಪಾಲ ಟಿ.ಸಿ. ಸುದೀಪ್, ಕಾರ್ಯದರ್ಶಿ ಶಿವಸುಂದರ ಸತ್ಯೇಂದ್ರ, ಜಿ. ರಮೇಶ್, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ವಿವೇಕಾನಂದ ಪದವಿಪೂರ್ವ ಕಾಲೇಜು, ಬೆಳಗ್ಗೆ 11ಕ್ಕೆ.

■ **ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ :** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವ, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, ಬೆಳಗ್ಗೆ 8.30ಕ್ಕೆ ಶ್ರೀ ದುರ್ಗಾ ಹೋಮ, ಬೆಳಗ್ಗೆ 11.30ಕ್ಕೆ ಹೋಮ ಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಬ್ರಾಹ್ಮೀ (ಹಂಸವಾಹಿನಿ), ವಿದ್ವಾನ್ ಸುಮುಖ ಚಂದ್ರ ಮತ್ತು ರೂಪನಗುಡಿ ರತ್ನ ತೇಜ ವೃಂದದವರಿಂದ ದ್ವಂದ್ವ ಪಿಟೀಲು ವಾದನ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು, ಶ್ರೀ ಪ್ರಣಮ್ಯ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ :** ಕಾರ್ಗಿಲ್ ವಿಜಯ ದಿವಸ್, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಆಡಳಿತ ತರಬೇತುದಾರ ಕರ್ನಲ್ ರವಿ (ನಿವೃತ್ತ), ಕೆನರಾ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಕೆ.ಎಸ್. ಸುಂದರಮ್, ಉಪಸ್ಥಿತರು : ರಾಮಕೃಷ್ಣ ವಿದ್ಯಾಕೇಂದ್ರದ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಜಿ. ಚಂದ್ರಶೇಖರ್, ಪ್ರಾಂಶುಪಾಲರಾದ ಸಿ. ಶಿವಪ್ಪ, ಶ್ರೀಮತಿ ವಿ.ಪಿ. ಸವಿತಾ, ಸ್ಥಳ: ಶಾರದಾ ಸಭಾಂಗಣ, ಮಧ್ಯಾಹ್ನ 3ಕ್ಕೆ.


■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಗುರು ಪೂರ್ಣಿಮೆ. ಸಾಧನಾ ಸಪ್ತಾಹ ಹಾಗೂ ಆರಾಧನಾ ಕಾರ್ಯಕ್ರಮ. ಚಿನ್ಮಯ ಮಿಷನ್‌ನ ಗುರುಸರ್ವಸ್ವ ಪೂಜ್ಯ ಸ್ವಾಮಿನಿ ಕಾಶಿಕಾನಂದ ಅವರಿಂದ ಪ್ರವಚನ. ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ. ಸಂಜೆ: 6.30ರಿಂದ 7.30ರವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶತಚಂಡೀ ಯಾಗ ಪ್ರಾರಂಭ, ಆಷಾಢ ಮಾಸ ಪ್ರಯುಕ್ತ ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ಮತ್ತು ಶ್ರೀ ರಾಜರಾಜೇಶ್ವರಿ ದೇವಿಗೆ ಅರ್ಚನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಎ.ಎಸ್. ನಟರಾಜ್‌ರವರ ಶಿಷ್ಯ ವೃಂದ :** ಎ.ಎಸ್. ನಟರಾಜ್‌ರವರ ವೃತ್ತಿ ಬದುಕಿನ ಸಾಧನೆಯ ಸುವರ್ಣ ಸಂಭ್ರಮ ಮತ್ತು ಗುರುವಂದನೆ, ಅಧ್ಯಕ್ಷತೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಗುರುವಂದನಾ ಭಾಜಕರು: ಹಿರಿಯ ವಕೀಲ ಎ.ಎಸ್. ನಟರಾಜ್, ಸ್ಥಳ: ಸಾ.ರಾ. ಕನ್ವೆನ್ಷನ್ ಹಾಲ್, ದಟ್ಟಗಳ್ಳಿ, ಸಂಜೆ 6.30 ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ತಿಮ್ಮಯ್ಯ. ಕೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬಣ್ಣದ ಬಾನಾಡಿಗಳು'–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರೊ.ಪ್ರವೀಣ್ ಕೆ.ಬಿ., ಕುಲಸಚಿವರು, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 "KABHI"-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಕರ್ನಾಟಕ ಮೆದುಳು ಆರೋಗ್ಯ ಪ್ರಾಧಿಕಾರ, ಬೆಂಗಳೂರು, 9.00 ನಮ್ಮ ಆರೋಗ್ಯ: ನ್ಯಾಷನಲ್ ಬೇಸಿಕ್ ಲೈಫ್ ಸಪೋರ್ಟ್ ಅಂಡ್ ಸಿ.ಪಿ.ಆರ್.ಡೇ ಕುರಿತು ಮಾಹಿತಿ ನೀಡಲಿದ್ದಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಕರ್ನಾಟಕ ಶಾಖೆಯ ಕಾರ್ಯದರ್ಶಿ ಡಾ.ಶಶಿಕಿರಣ್. ಕೆ.ಬಿ ಮತ್ತು ಮಕ್ಕಳ ತುರ್ತು ಚಿಕಿತ್ಸಾ ತಜ್ಞರಾದ ಡಾ.ಯಶವಂತ್ ರಾಜು. ಎಚ್.ಎನ್., ಓಆರ್‌ಎಸ್ ಸಪ್ತಾಹದ ಸಂದರ್ಭದಲ್ಲಿ ಓಆರ್‌ಎಸ್‌ನ ಮಹತ್ವ ಕುರಿತು ಮಾಹಿತಿ ನೀಡಲಿದ್ದಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಕರ್ನಾಟಕ ಶಾಖೆಯ ಕಾರ್ಯದರ್ಶಿ ಡಾ.ಶಶಿಕಿರಣ್ ಕೆ.ಬಿ. ಮತ್ತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ.ಎಂ.ಆರ್.ಸವಿತಾ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರೊ.ಆರ್.ವಿಶ್ವೇಶ್ವರನ್–ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್.ಶಿವಶಂಕರಸ್ವಾಮಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು–ಅನಿತಾ ಆನಂದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಾದ್ಯವೃಂದ–ತಿರುವಾರೂರು ಭಕ್ತವತ್ಸಲಂ, 4.00 ಮಹಿಳಾರಂಗ–ಸಖೀ ಸಾಹಿತ್ಯ, ಭಾಗವಹಿಸುವವರು : 'ಮುದ್ದು ಮಗಳೇ ಮತ್ತೆ ಹುಟ್ಟಿ ಬಾ' ಕೃತಿಯ ಲೇಖಕಿ ಶ್ರೀಮತಿ ಲತಾ ಶ್ರೀನಿವಾಸ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ : ಅಬ್ದುಲ್ ರಶೀದ್, 4.30 ವೃತ್ತಿ ಮಾರ್ಗದರ್ಶನ : 'ಪಶು ಸಂಗೋಪನೆ ಡಿಪ್ಲೊಮಾ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕು ಬರಗಿಯಲ್ಲಿರುವ ಸರ್ಕಾರಿ ಪಶುಸಂಗೋಪನಾ ಡಿಪ್ಲೊಮಾ ಕಾಲೇಜಿನ ಪ್ರಾಂಶುಪಾಲರಾದ ಡಾ.ರವಿಕುಮಾರ್. ಸಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜು ನಾಥ್, 6.50 ಕೃಷಿರಂಗ–ತರಕಾರಿ ಬೇಸಾಯ: ಈ ಕುರಿತು ಮೈಸೂರು ತಾಲೂಕು ಕಸಬಾ ಹೋಬಳಿ ದುದ್ದಗೆರೆ ಗ್ರಾಮದ ನಾಗರಾಜ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ತಿನ ಉಭಯ ಕಲಾಪಗಳ ಸಮೀಕ್ಷೆ, 8.15 ಸಂಧ್ಯಾರಾಗ: ನಿವೃತ್ತ ಪ್ರಾಂಶುಪಾಲರು ಹಾಗೂ ಮೈಸೂರಿನ ಆರ್.ಐ.ಟಿ–ಎನ್.ಸಿ.ಇ.ಆರ್.ಟಿ ಯ ಭೌತಶಾಸ್ತ್ರ ಪ್ರಾಧ್ಯಾಪಕರಾದ ಡಾ.ಎಸ್. ಎನ್. ಪ್ರಸಾದ್ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ: ಜಿ.ಶಾಂತಕುಮಾರ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ರಾಮಯ್ಯ –ಮೃದಂಗ, 10.00 ಹಳ್ಳಿ ಹಾಡು, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 26 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 101 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಡಾ ನಿವೇಶನಗಳ ಹಂಚಿಕೆ ಹಗರಣ; ಉಭಯ ಸದನಗಳಲ್ಲಿ ಹೋರಾಟದ ನಂತರ ಬೀದಿಗಿಳಿಯಲಿರುವ ಬಿಜೆಪಿ, ಜೆಡಿಎಸ್

ಮೈಸೂರು ಪಾದಯಾತ್ರೆಗೆ ನಿರ್ಧಾರ

● ಭಾನುವಾರ ಉಭಯ ಪಕ್ಷಗಳ ನಾಯಕರ ಸಭೆಯಲ್ಲಿ ದಿನಾಂಕ ನಿಗದಿ ● ಸದನದಲ್ಲಿ ಚರ್ಚೆಗೆ ಅವಕಾಶ ಕಲ್ಪಿಸದಕ್ಕೆ ಅಹೋರಾತ್ರಿ ಧರಣಿ ನಡೆಸಿದ್ದವು ● ಗುರುವಾರವೂ ವಿಧಾನಮಂಡಲ ಉಭಯ ಸದನಗಳಲ್ಲಿ ಈ ವಿಚಾರವಾಗಿ ಗದ್ದಲ ● ಪಾದಯಾತ್ರೆ ವೇಳೆ ರಾಮನಗರ, ಮಂಡ್ಯದಲ್ಲಿ ಬೃಹತ್ ಸಮಾವೇಶ; ಇತರ ಕಡೆಗಳಲ್ಲಿ ಕಿರು ಸಭೆ

ಬೆಂಗಳೂರು, ಜು.25(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಇತ್ತೀಚಿಗೆ ನಡೆದ ಬಿಡಿ ನಿವೇಶನಗಳ ಹಂಚಿಕೆ ಹಗರಣದ ಚರ್ಚೆಗೆ ಸರ್ಕಾರ ಅವಕಾಶ ನೀಡಲಿಲ್ಲವೆಂದು ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸದನದ ಹೋರಾಟವನ್ನು ಬೀದಿಯಲ್ಲಿ ಮುಂದುವರೆಸಲಿದ್ದಾರೆ.

ವಿಧಾನಮಂಡಲದಲ್ಲಿ ಚರ್ಚೆಗೆ ಅವಕಾಶ ನೀಡಲಿಲ್ಲವೆಂದು ಅಹೋರಾತ್ರಿ ಧರಣಿ ನಡೆಸಿದ ಉಭಯ ಪಕ್ಷಗಳ ಸದಸ್ಯರು ಸರ್ಕಾರದ ನಿಲುವು ವಿರೋಧಿಸಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಮೈಸೂರಿಗೆ ಪಾದಯಾತ್ರೆ ಕೈಗೊಳ್ಳಲಿದ್ದಾರೆ. ಬೆಂಗಳೂರಿನಿಂದ ಮೈಸೂರಿನವರೆಗೂ ಪಾದಯಾತ್ರೆ ನಡೆಸುವುದಲ್ಲದೆ, ಎರಡು ನಗರಗಳ ನಡುವಿನ ಹಳ್ಳಿಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಜನರ ಮುಂದಿಡುವ ತೀರ್ಮಾನ ಕೈಗೊಂಡಿದ್ದಾರೆ. ಪಾದಯಾತ್ರೆ



ಮೈಸೂರು ತಲುಪಿದ ನಂತರ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಮುತ್ತಿಗೆ ಕಾರ್ಯ ಹಮ್ಮಿಕೊಳ್ಳುವ ನಿರ್ಧಾರ ಮಾಡಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ಉಪನಾಯಕಿ ಶಾರದಾ ಪೂರ್‍ಯಾನಾಯ್ಕ ಅಧ್ಯಕ್ಷತೆಯಲ್ಲಿ ಉಭಯ ಪಕ್ಷದ ಶಾಸಕರು ಸಭೆ ಸೇರಿ ಮುಡಾ ಹಗರಣವನ್ನು ತಾರಕಕ್ಕೆ ತೆಗೆದುಕೊಂಡು ಹೋಗಲು ನಿರ್ಧರಿಸಿದ್ದಾರೆ. ಮೈಸೂರಿಗೆ ಪಾದಯಾತ್ರೆ ಎಂದಿನಿಂದ, ಯಾರ ನಾಯಕತ್ವದಲ್ಲಿ ನಡೆಯಬೇಕೆಂಬ ಬಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಜೊತೆ ಬರುವ ಭಾನುವಾರ ಸಮಾಲೋಚಿಸಿ, ದಿನಾಂಕ ನಿರ್ಧರಿಸಲಾಗುವುದು. ಇಂದಿನ ಸಭೆಯಲ್ಲಿ ಜುಲೈ 29(ಸೋಮವಾರ)ರಿಂದಲೇ ಪಾದಯಾತ್ರೆ ಪ್ರಾರಂಭಿಸಲು ತೀರ್ಮಾನಿಸಲಾಗಿದೆಯಾದರೂ ಅಂತಿಮ ನಿರ್ಧಾರ ಭಾನುವಾರ ಹೊರಬೀಳಲಿದೆ.

ಬೆಂಗಳೂರು–ಮೈಸೂರು ನಡುವಿನ ಅಂತರವನ್ನು ಆರೇಳು ದಿನದಲ್ಲಿ ಕ್ರಮಿಸುವ ಬಗ್ಗೆ ಚರ್ಚೆಯಾಗಿದೆ.

ಈ ಪಾದಯಾತ್ರೆಯಲ್ಲಿ ಯಾವ ಶಾಸಕರು, ಯಾವ ಭಾಗದಲ್ಲಿ ಸೇರ್ಪಡೆಗೊಳ್ಳಬೇಕೆಂಬ ಕುರಿತು ಉಭಯ ಪಕ್ಷಗಳ ನಾಯಕರು ಪಟ್ಟಿ ಸಿದ್ಧಪಡಿಸಲಿದ್ದಾರೆ. ಪಾದಯಾತ್ರೆಯುದ್ದಕ್ಕೂ ಬರುವ ಪಟ್ಟಣಗಳಲ್ಲಿ ಕಿರುಸಭೆಗಳನ್ನೂ, ರಾಮನಗರ ಮತ್ತು ಮಂಡ್ಯದಲ್ಲಿ ಬೃಹತ್ ಸಮಾವೇಶ ನಡೆಸುವ ಕುರಿತು ಪ್ರಾಥಮಿಕ ಚರ್ಚೆಯಾಗಿದೆ. ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿದ್ದಾಗ ಗಣಿ ಧಣಿಗಳ ವಿರುದ್ಧ ತೊಡೆ ತಟ್ಟಿ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಿದ್ದರು.

■ 6ನೇ ಪುಟಕ್ಕೆ

ಚರ್ಚೆಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಧರಣಿ; ಉಭಯ ಸದನ ಅನಿರ್ದಿಷ್ಟಾವಧಿಗೆ ಮುಂದೂಡಿಕೆ



ಬೆಂಗಳೂರು, ಜು.25(ಕೆಎಂಶಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಹಗರಣ ವಿಧಾನ ಮಂಡಲದ ಕಲಾಪವನ್ನೇ ನುಂಗಿ ಹಾಕಿದ್ದಲ್ಲದೆ, ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲು ಕಾರಣವಾಯಿತು.

ವೇಳಾಪಟ್ಟಿಯಂತೆ ಕಲಾಪ ಶುಕ್ರವಾರಕ್ಕೆ (ಜುಲೈ 26) ಅಂತ್ಯಗೊಳ್ಳಬೇಕಿತ್ತು, ಆದರೆ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ಕೋರಿ ಮಾಡಿದ ಒತ್ತಡಕ್ಕೆ ಸರ್ಕಾರ ಮಣಿಯದಿದ್ದಾಗ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಧರಣಿಯನ್ನು ಇಂದೂ ಮುಂದುವರೆಸಿದರು. ಪ್ರತಿಪಕ್ಷಗಳ ಗದ್ದಲ, ಧರಣಿ ನಡುವೆ ಕೇಂದ್ರ ಸರ್ಕಾರದ ವಿರುದ್ಧ ಮೂರು ನಿರ್ಣಯಗಳೂ ಸೇರಿದಂತೆ ಕೆಲವು ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು. ಮಸೂದೆಗಳು ಮಂಡನೆಯಾಗುತ್ತಿದ್ದಂತೆ ವಿಧಾನಮಂಡಲದ ಉಭಯ ಸದನಗಳ, ಸಭಾಧ್ಯಕ್ಷ ಮತ್ತು ಸಭಾಪತಿ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಿದರು. ಎರಡನೇ ಬಾರಿಗೆ ಸದನ ಸೇರಿದಾಗಲೂ ಪ್ರತಿಪಕ್ಷಗಳು ತಮ್ಮ ಪಟ್ಟು ಬಿಡಲಿಲ್ಲ. ಸರ್ಕಾರ ತನ್ನ ನಿಲುವಿನಿಂದ ಹಿಂದೆ ಸರಿಯಲಿಲ್ಲ. ಉಭಯ ಸದನಗಳಲ್ಲಿ ಪೀಠಾಸೀನಾಧಿಕಾರಿಗಳ ಮನವಿಗೆ ಪ್ರತಿಪಕ್ಷ ಸದಸ್ಯರು ಸ್ಪಂದಿಸದೆ ಧರಣಿ ಮುಂದುವರೆಸಿ, ಸಿಎಂ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು. ಇದರ ನಡುವೆ ವಿಧಾನಸಭೆಯಲ್ಲಿ ಸಭಾಧ್ಯಕ್ಷರು, ವಿಧಾನಪರಿಷತ್‌ನಲ್ಲಿ ಮಸೂದೆಗಳ ಅಂಗೀಕಾರ ಟಿಪ್ಪಣಿ ಪ್ರಕಟಿಸಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಬಿಜೆಪಿ, ಕುಮಾರಸ್ವಾಮಿ ಕಾಲದ ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಆಗ್ರಹಿಸಿ

ನಾವು ಮೈಸೂರಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡ್ತೇವೆ...


ಎಂ.ಲಕ್ಷ್ಮಣ್

ಮೈಸೂರು,ಜು.25(ಎಂಟಿವೈ)– ಮುಡಾ ಹಗರಣದ ಬಗ್ಗೆ ಬಿಜೆಪಿಯವರು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಮಾಡಿದರೆ ಅದೇ ದಿನ ಬಿಜೆಪಿ ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವಧಿಯಲ್ಲಿ ನಡೆದಿರುವ 20 ಪ್ರಮುಖ ಭ್ರಷ್ಟಾಚಾರ ಪ್ರಕರಣದ ತನಿಖೆಯನ್ನು ನಡೆಸುವಂತೆ ಒತ್ತಾಯಿಸಿ ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡುವುದಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಎಚ್ಚರಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿ–ಜೆಡಿಎಸ್ ಅವಧಿಯಲ್ಲಿಯೇ ಮೈಸೂರು ಮುಡಾದಲ್ಲಿ ಹೆಚ್ಚಿನ ಭ್ರಷ್ಟಾಚಾರ ನಡೆದಿದೆ. ಆದರೆ ಬಿಜೆಪಿಯವರು ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಿದ್ಧರಾಮಯ್ಯ ಅವರು 3–4 ಸಾವಿರ ಕೋಟಿ ಭ್ರಷ್ಟಾಚಾರ ಮಾಡಿದ್ದಾರೆ ಎಂದು ಸುಳ್ಳು ಆರೋಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಭ್ರಷ್ಟಾಚಾರ ಮಾಡಿದ್ದರೆ ದಾಖಲೆ ಬಿಡುಗಡೆ ಮಾಡಲಿ. ಅದು ಬಿಟ್ಟು ನಾಲಿಗೆಗೆ ಮೂಳೆ ಇಲ್ಲ ಎಂದು ಸುಳ್ಳು ಆರೋಪ ಮಾಡುವುದಲ್ಲ ಎಂದು ಕಿಡಿಕಾರಿದರು. ಮುಡಾ ಹಗರಣಕ್ಕೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಏನೂ ಸಂಬಂಧವಿಲ್ಲ ಅವರ ಕುಟುಂಬದ 3.16 ಎಕರೆ ಜಮೀನನ್ನು ಮುಡಾದವರು ಅಕ್ರಮವಾಗಿ ವಶಪಡಿಸಿಕೊಂಡು ಸೈಟ್‌ಗಳನ್ನು ಹಂಚಿಕೆ ಮಾಡಿದ್ದಾರೆ. ಅದಕ್ಕೆ ಪರ್ಯಾಯವಾಗಿ ಬದಲಿ 14 ನಿವೇಶನಗಳನ್ನು ನೀಡಿದ್ದಾರೆ. ಇದರಲ್ಲಿ ತಪ್ಪೇನಿದೆ. ಸಿದ್ದರಾಮಯ್ಯ ಕುಟುಂಬ ದಾಖಲೆ ಕೊಟ್ಟು

■ 6ನೇ ಪುಟಕ್ಕೆ

ಒಂದು ರಾಷ್ಟ್ರ ಒಂದು ಚುನಾವಣೆ, ಕ್ಷೇತ್ರ ಪುನರ್ವಿಂಗಡಣೆಗೆ ವಿರೋಧ; ಸಿಇಟಿ ಮೂಲಕ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ನಿರ್ಣಯಗಳಿಗೆ

ವಿಧಾನಸಭೆಯಲ್ಲಿ ಅಂಗೀಕಾರ

ಬಿಜೆಪಿ–ಜೆಡಿಎಸ್ ಧರಣಿ ನಡುವೆಯೂ ನಿರ್ಧಾರ


ಹೆಚ್.ಕೆ.ಪಾಟೀಲ್

ಬೆಂಗಳೂರು, ಜು.25(ಕೆಎಂಶಿ)–'ಒಂದು ರಾಷ್ಟ್ರ ಒಂದು ಚುನಾವಣೆ' ವ್ಯವಸ್ಥೆ, 2026ಕ್ಕೆ ಕೇಂದ್ರದ ಉದ್ದೇಶಿತ ಲೋಕಸಭೆ, ವಿಧಾನಸಭೆ ಕ್ಷೇತ್ರಗಳ ಪುನರ್ ವಿಂಗಡಣೆಗೆ ವಿರೋಧ ಹಾಗೂ ನೀಟ್ ರದ್ದುಗೊಳಿಸಿ, ಸಿಇಟಿ ಮೂಲಕ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶಾವಕಾಶ ಕಲ್ಪಿಸುವ ನಿರ್ಣಯವನ್ನು, ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಪ್ರತಿಭಟನೆ ನಡುವೆಯೂ ವಿಧಾನಸಭೆಯಲ್ಲಿಂದು ಅಂಗೀಕರಿಸಲಾಯಿತು.

ಬಿಜೆಪಿ ಮತ್ತು ಜೆಡಿಎಸ್ ಶಾಸಕರು, ಮೈಸೂರಿನ ಮುಡಾದಲ್ಲಿನ ನಿವೇಶನ ಹಂಚಿಕೆ ಹಗರಣ ಕುರಿತ ಚರ್ಚೆಗೆ ಒತ್ತಾಯಿಸಿ ಧರಣಿ ನಡೆಸುತ್ತಿದ್ದ ವೇಳೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್, ಪ್ರಸ್ತಾಪಗಳನ್ನು ಮಂಡಿಸಿದರು. ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ, ಭಾರತೀಯ ಸಂವಿಧಾನ ಭಾಗ 7ರಲ್ಲಿ ಪ್ರತಿಪಾದಿಸಿರುವ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ತತ್ವ ಪ್ರಜಾಪ್ರಭುತ್ವದ ಆತ್ಮವಾಗಿದೆ, 'ಒಂದು ರಾಷ್ಟ್ರ ಒಂದು ಚುನಾವಣೆ' ಪ್ರಸ್ತಾಪ ಭಾರತದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ವ್ಯವಸ್ಥೆಗೆ ಅಪಾಯ ಉಂಟುಮಾಡುತ್ತದೆ. ವಿವಿಧ ರಾಜ್ಯಗಳ ವಿಧಾನಸಭೆಗಳ ಅಧಿಕಾರಾವಧಿ ಬೇರೆ ಬೇರೆಯಾಗಿರುತ್ತವೆ, ದೇಶಾದ್ಯಂತ ಏಕರೂಪ ಚುನಾವಣಾ ವೇಳಾಪಟ್ಟಿ ರಾಷ್ಟ್ರೀಯ ವಿಷಯಗಳ ಮೇಲೆ ಕೇಂದ್ರೀಕರಿಸುವ ಮತ್ತು ಸ್ಥಳೀಯ ಕಾಳಜಿಗಳನ್ನು ನಿರ್ಲಕ್ಷಿಸುವ ಸಾಧ್ಯತೆ

■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಸಂತು : ಮಾಸ್ಕ್ ಹಾಕೊಂಡು ದೇವಸ್ಥಾನಕ್ಕೆ ಹೋಗಿ ಬಂದಾಗಿನಿಂದ ಒಂದೇ ಚಿಂತೆ!
ಗುಂಡ : ಏನಂತ ಚಿಂತೆ?
ಸಂತು : ದೇವರಿಗೆ ನಾನು ಬಂದಿದ್ದೆ ಅಂತ ಗೊತ್ತಾಯಿತೋ ಇಲ್ವೋ?

ಮೈಸೂರು ಮಿತ್ರ

ಶುಕ್ರವಾರ, 26 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಮಯ ಮತ್ತು ನಗು ಇವೆರಡು ಜೀವನದ ವಿಚಿತ್ರಗಳು.
ಕೆಲವೊಮ್ಮೆ ಸಮಯವು ನಮಗೆ ನಗುವುದನ್ನೇ ಮರೆಸಿಬಿಡುತ್ತದೆ.
ಮತ್ತೊಮ್ಮೆ ನಗು ನಮಗೆ ಸಮಯವನ್ನೇ ಮರೆಸಿಬಿಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ,
ಹಟ ಹಿಡಿದವ ಸಾಮ್ರಾಟನಲ್ಲ.

ನಿಮ್ಮ ಪತ್ರಗಳು

■ ಮೊಬೈಲ್ ರೀಚಾರ್ಜ್ ದರ : ಟ್ರಾಯ್ ಮತ್ತು ಕೇಂದ್ರ ಸರ್ಕಾರ ನಿಯಂತ್ರಿಸಲಿ

ಮಾನ್ಯರೆ,

ಇದೇ ಜುಲೈ 3 ರಿಂದ ಅನ್ವಯವಾಗುವಂತೆ ಮೊಬೈಲ್ ಸೇವಾ ಕಂಪೆನಿಗಳು ಎಲ್ಲಾ ರೀಚಾರ್ಜ್ –ಡಾಟಾ ದರವನ್ನು ಯದ್ವಾ–ತದ್ವ ಏರಿಸಿವೆ. ಇದರಿಂದಾಗಿ ಪ್ರತಿ ರೀಚಾರ್ಜ್ ದರ ಏಕಾ – ಏಕಿ ಸುಮಾರು ಕನಿಷ್ಠ 100 ರೂಪಾಯಿಗಳವರೆಗೆ ಏರಿಕೆಯಾಗಿದೆ. ಇದು ಎಲ್ಲಾ ಗ್ರಾಹಕರಿಗೆ ಹೊರೆಯಾಗಿದೆ. ಆದರೆ ಮೊಬೈಲ್ ಕಂಪೆನಿಗಳನ್ನು ಪ್ರಶ್ನಿಸಲಾಗಲಿ, ದೂರು ನೀಡಲಾಗಲೀ ಸಾಧ್ಯವಿಲ್ಲದ ಕಾರಣ ಅನಿವಾರ್ಯವಾಗಿ ಗ್ರಾಹಕರು ಸಹಿಸಿಕೊಂಡಿದ್ದಾರೆ. ನಮ್ಮ ಬಿಎಸ್ಎನ್ಎಲ್‌ನಂತಹ ಕಂಪೆನಿಯಾದರೆ ನಾವು ಅದರ ಕಚೇರಿಗೇ ಹೋಗಿ ದೂರು ನೀಡಬಹುದಿತ್ತು. ಆದರೆ ಈ ಖಾಸಗಿ ಸೇವಾ ಕಂಪೆನಿಗಳು ಆರಂಭದಲ್ಲಿ ಭಾರೀ ಸೇವಾ ಮನೋಭಾವ ಹಾಗೂ ರಿಯಾಯಿತಿ, ಉಚಿತ ಸೇವೆ ನೀಡಿ ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ಮುಳುಗುವಂತೆ ಮಾಡಿದವು. ಈಗ ಎಲ್ಲಾ ಗ್ರಾಹಕರ ಜುಟ್ಟು ಈ ಖಾಸಗಿ ಸೇವಾ ಕಂಪೆನಿಗಳ ಕೈಯ್ಯಲ್ಲಿದೆ. ಈಗ ಗ್ರಾಹಕರು ಅವರು ಎಳೆದ ಕಡೆ ಅನಿವಾರ್ಯವಾಗಿ ಹೋಗುವಂತಾಗಿರುವುದು ವ್ಯವಸ್ಥೆಯ ವಿಪರ್ಯಾಸವಾಗಿದೆ.

ಈ ಖಾಸಗಿ ಮೊಬೈಲ್ ಕಂಪೆನಿಗಳು 2005 –2010 ರ ವೇಳೆಗೆ ಆರಂಭವಾದಾಗ, ಉಚಿತ ಸಿಮ್ ಕಾರ್ಡ್, ಉಚಿತ ಮೊಬೈಲ್ ಫೋನ್, ಉಚಿತ ಡಾಟಾ, ಉಚಿತ ಮೊಬೈಲ್ ಫೋನ್‌ನೊಡನೆ ಒಂದು ವರ್ಷದವರೆಗೂ ಟಾಕ್ ಟೈಮ್ ಫ್ರೀ! ಸಿಮ್ ಕಾರ್ಡ್ ವ್ಯಾಲಿಡಿಟಿ 2035 ವರೆಗೆ! ಉಚಿತ ಇನ್‌ಕಮಿಂಗ್ ಕಾಲ್.... ಹೀಗೆ ನೂರಾರು ಆಮಿಷಗಳನ್ನು ಒಡ್ಡಿ, ಕೋಟ್ಯಾಂತರ ಗ್ರಾಹಕರನ್ನು ತಮ್ಮ ಜಾಲಕ್ಕೆ ಕೆಡವಿದವು. ಹೀಗೆ ಕಡಿಮೆ ದರಕ್ಕೆ ಮೊಬೈಲ್ ಫೋನ್, ಡಾಟಾ ಎಲ್ಲವೂ ಸಿಗುತ್ತಿದ್ದುದರಿಂದ ಮನೆ ಮಂದಿಯೆಲ್ಲಾ ಬೀಡಿ ಸಿಗರೇಟ್ ಸೇದುವವರು ಬೆಂಕಿ ಪೊಟ್ಟಣ ಜೇಬಿನಲ್ಲಿ ಇಟ್ಟುಕೊಳ್ಳುವಂತೆ ಎಲ್ಲರೂ ಮೊಬೈಲ್ ಹೊಂದುವಂತೆ ಮಾಡಿದರು. ರೂ 10,30.49.79.99.149.179. ಹೀಗೆ ಕಡಿಮೆ ದರದ ಸೌಲಭ್ಯಗಳ ರಿಚಾರ್ಜ್ ಸೌಲಭ್ಯಗಳನ್ನು ನೀಡಿ ಎಲ್ಲರನ್ನು ತಮ್ಮ ದಾಸರನ್ನಾಗಿ ಮಾಡಿಕೊಂಡರು. ಕೋವಿಡ್ ಸಮಯದಲ್ಲಿ ಶಾಲಾ–ಕಾಲೇಜುಗಳು ಬಂದ್ ಆಗಿ ಆನ್‌ಲೈನ್ ಕ್ಲಾಸ್ ಮೂಲಕ ಎಲ್‌ಕೆಜಿ ಮಕ್ಕಳಿಗೂ ಪೋಷಕರೇ ಮೊಬೈಲ್ ನೀಡಿ ಚಾಳಿ ಹಚ್ಚಿಸುವಂತಾಯಿತು.

ಈಗ ಮೊಬೈಲ್ ಅನಿವಾರ್ಯ ಎಂಬಷ್ಟು ವಿಶಾಲ ಬಲೆಯಲ್ಲಿ ಜನರು ಸಿಲುಕಿಕೊಂಡಿದ್ದಾರೆ. ಒಂದೊಂದು ಮನೆಯಲ್ಲೂ ಕನಿಷ್ಠ 2–3 ಮೊಬೈಲ್‌ಗಳಿವೆ. ಸ್ವಂತ ದುಡಿಮೆ ಇರುವವರು ಅವರೇ ರೀಚಾರ್ಜ್ ಮಾಡಿಸಿಕೊಳ್ಳುತ್ತಾರೆ. ಆದರೆ ಒಬ್ಬನೇ ದುಡಿಯುವ ವ್ಯಕ್ತಿಯೂ ಕೂಡ ಅನಿವಾರ್ಯವಾಗಿ ಮನೆಯ ಎಲ್ಲ ಸದಸ್ಯರ ಮೊಬೈಲ್ ರೀಚಾರ್ಜ್ ಮಾಡಿಸಿ ಕೊಡಬೇಕಾದಲ್ಲಿ ರೀಚಾರ್ಜ್ ದರ 300–400 ದರ ಹೆಚ್ಚುವರಿಯಾಗಿ ಭರಿಸಬೇಕು. ಇದು ಕಡಿಮೆ ಆದಾಯದವರಿಗೆ ಭಾರಿ ಹೊರೆಯಾಗಿದೆ.

ಜಾಗತಿಕವಾಗಿ ಹೋಲಿಕೆ ಮಾಡಿದರೆ ಭಾರತದಲ್ಲಿ ಡಾಟಾ, ರೀಚಾರ್ಜ್ ದರ ಕಡಿಮೆ ಇದೆ ಎಂಬ ಮೊಬೈಲ್ ಕಂಪೆನಿಗಳ ವಾದ ಅವಾಸ್ತವಿಕ. ಏಕೆಂದರೆ ವಿದೇಶಗಳಲ್ಲಿ ಅಲ್ಲಿನ ಜೀವನ ಮಟ್ಟ, ತಲಾ ಆದಾಯ, ವೇತನ, ಮೊಬೈಲ್ ಡಾಟಾ ಗುಣಮಟ್ಟ, ಸೇವೆ ಉತ್ತಮವಾಗಿದೆ. ಅದಾವುದು ಇಲ್ಲಿಲ್ಲ. ಇನ್ನೂ ಸರಿಯಾಗಿ ನೆಟ್‌ವರ್ಕ್ ಜಾಲವೇ ಇಲ್ಲಿ ಲಭ್ಯವಾಗುತ್ತಿಲ್ಲ.

ಕೇಂದ್ರ ಸರ್ಕಾರ ಮೊಬೈಲ್ ತರಂಗಾಂತರಗಳನ್ನು ಭಾರಿ ಬೆಲೆಗೆ ಹರಾಜು ಮಾಡುವುದು. ಅದನ್ನು ಈ ಕಂಪೆನಿಗಳು ಜಿದ್ದಿಗೆ ಬಿದ್ದು ಕೊಳ್ಳುವುದು ಕೂಡ ದರ ಏರಿಕೆಗೆ ಕಾರಣವಾಗಿವೆ. ಕೇಂದ್ರ ಸರ್ಕಾರ ಹರಾಜು ಹಾಕುವಾಗ ಸೇವಾ ಸೌಲಭ್ಯಗಳನ್ನು ಇಂತಿಷ್ಟೆ ದರದಲ್ಲಿ ನೀಡಬೇಕು ಎಂಬ ಷರತ್ತು ಹಾಕದಿರುವುದು, ತನಗೆ ಆದಾಯ ಬಂದರೆ ಸಾಕು. ಜನರ ಮೇಲೆ ಎಷ್ಟು ಹೊರೆಯಾದರೂ ತನಗೆ ಸಂಬಂಧವಿಲ್ಲ ಎಂಬ ಕೇಂದ್ರ ಸರ್ಕಾರದ ಧೋರಣೆ ಕೂಡ ಇದಕ್ಕೆ ಕಾರಣವಾಗಿದೆ.

ದರ ಏರಿಕೆ ಪ್ರಕಟವಾದರೂ ಸರ್ಕಾರವಾಗಲೀ, ಶಾಸಕರಾಗಲೀ, ಲೋಕಸಭಾ ಸದಸ್ಯರಾಗಲೀ ಹೇಳಿಕೆ ನೀಡದೆ, ಜನರಾಗಲೀ, ಗ್ರಾಹಕ ಸಂಘಟನೆಗಳಾಗಲೀ, ಜನಪರ ಸಂಘಟನೆಗಳಾಗಲೀ ಪ್ರತಿಭಟಿಸದೆ ಇರುವುದು ವಿಷಾದಕರ ಸಂಗತಿ. ಸುಂಕದವನ ಮುಂದೆ ಕಷ್ಟ ಹೇಳಿಕೊಂಡಂತಾಗಿದೆ ಸಾಮಾನ್ಯ ಜನರ ಪರಿಸ್ಥಿತಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಕಟ್ಟಡಗಳ ನಿರಾಕ್ಷೇಪಣಾ ಪತ್ರ ಶುಲ್ಕ ಕಡಿಮೆಯಾಗಲಿ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ವಸತಿ ಮತ್ತು ವಾಣಿಜ್ಯ ಕಟ್ಟಡಗಳ ನಿರಕ್ಷೇಪಣಾ ಪತ್ರದ ಶುಲ್ಕವನ್ನು ಅಗ್ನಿಶಾಮಕ ಇಲಾಖೆ ಏರಿಕೆ ಮಾಡಿರುವುದು ಸರಿಯಾದ ಕ್ರಮವಲ್ಲ. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಡಗಳ ಕಾರ್ಯಾಚರಣೆಗೆ ಅಗ್ನಿಶಾಮಕ ಇಲಾಖೆಯಿಂದ ಎನ್‌ಒಸಿ ಪಡೆಯುವುದು ಕಡ್ಡಾಯವಾಗಿದೆ.

ಆದರೆ ಈ ಎನ್‌ಒಸಿ ಶುಲ್ಕವನ್ನು ಬಹುಮಹಡಿ ಕಟ್ಟಡಗಳಿಗೆ ಪ್ರಸ್ತುತ ಚದರ ಮೀಟರ್‌ಗೆ ರೂ.35 ಇದ್ದು ಅಥವಾ 2.5 ಲಕ್ಷ ಅಥವಾ ಅಳತೆಗನುಗುಣವಾಗಿ ಹೆಚ್ಚಾಗಿದೆ. ಈಗ ಈ ಶುಲ್ಕದ ದರವನ್ನು ಚದರ ಮೀಟರ್‌ಗೆ ರೂ.65ಕ್ಕೆ ಅಥವಾ 3ಲಕ್ಷ ಗಳಿಗೆ ಏರಿಕೆ ಮಾಡಲಾಗಿದ್ದು, ಮೊದಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಕ್ಕೆ ಹೆಚ್ಚಿನ ಹೊರೆಯಾಗಿ ಪರಿಣಮಿಸಿದೆ.

ಮನೆ ಅಥವಾ ಕಟ್ಟಡ ಕಟ್ಟುವುದು ಮೊದಲೇ ದುಬಾರಿಯಾಗಿದ್ದು ಕೂಲಿ, ಸಿಮೆಂಟ್, ಇಟ್ಟಿಗೆ, ಇಂಜಿನಿಯರ್ ಪ್ಲಾನ್ ದರ ಹೀಗೆ ಮನೆ ಕಟ್ಟುವುದು ದುಸ್ತರವಾಗಿರುವ ಇಂತಹ ಸಮಯದಲ್ಲಿ ಈ ಶುಲ್ಕ ಹೆಚ್ಚಿಸಿರುವುದು ಸರಿಯಲ್ಲ ಮತ್ತು ರಾಜ್ಯ ಸರ್ಕಾರ ಈ ಶುಲ್ಕದ ದರವನ್ನು ಹಳೆಯ ದರಕ್ಕೆ ಯಥಾಸ್ಥಿತಿ ಇರುವಂತೆ ಕ್ರಮ ತೆಗೆದುಕೊಳ್ಳಬೇಕು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

■ ನಿದ್ದೆಗೆ ಜಾರಿದಿಯೇ ಬಿಜೆಪಿ?

ಮಾನ್ಯರೆ,

ಕರ್ನಾಟಕದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿರುವ ಬಿಜೆಪಿ ಪಾರ್ಟಿ ನಿದ್ದೆಗೆ ಜಾರಿದಿಯೇ ಎಂಬುದು ರಾಜ್ಯದ ಜನರಿಗೆ ಕಾಡುತ್ತಿರುವ ಯಕ್ಷ ಪ್ರಶ್ನೆಯಾಗಿದೆ? ಯಾಕೆಂದರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಕೇವಲ ಒಂದು ವರ್ಷದಲ್ಲೇ ವಾಲ್ಮೀಕಿ ನಿಗಮದ ಹಗರಣ, ಮುಡಾ ಹಗರಣದ ಆರೋಪ. ಜೊತೆಗೆ ಪೆಟ್ರೋಲ್ ಮತ್ತು ಡೀಸೆಲ್, ಹಾಲು, ನೀರು ಹಾಗೂ ಇತ್ಯಾದಿ ವಸ್ತುಗಳ ಮೇಲೆ ಬೆಲೆ ಏರಿಕೆಯ ಬಿಸಿ ರಾಜ್ಯದ ಜನರಿಗೆ ತಟ್ಟಿದೆ. ಆದರೆ ಇತ್ತ ಬಿಜೆಪಿ ಪಕ್ಷದ ನಾಯಕರು ಅವರ ಐಷಾರಾಮಿ ಜೀವನದ ನಡುವೆ ಜವಾಬ್ದಾರಿಯುತ ವಿರೋಧ ಪಕ್ಷದ ಸ್ಥಾನ ಹಾಗೂ ಅದರ ಕಾರ್ಯವೈಖರಿಯನ್ನು ಮರೆತಿದ್ದಾರೆ ಎಂದು ರಾಜ್ಯದ ಜನರು ಬಿಜೆಪಿಯ ವಿರುದ್ಧ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ವಿಪಕ್ಷ ಸ್ಥಾನದಲ್ಲಿ ಇರುವ ಬಿಜೆಪಿ ಅವರೇ ಇನ್ನಾದರೂ ಎಚ್ಚರಗೊಳ್ಳಿ. "ಏಳಿ ಎದ್ದೇಳಿ ಹಗರಣಗಳ ವಿರುದ್ಧ, ಬೆಲೆ ಏರಿಕೆಯ ವಿರುದ್ಧ ಹೋರಾಡಿ ರಾಜ್ಯದ ಜನರಿಗೆ ನ್ಯಾಯ ಒದಗಿಸುವ ತನಕ ಮಲಗದಿರಿ"

–ರಂಜನ್ ಆರ್, ಪತ್ರಿಕೋದ್ಯಮ ಪದವೀಧರ, ಮೈಸೂರು.

ಜೀವನ ಸಾರ್ಥಕತೆಗೆ ದಾನವೇ ದಾರಿ...





ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಉಪನ್ಯಾಸಕರು ಮತ್ತು ಹವ್ಯಾಸಿ ಬರಹಗಾರರು
ಮೊ: 77958 62281

"ದಾನದ ಅಸ್ತಿತ್ವ ಇಂದು ನೆನ್ನೆಯದಲ್ಲ ಪ್ರಾಚೀನ ಕಾಲದಿಂದಲೂ ಪುಣ್ಯ ಹಾಗೂ ದಾನದ ಕಾರ್ಯಗಳು ಸಾಗಿ, ವ್ಯಕ್ತಿಯ ಘನ ವ್ಯಕ್ತಿತ್ವವನ್ನು ಸಾರುತ್ತಲೇ ಬರುತ್ತಿವೆ. ಸತ್ಯಯುಗದಲ್ಲಿ ಸುದ್ದಿ ತಿಳಿದರೆ ದಾನ ಮಾಡುತ್ತಿದ್ದರು. ದ್ವಾಪರದಲ್ಲಿ ಒಂದು ಪತ್ರ ಕಳುಹಿಸಿದರೆ ಆ ಪತ್ರ ನೋಡಿ ದಾನ ಮಾಡುತ್ತಿದ್ದರು. ತ್ರೇತಾಯುಗದಲ್ಲು ಕೂಡ ದಾನಕೊಡುವವರ ಹೆಸರಿನಲ್ಲಿ ಒಂದು ಪತ್ರವನ್ನು ತೆಗೆದುಕೊಂಡು ಹೋಗಿ ನೀಡಿದರೆ ಸಾಕು ದಾನ ನೀಡುತ್ತಿದ್ದರು. ಆದರೆ ಕಲಿಯುಗದಲ್ಲಿ ಬಹಳ ವಿಚಿತ್ರ. ಬಾಯಿ ಬಿಟ್ಟು ಕೇಳಿದರು, ತಿಳಿಸಿ ಹೇಳಿದರೂ, ಒತ್ತಾಯ ಮಾಡಿದರೂ ಇವರು ಮಾಡುವ ದಾನವೆಂದರೆ ವಾಗ್ದಾನ ಮಾತ್ರ. ಸರಳ, 'ಸಹಜವಾಗಿ ಕೊಡುವುದು ಹಾಲಿಗೆ ಸಮಾನ. ಬೇಡಿದಾಗ ನೀಡುವುದು ನೀರಿಗೆ ಸಮಾನ' ಬಹಳಷ್ಟು ಒತ್ತಾಯ ಮಾಡಿದಾಗ ನೀಡುವುದು ರಕ್ತಕ್ಕೆ ಸಮಾನವಾದುದು. ನಮ್ಮ ದಾನ ಹಾಲಿನಂತಾಗಬೇಕು ಇಲ್ಲವೇ ನೀರಾದರೂ ಪರವಾಗಿಲ್ಲ ಆದರೆ ರಕ್ತವಾಗಬಾರದು ಎಂಬುದು ಬಲ್ಲವರ ಹಾಗೂ ದಾರ್ಶನಿಕರ ಮಾತು. ದಾನಕ್ಕೆ ಸಂಬಂಧಿಸಿದಂತೆ ವಿವಿಧ ಮಹಾನುಭಾವರ ಜೀವನದಲ್ಲಿ ನಡೆದ ಸಂಗತಿಗಳು ದಾನದ ಮಹತ್ವ, ಶ್ರೇಷ್ಠತೆಯನ್ನು ಸಾರುತ್ತವೆ.

ದಾನವೆಂದರೆ ಯಾವುದೇ ನಿರೀಕ್ಷೆ–ಪ್ರತಿಫಲಾಪೇಕ್ಷೆ ಇಲ್ಲದೆ ತನು, ಮನದಿಂದ ಕೈದೋರಿ ನೀಡುವುದು. ದಾನಕ್ಕೆ ಧಣಿಯಾಗುವುದು ಅತ್ಯಂತ ಅಸಾಧ್ಯವಾದ ಕೆಲಸ. ಈ ನೆಲದ ಬಯಲಲ್ಲಿ ಅದೆಷ್ಟೋ ಪುಣ್ಯದ ಹಾಗೂ ಒಳ್ಳೆಯ ಕಾರ್ಯಗಳು ಸದಾಕಾಲ ನಡೆಯುತ್ತಲೇ ಇರುತ್ತವೆ. ಅದರಲ್ಲಿ ಮುಖ್ಯವಾಗಿ ಅನ್ನದಾನ, ಗೋದಾನ, ವಿದ್ಯಾದಾನ, ರಕ್ತದಾನ, ನೇತ್ರದಾನ, ಅಂಗಾಂಗ ದಾನ ಮುಂದುವರೆದು ದೇಹವನ್ನು ದಾನವಾಗಿ ನೀಡಿ ಸರ್ವರು ಮೆಚ್ಚುವಂತೆ ಕಾರ್ಯ ಮಾಡುತ್ತಿದ್ದಾರೆ. ಹೀಗೆ ದಾನದ ವ್ಯಾಪ್ತಿ ತನ್ನ ವಿಸ್ತಾರದ ನೆಲೆಯಲ್ಲಿ ಹರಡಿರುವುದು ಅದರ ಮಹೋನ್ನತಿಯನ್ನು ಬಿಂಬಿಸುತ್ತದೆ. ದಾನದಲ್ಲಿ ಪರಮೋಚ್ಚ ಸಂತೃಪ್ತಿಯನ್ನು ಕಾಣಲು ಸಾಧ್ಯವಿಲ್ಲದೆ ಇರಬಹುದು, ಆದರೆ ನಮ್ಮ ಕೈಲಾದಷ್ಟು ದಾನವನ್ನು ಮಾಡಿದ್ದರೆ ನಮ್ಮ ಜೀವನ ಸಾರ್ಥಕವಾಗುತ್ತದೆ. ದಾನ ಮಾಡಿ ಡಂಗೂರ ಸಾರುವುದಲ್ಲ ಅದು ಭಾವಕೋಶದಿಂದ ವ್ಯಕ್ತವಾಗುವ ಹೃದಯದ ಕಾರ್ಯ. ದಾನ ನೀಡದೆ ಇರುವವನನ್ನು ಲೋಭಿ, ಜಿಪುಣ ಎಂದು ಕರೆಯುತ್ತಾರೆ. ಆಗಾಗಿ ಸಂಪಾದನೆಯ ಒಂದು ಭಾಗವನ್ನು ದಾನ ಮಾಡಲೇಬೇಕು.

**ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು,
ಪರಿಣಾಮವಕ್ಕು ಪದವಕ್ಕು, ಕೈಲಾಸ
ನೆರಮನೆಯು ಅಕ್ಕು ಸರ್ವಜ್ಞ.**

ದಾನದ ಶ್ರೇಷ್ಠತೆಯನ್ನು ಸಾರುವ ಈ ಮೂರು ಸಾಲಿನ ತ್ರಿಪದಿಯಲ್ಲಿ ಸಿರಿ ಬಂದಾಗ ಅದರ ಅಗತ್ಯವಿರುವವರಿಗೆ ತಾವಾಗಿಯೇ ಸ್ವ–ಇಚ್ಛೆಯಲ್ಲಿ ಮನಪೂರ್ವಕವಾಗಿ ಯಾವುದೇ ಫಲಾಪೇಕ್ಷೆ ಇಲ್ಲದೆ ಕರೆದು ದಾನವನ್ನು ಮಾಡುವುದು ಅತ್ಯಂತ ಮಹತ್ವದ ಹಾಗೂ ಪುಣ್ಯದ ಕಾರ್ಯ. ಈ ವಿಚಾರದಲ್ಲಿ ಗಮನಿಸಬೇಕಾದ ಮಾತೆಂದರೆ ದಾನಿಗಳು ಅಗತ್ಯ ಇರುವವರು ಬಂದು ಬೇಡುವ ತನಕ ಕಾಯದೆ ತಾವಾಗಿಯೇ ಕರೆದು ದಾನ ಮಾಡಬೇಕು, ಆಗ ಒಳ್ಳೆಯ ಫಲ ಸಿಗುತ್ತದೆ. ಅಷ್ಟೇ ಅಲ್ಲದೆ ಕೈಲಾಸವೇ ಪಕ್ಕದಲ್ಲಿದೆಯೇನೋ ಎಂಬಂತಹ ಅನುಭವವಾಗುತ್ತದೆ. ಈ ಜಗದ ಮಾಯೆಯಲ್ಲಿ ಯಾವುದು ತಾನೇ ಶಾಶ್ವತ. ಇರುವಷ್ಟು ಕಾಲ ನೆಮ್ಮದಿಗಾಗಿ ಬದುಕಿ, ನೆಮ್ಮದಿಯಿಂದ ಮರೆಯಾಗುವ ಹಂತದಲ್ಲಿ ಇಂತಹ ಪುಣ್ಯದ ಕಾರ್ಯಗಳು ಆತ್ಮತೃಪ್ತಿಯನ್ನು ದಯಪಾಲಿಸುತ್ತವೆ.

ದಾನದ ಅಸ್ತಿತ್ವ ಇಂದು ನೆನ್ನೆಯದಲ್ಲ ಪ್ರಾಚೀನ ಕಾಲದಿಂದಲೂ ಪುಣ್ಯ ಹಾಗೂ ದಾನದ ಕಾರ್ಯಗಳು ಸಾಗಿ, ವ್ಯಕ್ತಿಯ ಘನ ವ್ಯಕ್ತಿತ್ವವನ್ನು ಸಾರುತ್ತಲೇ ಬರುತ್ತಿವೆ. ಸತ್ಯಯುಗದಲ್ಲಿ ಸುದ್ದಿ ತಿಳಿದರೆ ದಾನ ಮಾಡುತ್ತಿದ್ದರು. ದ್ವಾಪರದಲ್ಲಿ ಒಂದು ಪತ್ರ ಕಳುಹಿಸಿದರೆ ಆ ಪತ್ರ ನೋಡಿ ದಾನ ಮಾಡುತ್ತಿದ್ದರು. ತ್ರೇತಾಯುಗದಲ್ಲು ಕೂಡ ದಾನಕೊಡುವವರ ಹೆಸರಿನಲ್ಲಿ ಒಂದು ಪತ್ರವನ್ನು ತೆಗೆದುಕೊಂಡು ಹೋಗಿ ನೀಡಿದರೆ ಸಾಕು ದಾನ ನೀಡುತ್ತಿದ್ದರು. ಆದರೆ ಕಲಿಯುಗದಲ್ಲಿ ಬಹಳ ವಿಚಿತ್ರ. ಬಾಯಿ ಬಿಟ್ಟು ಕೇಳಿದರು, ತಿಳಿಸಿ ಹೇಳಿದರೂ, ಒತ್ತಾಯ ಮಾಡಿದರೂ ಇವರು ಮಾಡುವ ದಾನವೆಂದರೆ ವಾಗ್ದಾನ ಮಾತ್ರ. ಸರಳ, 'ಸಹಜವಾಗಿ ಕೊಡುವುದು ಹಾಲಿಗೆ ಸಮಾನ. ಬೇಡಿದಾಗ ನೀಡುವುದು ನೀರಿಗೆ ಸಮಾನ' ಬಹಳಷ್ಟು ಒತ್ತಾಯ ಮಾಡಿದಾಗ ನೀಡುವುದು ರಕ್ತಕ್ಕೆ ಸಮಾನವಾದುದು. ನಮ್ಮ ದಾನ ಹಾಲಿನಂತಾಗಬೇಕು ಇಲ್ಲವೇ ನೀರಾದರೂ ಪರವಾಗಿಲ್ಲ ಆದರೆ ರಕ್ತವಾಗಬಾರದು ಎಂಬುದು ಬಲ್ಲವರ ಹಾಗೂ ದಾರ್ಶನಿಕರ ಮಾತು. ದಾನಕ್ಕೆ ಸಂಬಂಧಿಸಿದಂತೆ ವಿವಿಧ ಮಹಾನುಭಾವರ ಜೀವನದಲ್ಲಿ ನಡೆದ ಸಂಗತಿಗಳು ದಾನದ ಮಹತ್ವ, ಶ್ರೇಷ್ಠತೆಯನ್ನು ಸಾರುತ್ತವೆ. ಅಂತಹ ಕೆಲವು ಪ್ರಸಂಗಗಳು;

ಒಂದು: ರಾಮ್‌ದಾಸ್ ಅವರು ಮನೆಯೊಂದಕ್ಕೆ ಭಿಕ್ಷೆಗೆ ಹೋಗಿದ್ದರು. ಹೀಗೆ ಜೋಳಿಗೆ ಹಿಡಿದು ಪ್ರತಿ ಮನೆಯಿಂದಲೂ ಭಿಕ್ಷೆ ಬೇಡಿ ಬರುತ್ತಿರಬೇಕಾದರೆ ಅಲ್ಲೊಂದು ಮಗು ಅವರ ಜೋಳಿಗೆಗೆ ಒಂದು ಹಿಡಿ ಮಣ್ಣನ್ನು ಹಾಕಿಬಿಡುತ್ತದೆ. ರಾಮ್‌ದಾಸ್ ಅವರು ಸಂತೋಷದಿಂದಲೇ ಮುಂದೆ ಹೋಗುತ್ತಿರಲು ಅದನ್ನು ನೋಡಿದ ಆ ಕೇರಿಯ ಜನ ಆ ಹುಡುಗನಿಗೆ ಶಪಿಸುತ್ತಾರೆ. ಹೊಡೆಯಲು ಮುಂದಾಗುತ್ತಾರೆ. ಆಗ ರಾಮ್‌ದಾಸ್ ಅವರು ಹೇಳುವ ಮಾತು ನಮ್ಮ ಕಣ್ಣನ್ನು ತೆರೆಸುತ್ತದೆ. ಆ ಮಾತು ಆ ಹುಡುಗನನ್ನು ಹೊಡೆಯಬೇಡಿ ಬೈಯ್ಯಬೇಡಿ, ಬೈಯ್ಯುವ ಹೊಡೆಯುವ ಕೆಲಸವನ್ನೇನು ಮಾಡಿದ್ದಾನೆ ಆ ಹುಡುಗ; ಒಂದು ಬೊಗಸೆಯ ಮಣ್ಣಿಗೆ ನಿಂದನೆ ಮಾಡೋರು ಅದೇ ಜಾಗದಲ್ಲಿ ಹತ್ತು ಎಕರೆ, ಇಪ್ಪತ್ತು ಎಕರೆ ಜಮೀನು ನೀಡಿದ್ದರೆ ನಾವು ಆನಂದದಿಂದ ಪಡೆಯುತ್ತಿರಲಿಲ್ಲವೇ? ಬೇಡಲು ಬಂದವನಲ್ಲ ನಾನು, ಕೈದೋರಿ ನೀಡುವುದನ್ನು ಕಲಿಸಲು ಬಂದವನು. ಆ ಹುಡುಗನಿಗೆ ಏನೋ ನೀಡಬೇಕು ಅಂತ ಅನ್ನಿಸಿದೆಯಲ್ಲ ಅದು ಆ ಹುಡುಗನ ಮನೋಭಾವವನ್ನು ತೋರಿಸುತ್ತದೆ. ನೀಡುವುದು ನಮ್ಮ ಸಂಸ್ಕೃತಿ ನಮ್ಮ ಆಚಾರ–ನಮ್ಮ ನಡೆ–ನುಡಿಯ ಭಾವ.

ಎರಡು: ಒಮ್ಮೆ ಮಹರ್ಷಿಗಳಾದ ದುರ್ವಾಸ ಮುನಿಗಳು ನದಿಗೆ ಜಳಕ ಮಾಡಲು ತೆರಳಿರುತ್ತಾರೆ. ಸ್ನಾನ ಮಾಡುತ್ತಿದ್ದಾಗ ರಭಸವಾಗಿ ಹರಿಯುತ್ತಿದ್ದ ನೀರಿಗೆ ತಾವು ತೊಟ್ಟಿದ್ದ ಕೌಪಿನ (ಲಂಗೋಟಿ) ನೀರಿನ ಸೆಳೆತಕ್ಕೆ ಸಡಿಲವಾಗಿ ನೀರಿನೊಂದಿಗೆ ಹೊರಟು ಹೋಗುತ್ತದೆ. ಮಹರ್ಷಿಗಳು ದಿಗಂಬರರಾಗುತ್ತಾರೆ. ಅದೇ ಸಂದರ್ಭದಲ್ಲಿ ದ್ರೌಪದಿಯು ಮೈಲಿಗೆ ಬಟ್ಟೆಯನ್ನು ಶುಚಿ ಮಾಡಲು ಬಂದಾಗ ದುರ್ವಾಸ ಮುನಿಗಳು ಸ್ನಾನ ಮಾಡುತ್ತಿರುವುದನ್ನು ಕಂಡು ನಾನು ಈಗ ಮೈಲಿಗೆ ಬಟ್ಟೆ ಶುಚಿ ಮಾಡುವುದು ಸಭ್ಯತೆ ಅಲ್ಲವೆಂದು ಬಗೆದು ದುರ್ವಾಸ ಮುನಿಗಳು ಸ್ನಾನ ಮಾಡಿ ಹೊರಗೆ ಹೋಗುವವರೆಗೂ ಕಾಯೋಣವೆಂದು ದಡದಲ್ಲಿ ಕಾಯುತ್ತಲೇ ಕೂರುತ್ತಾಳೆ. ಒಂದು ಕಡೆ; ದ್ರೌಪದಿ ಮರೆಯಾದಾಗ ಮೇಲೆ ಬರೋಣವೆಂದು ಮುನಿಗಳು, ಮತ್ತೊಂದು ಕಡೆ ಮುನಿಗಳು ಸ್ನಾನ ಮಾಡಿ ಹೊರಗೆ ಬಂದ ಮೇಲೆ ಬಟ್ಟೆ ಶುಚಿ ಮಾಡೋಣವೆಂದು ದ್ರೌಪದಿ. ಈ ನಡುವೆ ಸಮಯ ಸರಿಯುತ್ತಲೇ ಇರಲು ಒಂದು ಗಂಟೆ, ಎರಡು ಗಂಟೆ, ಮೂರು ಗಂಟೆಗಳು ಕಳೆಯುತ್ತವೆ. ಕಾದು ಕಾದು ಮಂಕಾದ ದ್ರೌಪದಿ ತಾನೇ ಮೌನ ಮುರಿದು ಮಾತನಾಡುತ್ತಾ 'ಮುನಿಗಳೇ ತಮ್ಮ ಸ್ನಾನದ ಕೈಂಕರ್ಯ ಪೂರ್ಣವಾಗಿದ್ದರೆ ಬಟ್ಟೆ ಶುಚಿ ಮಾಡಲು ನಮಗೆ ಅನುವು ಮಾಡಿಕೊಡಬೇಕು' ಎಂದು ವಿನೀತ ಭಾವದಲ್ಲಿ ಬಿನ್ನಹ ಮಾಡಿಕೊಂಡಾಗ ದುರ್ವಾಸ ಮುನಿಗಳು ತಾವು ಇರುವ ನಿಜ ಪರಿಸ್ಥಿತಿಯನ್ನು ತಿಳಿಸಿ ಹೇಳಿದಾಗ ಸ್ವಲ್ಪವೂ ತಡಮಾಡದೆ ತಾನು ಮನೆಯಿಂದ ಧರಿಸಿ ಬಂದಿದ್ದ ಮಡಿ ಸೀರೆಯ ಸೆರಗನ್ನೇ ಹರಿದು ಉಂಡೆ ಮಾಡಿ ಎಸೆಯುತ್ತಾಳೆ. ಆ ಸೆರಗನ್ನು ಸುತ್ತಿಕೊಂಡು ಹೊರಬಂದ ಮಹರ್ಷಿಗಳು ದ್ರೌಪದಿಯ ತಲೆ ಮೇಲೆ ಕೈ ಇಟ್ಟು ನನ್ನ ಮಾನವನ್ನು ಕಾಪಾಡಿದ್ದಕ್ಕಾಗಿ ಭವಿಷ್ಯದಲ್ಲಿ ಈ ಬಟ್ಟೆಯು ನಿನ್ನ ಮಾನವನ್ನು ಕಾಪಾಡಲಿ ಎಂದು ಮುಕ್ತವಾಗಿ ಹಾರೈಸುತ್ತಾರೆ. ಮುಂದೆ ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗದಲ್ಲಿ ಆ ಸೀರೆ ಅಕ್ಷಯಾಂಬರವಾಗುತ್ತದೆ. ಈ ಪ್ರಸಂಗದಿಂದ ಅರಿಯಬೇಕಾದ ಜೀವನ ಮೌಲ್ಯ ಕೊಡುವ ಮನೋಭಾವದ ಸ್ಥಿತಿಯಿಂದ ಎಂತಹ ದೊಡ್ಡ ಉಪಕಾರವಾಗುತ್ತದೆ ಎಂಬುದನ್ನು ಸೂಚಿಸುತ್ತದೆ. ಕೊಟ್ಟಿದ್ದು ಸೆರಗು ಮಾತ್ರ ಹುಟ್ಟಿದ್ದು ಅಕ್ಷಯಾಂಬರ. ಮಾರುದ್ದ ನೀಡಿದ್ದಾದರೆ ಊರುದ್ದ ಪಡೆಯುತ್ತೇವೆ ಎಂಬ ಗಾದೆ ಮಾತು ಅಕ್ಷರಶಃ ಇಲ್ಲಿ ದಾನದ ಸಿದ್ಧಾಂತವಾಗಿದೆ. ದಾನ ನೀಡಿದವನು ಯಾವುದೇ ನಿರೀಕ್ಷೆ ಇಲ್ಲದೆ ನೀಡಬೇಕು, ಪಡೆದುಕೊಳ್ಳುವವನು ಅರಸಿ ಆಶೀರ್ವದಿಸಿ ಪಡೆದುಕೊಳ್ಳುವುದರಿಂದ ಇಬ್ಬರಿಗೂ ಆತ್ಮಾನಂದ–ಸಂತೃಪ್ತಿಯ ಭಾವ.

ಮೂರು: ಮಹಾಭಾರತದ ಅತ್ಯಂತ ಮೆಚ್ಚುಗೆ ಪಾತ್ರ ಕರ್ಣನು, ಅಷ್ಟೇ ಅಲ್ಲದೆ ಆತನು ದಾನಶೂರತ್ವಕ್ಕೆ ಹೆಸರುವಾಸಿಯಾಗಿದ್ದವನು. ದಾನದ ವಿಚಾರದಲ್ಲಿ ಆತನನ್ನು ಮೀರಿಸಿದವರೇ ಇಲ್ಲ. ಸತ್ಯಕ್ಕೆ ಹರಿಶ್ಚಂದ್ರ ಹೇಗೆ ರೂಪಕವಾಗಿ ಎತ್ತರದಲ್ಲಿ ನಿಲ್ಲುತ್ತಾನೋ ಹಾಗೆಯೇ ದಾನಕ್ಕೆ ದಾರಶೂರ ಕರ್ಣ ಎಂಬ ಹಿರಿದಾದ ಗುಣ ವಿಶೇಷವನ್ನು ಹೊತ್ತು ಧರೆ ಬದುಕಿರುವವರೆಗೂ ಕರ್ಣನು ಮಾದರಿಯಾಗಿರುತ್ತಾನೆ. ಅಂತಹ ಕರ್ಣನು ಒಮ್ಮೆ ಕ್ಷೌರ ಮಾಡಿಸಲು ಬೆಳ್ಳಿಯ ಚೊಂಬಿನಲ್ಲಿ ನೀರನ್ನು ತುಂಬಿ ಎಡಗೈಯಿಂದ ಹಿಡಿದುಕೊಂಡು ಕುಳಿತಿದ್ದಾಗ ಭಿಕ್ಷಾಂದೇಹಿ ಎಂದು ಕೇಳಿದ ಕೂಡಲೇ ಎಡಗೈಯಿಂದಲೇ 'ತಗೋ' ಎಂದು ನೀಡಿಯೇ ಬಿಟ್ಟ, ಆಗ ಭಿಕ್ಷೆ ತೆಗೆದುಕೊಂಡ ವ್ಯಕ್ತಿ 'ಇದೇನು ಹೀಗೆ ಬೆಳ್ಗ್ಗೇನೆ ಅದು ನನ್ನಂತಹ ಬ್ರಾಹ್ಮಣನಿಗೆ ಎಡಗೈಯಲ್ಲಿ ನೀಡುವುದೇ' ಎಂದು ಕೇಳಿದಾಗ ಹೌದು ನೀವು ಹೇಳುತ್ತಿರುವುದು ಸತ್ಯ, ದಾನವನ್ನು ಬಲಗೈಯಲ್ಲಿಯೇ ನೀಡಬೇಕು ಆದರೆ ಎಡಗೈಯಲ್ಲಿ ಹಿಡಿದಿರುವಾಗ ಕೊಡು ಎನ್ನುವ ಮನೋಭಾವ ಬಲಗೈಗೆ ಬರುವಷ್ಟರಲ್ಲಿ ಬದಲಾಗಬಹುದು. ಅದಕ್ಕಾಗಿಯೇ ಎಡಗೈಯಲ್ಲಿದ್ದಾಗಲೇ ನೀಡಿದೆ ಎಂದು ದಾನದ ಹಿರಿತನವನ್ನು ಎತ್ತಿಹಿಡಿದದ್ದು ಕಂಡುಕೊಳ್ಳಬೇಕಾದ ಸತ್ಯ. ನಮ್ಮ ಹಳ್ಳಿಯ ಕಡೆ ಹೇಳುವುದು 'ಎಡಗೈಲಿ ಕೊಟ್ಟಿದ್ದು ಬಲಗೈಗೆ ಗೊತ್ತಾಗಬಾರದು ಬಲಗೈಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು' ಎಂಬ ಮಾತು ದಾನವು ಗೌಪ್ಯವಾಗಿರಬೇಕು ಎಂಬುದನ್ನು ತಿಳಿಸುತ್ತದೆ.

ನಾಲ್ಕು: ತರುಣನೊಬ್ಬನ ತಾಯಿ ಬೇರೆಯವರ ಮನೆಗಳಲ್ಲಿ ದುಡಿದು ಹಣಗಳಿಸಿ, ಅದರಲ್ಲೇ ಸಾಕಷ್ಟನ್ನು ದಾನ ಮಾಡಿ ಉಳಿದದ್ದರಲ್ಲಿ ಜೀವನ ಸಾಗಿಸುತ್ತಿದ್ದಳು. ಮಗನಿಗೆ ಇದು ಇಷ್ಟವಿಲ್ಲದೆ, 'ಯಾಕೆ ಹೀಗೆ ದಾನ ಮಾಡುತ್ತೀಯಾ. ಕೆಲವೊಮ್ಮೆ ಉಪವಾಸ ಇದ್ದು ದಾನ ಮಾಡುತ್ತೀಯಾ. ಈ ದಾನದ ಮಹತ್ವ ಏನು? ಎಂದಾಗ ತಾಯಿ 'ಮಗೂ, ದಾನದಿಂದ ಪುಣ್ಯ ಬರಲಿದೆ ಎಂದಾಗ ಮಗ 'ಪುಣ್ಯ ಎಂದರೇನು?' ಎಂದು ಕೇಳಿದ. ತಾಯಿ, 'ನನಗೇನು ಗೊತ್ತಪ್ಪ, ಅದು ಶಿವನಿಗೇ ಗೊತ್ತು. ಅವನನ್ನೇ ಹೋಗಿ ಕೇಳು' ಎಂದಳು. ಮಗ ಶಿವನನ್ನು ಕಾಣಲು ಹೊರಟ. ದಾರಿಯಲ್ಲಿ ದಟ್ಟವಾದ ಅರಣ್ಯ, ಕತ್ತಲೆಯೂ ಆಯಿತು. ತರುಣನಿಗೆ ಗಾಬರಿ. ಅವನಿಗೆ ಸಿಕ್ಕ ಬೇಡನೊಬ್ಬ ಆ ತರುಣನನ್ನು ತನ್ನ ಗುಡಿಸಲಿಗೆ ಕರೆದುಕೊಂಡು ಹೋಗಿ ಹೆಂಡತಿಗೆ ಹಣ್ಣು, ಹಂಪಲುಗಳನ್ನು ನೀಡಲು ಕೇಳಿದ. ಆಕೆ ಸಿಡುಕಿನಿಂದ, 'ನನ್ನದ್ದನ್ನು ಕೊಡಲಾರೆ. ಬೇಕಾದರೆ ನಿನ್ನ ಪಾಲಿನಲ್ಲೇ ಕೊಡು' ಎಂದಳು. ಬೇಡನು ತನ್ನ ಪಾಲಿನ ಆಹಾರವನ್ನು ಈತನಿಗಿತ್ತು, ಹಾಸಿಗೆ ಹಾಸಿ ಗುಡಿಸಲಿನಲ್ಲಿ ಮಲಗಿಸಿದ. ತಾನು ಗುಡಿಸಲಿನ ಅರ್ಧ ಒಳಗೆ, ಅರ್ಧ ಹೊರಗೆ ಮಲಗಿದ. ರಾತ್ರಿ ಹುಲಿ ಬಂದು ಬೇಡನನ್ನೂ ಅವನ ಹೆಂಡತಿಯನ್ನೂ ತಿಂದು ಹಾಕಿತು. ಹುಡುಗ ದುಃಖದಿಂದ ಮುಂದೆ ನಡೆದ. ಮುಂದೆ ದಾರಿಯಲ್ಲಿ ರಾಜನೊಬ್ಬ ಸಿಕ್ಕ. ಈತ ಶಿವನ ಕಡೆಗೆ ಹೊರಟಿದ್ದನ್ನು ತಿಳಿದು, 'ಹುಡುಗಾ, ನನ್ನದೊಂದು ಸಮಸ್ಯೆಯಿದೆ. ನಾನು ಕೋಟಿ ಹೊನ್ನು ಖರ್ಚುಮಾಡಿ ಕೆರೆ ಕಟ್ಟಿಸಿದ್ದೇನೆ. ಆದರೆ, ಒಂದೇ ಒಂದು ಹನಿ ನೀರೂ ಬೀಳಲಿಲ್ಲ', ಇದಕ್ಕೆ ಶಿವನಲ್ಲಿ ಪರಿಹಾರ ಕೇಳುವೆಯಾ' ಎಂದ. ಹುಡುಗ ಒಪ್ಪಿ ಮುಂದೆ ನಡೆದಾಗ ಒಬ್ಬ ಕುಂಟ ಮನುಷ್ಯ ಸಿಕ್ಕ. ಆತನೂ ಕೇಳಿದ, 'ನನ್ನ ಕುಂಟತನಕ್ಕೆ ಕಾರಣವನ್ನು ಶಿವನಲ್ಲಿ ಕೇಳಿ ಬಾ. ಅಲ್ಲಿಂದ ಮುಂದೆ ದೊಡ್ಡ ಸರ್ಪ ಕಂಡಿತು. ಅದು ಹುತ್ತದೊಳಗೆ ಹೋಗಲಾರದೆ, ಹೊರಗೆ ಬರಲಾರದೆ ಒದ್ದಾಡುತ್ತಿತ್ತು. 'ನಾನು ಇದರಿಂದ ಪಾರಾಗುವುದು ಹೇಗೆ ಎಂದು ಕೇಳಿಕೊಂಡು ಬಾ' ಎಂದಿತು. ತರುಣ ಬಂದು ಶಿವನನ್ನು ಕಂಡ 'ಪ್ರಭು, ದಾನದ ಪುಣ್ಯ ಎಂದರೇನು, ದಯವಿಟ್ಟು ಹೇಳು' ಎಂದ. ಅದಕ್ಕೆ ಶಿವ, 'ನೋಡು, ನೇಪಾಳ ದೇಶದ ರಾಜನ ಹೆಂಡತಿ ಗರ್ಭವತಿಯಾಗಿದ್ದಾಳೆ. ನಾನು ಕೊಡುವ ಪ್ರಸಾದವನ್ನು ಆಕೆಗೆ ಕೊಡು. ಆಕೆ ಗಂಡು ಮಗುವನ್ನು ಹಡೆಯುತ್ತಾಳೆ. ಆ ಮಗು ನಿನಗೆ ದಾನದ ಪುಣ್ಯವೇನೆಂದು ಹೇಳುತ್ತದೆ' ಎಂದ. ನಂತರ ತರುಣನು ರಾಜನ ಕೆರೆಯ ನೀರಿನ ಬಗ್ಗೆ ಕೇಳಿದಾಗ, 'ರಾಜ ತನ್ನ ಮಗಳಿಗೆ ಒಳ್ಳೆಯ ವರನನ್ನು ನೋಡಿ ಮದುವೆ ಮಾಡಿದರೆ ನೀರು ಬೀಳುತ್ತದೆ' ಎಂದ. ಅಂತೆಯೇ ಕುಂಟನ ಕಾಲಿನ ಪರಿಹಾರವನ್ನು ಕೇಳಿದಾಗ, 'ಆತ ವಿದ್ಯಾದಾನ ಮಾಡಿಲ್ಲ. ತನ್ನ ವಿದ್ಯೆಯನ್ನು ಯಾರಿಗಾದರೂ ದಾನ ಮಾಡಿದರೆ ಕುಂಟತನ ಹೋಗುತ್ತದೆ' ಎಂದು ನುಡಿದ. ಹಾಗಾದರೆ ಹಾವಿನ ತೊಂದರೆಗೆ ಪರಿಹಾರವೇನು? ಎಂಬ ಪ್ರಶ್ನೆಗೆ, 'ಅದರ ನೆತ್ತಿಯಲ್ಲಿ ಒಂದು ರತ್ನವಿದೆ. ಅದನ್ನು ಯಾರಿಗಾದರೂ ಕೊಟ್ಟರೆ ಅದರ ಸಮಸ್ಯೆ ಬಗೆಹರಿಯುತ್ತದೆ' ಎಂದು ಉತ್ತರಿಸಿದ. ಬರುವಾಗ ದಾರಿಯಲ್ಲಿ ತರುಣನಿಗೆ ಹಾವು ಸಿಕ್ಕಿತು. ಶಿವನ ಮಾತನ್ನು ತಿಳಿಸಿದಾಗ ನೆತ್ತಿಯ ರತ್ನವನ್ನು ಆ ತರುಣನಿಗೇನೆ ಕೊಟ್ಟಿತು. ಕುಂಟ ಈತನಿಗೆ ಎಲ್ಲಾ ವಿದ್ಯೆಗಳನ್ನು ದಾನ ಮಾಡಿದ. ವಿದ್ಯೆ ಮತ್ತು ರತ್ನವನ್ನು ಪಡೆದ ಇವನಿಗೆ ರಾಜನು ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ. ಅಷ್ಟೇ ಅಲ್ಲದೆ ರಾಜ್ಯವನ್ನು ಸಹ ನೀಡಲು; ಕೆರೆ ತುಂಬಿತು. ನಂತರ ತರುಣ ನೇಪಾಳಕ್ಕೆ ಹೋದ. ನೇಪಾಳದ ರಾಣಿ ಪ್ರಸವ ವೇದನೆಯಿಂದ ಒದ್ದಾಡುತ್ತಿದ್ದಳು. ಈತ ಕೊಟ್ಟ ಪ್ರಸಾದ ತಿಂದೊಡನೆ ಸುಖ ಪ್ರಸವವಾಗಿ ಗಂಡುಮಗು ಹುಟ್ಟಿತು. ಅದನ್ನು ಬಂಗಾರದ ತಟ್ಟೆಯಲ್ಲಿ ತಂದು ಇವನ ಮುಂದಿಟ್ಟರು. ಈತ ಕೇಳಿದ, 'ದಾನದ ಪುಣ್ಯ ಯಾವುದು' ಮಗು ಪಕಪಕನೇ ನಕ್ಕು ಹೇಳಿತು. 'ಹುಚ್ಚಾ, ಶಿವನನ್ನು ಕಂಡು ಬಂದರೂ ಜ್ಞಾನ ಬರಲಿಲ್ಲವೇ? ಯಾವ ಬೇಡ ನಿನಗೆ ಕಾಡಿನಲ್ಲಿ ಆಶ್ರಯ ಕೊಟ್ಟನೋ ಅವನೇ ನಾನು. ಅನ್ನ ದಾನ ಮಾಡಿದ್ದಕ್ಕೆ ಈಗ ರಾಜಕುಮಾರನಾಗಿ ಹುಟ್ಟಿದ್ದೇನೆ. ದಾನ ಮಾಡದ ನನ್ನ ಹೆಂಡತಿ ಇದೇ ಊರಿನಲ್ಲಿ ಹಂದಿಯಾಗಿ ಹುಟ್ಟಿದ್ದಾಳೆ' ಎಂದು ಆ ಮಗು ಹೇಳಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರ ಈ ಜನಪದ ಕಥೆ ದಾನದ ಮಹತ್ವವನ್ನು ಎಷ್ಟು ಹೃದಯ ಹಾಗೂ ಮನ ಮುಟ್ಟುವಂತೆ ಹೇಳುತ್ತದೆ ಅಲ್ಲವೆ! ಇದನ್ನು ನಾವೂ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಅಂತೆಯೇ ನಾವು ನಿಜತ್ವದಿ ಮನುಷ್ಯರಾಗುತ್ತೇವೆ.

ಧರಣಿ ನಡೀತಿದ್ರೆ ಡಿಕೆಶಿ ಬಳಿ ವಿಜಯೇಂದ್ರ ಫೈಲ್‌ಗೆ ಸಹಿ ಹಾಕಿಸ್ತಾರೆ! ಇದೆಂಥಾ ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್!!

ಬಿಜೆಪಿ ಹಿರಿಯ ಶಾಸಕ ಯತ್ನಾಳ್ ವಾಗ್ದಾಳಿ

ಬೆಂಗಳೂರು, ಜು.25– ಮುಡಾ ಹಗರಣ ಖಂಡಿಸಿ ವಿಧಾನಸಭೆಯಲ್ಲಿ ಅಹೋರಾತ್ರಿ ಧರಣಿ ನಡೆಯುತ್ತಿದ್ದರೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಡಿಸಿಎಂ ಡಿಕೆ ಶಿವಕುಮಾರ್ ಬಳಿ ಫೈಲ್‌ಗಳಿಗೆ ಸಹಿ ಹಾಕಿಸಿಕೊಳ್ಳುತ್ತಾರೆ. ಇದೆಂತಾ ಹೊಂದಾಣಿಕೆ ರಾಜಕೀಯ ಎಂದು ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ನಡೆಸಿದರು.



ಯತ್ನಾಳ್

ಮಾಧ್ಯಮದೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಸರಕಾರವು ಯಡಿಯೂರಪ್ಪ ಅವರನ್ನು ಕಾಪಾಡುತ್ತಿದೆಯಾ, ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದಾರಾ, ಜಮೀರ್, ವಿಜಯೇಂದ್ರ, ಅಶೋಕ್ ಎಲ್ಲರ ಜೊತೆಗೂ ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದೀರಾ ಅವರ ಕ್ಷೇತ್ರಗಳಿಗೆ ಮಾತ್ರ ಅನುದಾನ ಕೊಟ್ಟಿದ್ದಾರೆ. ಬೇರೆ ಯಾವ ಬಿಜೆಪಿ ಶಾಸಕರ ಕ್ಷೇತ್ರಗಳಿಗೂ ಅನುದಾನ ಸಿಕ್ಕಿಲ್ಲ. ಇದನ್ನು ಏನೆಂದು ಕರೆಯಬೇಕು ಎಂದು ಯತ್ನಾಳ್ ಪ್ರಶ್ನಿಸಿದರು.

ನಾವು ಇಲ್ಲಿ ಸರಕಾರ, ಸಿಎಂ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣದ ವಿರುದ್ಧ ಅಹೋರಾತ್ರಿ ಧರಣಿ ನಡೆಸುತ್ತಿದ್ದರೆ, ಮತ್ತೊಂದು ಕಡೆ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಡಿಸಿಎಂ ಜೊತೆಗೆ ಹರಟೆ ಹೊಡೆಯುತ್ತಿದ್ದಾರೆ. ಮರ್ಯಾದೆ ಇಲ್ಲವೇ. ಇದರ ಬಗ್ಗೆ ಹೈಕಮಾಂಡ್ ಗಮನಿಸುತ್ತದೆ. ಅವರನ್ನು ಸ್ಥಾನದಿಂದ ಕಿತ್ತು ಹಾಕಬೇಕು ಎಂದರು.

ನಾಗನಹಳ್ಳಿಯ ವ್ಯಕ್ತಿ ನಾಪತ್ತೆ



ಮೈಸೂರು: ತಾಲೂಕು ನಾಗನಹಳ್ಳಿ ನಿವಾಸಿ ತಿಮ್ಮೇಗೌಡ (36) ನಾಪತ್ತೆಯಾಗಿದ್ದಾರೆ.

ಜೂ.25ರಂದು ಕೆಲಸಕ್ಕೆ ಹೋದವರು ಕಾಣೆಯಾಗಿರುವುದಾಗಿ ತಂದೆ ತಿಮ್ಮೇಗೌಡ ಮೇಟಗಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇವರ ಮಾಹಿತಿ ಸಿಕ್ಕಲ್ಲಿ ದೂ. 0821–2418315 ಸಂಪರ್ಕಿಸಿ.

ಗ್ರೇಟರ್ ಬೆಂಗಳೂರು ವಿಧೇಯಕ ಪರಾಮರ್ಶೆಗೆ ಸದನ ಸಮಿತಿ ರಚನೆ

ವಿಧಾನಸಭೆಯಲ್ಲಿ ಡಿಸಿಎಂ ಡಿಕೆಶಿ



ಬೆಂಗಳೂರು: ಗ್ರೇಟರ್ ಬೆಂಗಳೂರು ವಿಧೇಯಕದ ಬಗ್ಗೆ ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ವಿಧೇಯಕ ಹಿಂಪಡೆದು ಸದನ ಸಮಿತಿ ರಚಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುರುವಾರ ಹೇಳಿದ್ದಾರೆ.

ಇಂದು ವಿಧಾನಸಭೆಯಲ್ಲಿ ಮುಡಾ ಹಗರಣ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಸದನದ ಬಾವಿಗಿಳಿದು ಪ್ರತಿಭಟನೆ ನಡೆಸುತ್ತಿರುವುದರ ನಡುವೆಯೇ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಗ್ರೇಟರ್ ಬೆಂಗಳೂರು ಮಸೂದೆಯನ್ನು ಪರ್ಯಾಲೋಚನೆಗಾಗಿ ಮಂಡಿಸಿ ಮಾತನಾಡಿದರು.

ಸುಮಾರು 1 ಕೋಟಿ 40 ಲಕ್ಷ ಜನಸಂಖ್ಯೆ ಇರುವ ಬೆಂಗಳೂರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಆಡಳಿತ ಸುಧಾರಣೆಯಾಗಬೇಕು. ನಾಗರಿಕ ಸೌಲಭ್ಯಗಳನ್ನು ನೀಡಬೇಕು. ಈ ಮೂಲಕ ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ನಗರಕ್ಕೆ ಹೊಸ ರೂಪ ನೀಡಬೇಕು, ಬ್ರಾಂಡ್ ಬೆಂಗಳೂರು ಆಗಬೇಕು ಎಂಬುದು ನಮ್ಮ ಉದ್ದೇಶ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪ್ರತಿಪಕ್ಷ ನಾಯಕ ಆರ್.ಅಶೋಕ್, ಈ ಮಸೂದೆಯ ಬಗ್ಗೆ ಹೆಚ್ಚು ಚರ್ಚೆ ಆಗಬೇಕು. ಬೆಂಗಳೂರನ್ನು ವಿಭಜಿಸುವುದನ್ನು ತಮ್ಮ ಪಕ್ಷ ಒಪ್ಪುವುದಿಲ್ಲ. ಈ ಸಂಬಂಧ ಶಾಸಕರು ಮತ್ತು ಎಂಎಲ್‌ಸಿಗಳನ್ನು ಒಳಗೊಂಡ ಸದನ ಸಮಿತಿಯನ್ನು ರಚಿಸಬೇಕು. ಆಗ ಮಾತ್ರ ಬೆಂಗಳೂರಿಗೆ ಒಂದು ರೂಪ ನೀಡಬಹುದು ಎಂದು ಸಲಹೆ ನೀಡಿದರು. ಕೇವಲ ಅಧಿಕಾರಿಯ ವರದಿಯನ್ನು ಆಧರಿಸಿ, ಕೆಲಸ ಮಾಡಿದರೆ, ಅದು ಬೆಂಗಳೂರಿಗೆ ಅಪಾಯಕಾರಿ. ಈ ಮಸೂದೆಯನ್ನು ಬಾಕಿ ಇರಿಸಬೇಕು ಮತ್ತು ಸದನ ಸಮಿತಿಯನ್ನು ರಚಿಸಬೇಕು ಎಂದು ಆಗ್ರಹಿಸಿದರು.

ಮತ್ತೊಬ್ಬ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ಉಪಮುಖ್ಯಮಂತ್ರಿ ಅವರು ಐತಿಹಾಸಿಕ ವಿಧೇಯಕವನ್ನು ತಂದಿದ್ದಾರೆ. ಆದರೆ ಅದನ್ನು ವಿಸ್ತೃತವಾಗಿ ಚರ್ಚಿಸಬೇಕಾಗಿದೆ. ಸದನ ಸಮಿತಿಯನ್ನು ರಚಿಸುವ ಮೂಲಕ, ಶಾಸಕರು ಮತ್ತು ಎಂಎಲ್‌ಸಿಗಳನ್ನು ಈ ಸಮಿತಿಯ ಭಾಗವಾಗಿ ಮಾಡಬೇಕು. ಮಸೂದೆಯ ಬಗ್ಗೆ ವಿವರವಾಗಿ ಚರ್ಚಿಸಬೇಕು ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಬೆಂಗಳೂರಿಗೆ ಆರ್ಥಿಕ ಶಕ್ತಿ ಹಾಗೂ ಆಡಳಿತದಲ್ಲಿ ಹೊಸ ರೂಪ ನೀಡುವ ಉದ್ದೇಶದಿಂದ ರೂಪಿಸಲಾಗಿರುವ ಗ್ರೇಟರ್ ಬೆಂಗಳೂರು ವಿಧೇಯಕವನ್ನು ಪರಾಮರ್ಶಿಸಲು ಸದನ ಸಮಿತಿ ರಚನೆಗೆ ನಮ್ಮ ಒಪ್ಪಿಗೆ ಇದೆ ಎಂದು ಹೇಳಿದರು.

ಬೆಂಗಳೂರಿನ ಶಾಸಕರಾದ ಸತೀಶ್ ರೆಡ್ಡಿ, ರಾಮಮೂರ್ತಿ ಅವರು ನನ್ನನ್ನು ಭೇಟಿ ಮಾಡಿ ಒಂದಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ನಮಗೂ ಸಹ ತರಾತುರಿಯಲ್ಲಿ ಈ ಬಿಲ್ ಅನ್ನು ತರುವ ಆಲೋಚನೆ ಇಲ್ಲ. ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ರಿಜ್ವಾನ್ ಅರ್ಷದ್, ಕೃಷ್ಣಬೈರೇಗೌಡ ಅವರ ಬಳಿಯೂ ಈ ವಿಚಾರವಾಗಿ ಚರ್ಚೆ ನಡೆಸಿದ್ದೇನೆ. ಈ ವಿಚಾರವಾಗಿ ಸದನ ಸಮಿತಿ ರಚನೆ ಮಾಡಲು ನಮ್ಮ ಒಪ್ಪಿಗೆಯಿದೆ ಎಂದು ಡಿಸಿಎಂ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ನಿವೇಶನಾಕಾಂಕ್ಷಿಗಳ ಮೂಢರನ್ನಾಗಿಸಿದ ಮುಡಾ

ಪಾಪ, ಚಾತಕಪಕ್ಷಿಗಳಂತೆ ಕಾದಿರುವವರ ಬಗ್ಗೆ ಯಾರಿಗೂ ಇಲ್ಲ ಕಾಳಜಿ; ಹಣ, ಅಧಿಕಾರ ಇದ್ದವರಿಗೆ ಮಣೆ; ಜನಸಾಮಾನ್ಯರಿಗಂತೂ 'ಮುಡಾ' ಎಂದಿಗೂ 'ನಿಗೂಢ'

- ಅರ್ಜಿ ಸಲ್ಲಿಸಿ 30 ವರ್ಷಗಳಿಂದ ನಿವೇಶನಕ್ಕಾಗಿ 86,000 ಮಂದಿ ಕಾಯುತ್ತಿದ್ದಾರೆ
- ಗುಂಪು ಮನೆ ಯೋಜನೆಯಡಿ ಸಮೀಕ್ಷೆಯಲ್ಲಿ 45,000 ಮಂದಿ ಮನೆ ಬೇಕೆಂದು ಕೋರಿಕೆ ಸಲ್ಲಿಸಿದ್ದಾರೆ
- ಖಾಸಗಿ ಡೆವಲಪರ್‌ಗಳು ಭೂಮಿ ಖರೀದಿಸಿ ನಿವೇಶನ, ಅಪಾರ್ಟ್‌ಮೆಂಟ್ ಮಾರುತ್ತಿದ್ದಾರೆ
- ಮುಡಾಗೇಕೆ ಭೂಮಿ ಸಿಗುತ್ತಿಲ್ಲ, ಕೇವಲ ಖಾಸಗಿ ಬಡಾವಣೆಗಳಿಗೆ ನಕ್ಷೆ ನೀಡಿ ರಿಯಲ್ ಎಸ್ಟೇಟ್ ಮಾಫಿಯಾಗೆ ಕೈಜೋಡಿಸುವುದೇ ಪ್ರಾಧಿಕಾರದ ಕೆಲಸವೇ?
- ಬಡಾವಣೆ ರಚಿಸಿ ಅಗತ್ಯವಿರುವವರಿಗೆ ನಿವೇಶನ, ಮನೆ ನೀಡುವ ಮೂಲ ಉದ್ದೇಶ ಮರೆತ ಮುಡಾದ ಅಗತ್ಯವಿದೆಯೇ?
- ಕೂಡಾ ಆ್ಯಕ್ಟ್, ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಉಲ್ಲಂಘನೆಯಾಗುತ್ತಿದ್ದರೂ ಮುಡಾ ಸದಸ್ಯರಾದ ಜನಪ್ರತಿನಿಧಿಗಳ ಮೌನ ಸರಿಯೇ?
- ನಿವೇಶನ ರಹಿತರಿಗೆ ಲಭ್ಯವಾಗದ ನಿವೇಶನಗಳು ಉಳ್ಳವರಿಗೆ ಹೇಗೆ ದಕ್ಕುತ್ತಿವೆ?

● ಎಸ್.ಟಿ.ರವಿಕುಮಾರ್

ಮೈಸೂರು, ಜು.25–ಮೈಸೂರು ನಗರವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಪಡಿಸಿ ಸ್ವಂತ ಸೂರಿಲ್ಲದ ಜನಸಾಮಾನ್ಯರಿಗೆ ನಿವೇಶನ ಅಥವಾ ಮನೆ ಹಂಚಿಕೆ ಮಾಡಿ ಅವರ ನೆಮ್ಮದಿ ಜೀವನಕ್ಕೆ ನೆರವಾಗಬೇಕಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ), ತನ್ನ ಉದ್ದೇಶವನ್ನು ಮರೆತು ಎಷ್ಟೋ ವರ್ಷಗಳೇ ಕಳೆದಿವೆ!



ವಿಶಾಲವಾದ ರಸ್ತೆ, ಮಳೆ ನೀರು, ಚರಂಡಿ, ಒಳಚರಂಡಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಉದ್ಯಾನವನ, ಓಪನ್ ಸ್ಪೇಸ್, ನಾಗರಿಕ ಸೌಲಭ್ಯ ನಿವೇಶನ, ಎಸ್‌ಟಿಪಿಗಳಂತಹ ಮೂಲ ಸೌಲಭ್ಯಗಳೊಂದಿಗೆ ಯೋಜನಾಬದ್ಧವಾಗಿ ವಸತಿ ಬಡಾವಣೆಗಳನ್ನು ನಿರ್ಮಿಸಿ ಲಭ್ಯವಾಗುವ ವಿವಿಧ ಅಳತೆಯ ನಿವೇಶನಗಳನ್ನು ನಿಯಮಾನುಸಾರ ಅಧಿಸೂಚನೆ ಹೊರಡಿಸಿ ಅರ್ಹ ಆಕಾಂಕ್ಷಿಗಳಿಗೆ ಜ್ಯೇಷ್ಠತೆ ಪ್ರಕಾರ ಹಂಚಿಕೆ ಮಾಡುವುದು ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲ ಉದ್ದೇಶ.

ನಗರ ಬೆಳೆದಂತೆ ಜನಸಂಖ್ಯೆಯೂ ಹೆಚ್ಚಾದ ಕಾರಣ, ಸಹಜವಾಗಿಯೇ ಮೈಸೂರಲ್ಲಿ ನಿವೇಶನ, ಮನೆಗಳಿಗೆ ಬೇಡಿಕೆ ಅಧಿಕವಾಗಿದೆ. ನಿವೃತ್ತರೂ ಸಾಂಸ್ಕೃತಿಕ ರಾಜಧಾನಿ ಮೈಸೂರಿನ ನಿರ್ಮಲ ವಾತಾವರಣದಲ್ಲಿ ನೆಲೆಸಲು ಬಯಸುತ್ತಿರುವುದರಿಂದ ಅವರು ಇಲ್ಲಿ ನಿವೇಶನ ಹೊಂದಿ ಮನೆ ಕಟ್ಟಿಕೊಳ್ಳಲು ಮುಂದಾಗುತ್ತಾರೆ.

ಆದರೆ ಮುಡಾ ಮಾತ್ರ ಖಾಸಗಿ ಡೆವಲಪರ್‌ಗಳು, ವ್ಯಕ್ತಿಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ರಿಯಲ್ ಎಸ್ಟೇಟ್ ಮಾಫಿಯಾ ನಿರ್ಮಿಸುವ ವಸತಿ ಬಡಾವಣೆಗಳಿಗೆ ಪ್ಲಾನ್ ಅಪ್ರೂವ್ ಮಾಡಿ ನಿವೇಶನಗಳ ಸಿಡಿ (ಕರೆಕ್ಟ್ ಡೈಮೆನ್ಷನ್) ಪಟ್ಟಿ ಬಿಡುಗಡೆ ಮಾಡಿ, ಖಾತೆ, ಕಂದಾಯ, ಸಿಆರ್ (ಕಂಪ್ಲೀಷನ್ ರಿಪೋರ್ಟ್), ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ (NOC) ನೀಡುವ ಕೆಲಸದಲ್ಲಿ ತೊಡಗಿ ತನ್ನ ಮೂಲ ಉದ್ದೇಶ, ಜವಾಬ್ದಾರಿಯನ್ನು ಮರೆತಿದೆ.

ಖಾಸಗಿಯವರು ನೂರಾರು ಎಕರೆ ಭೂಮಿಯಲ್ಲಿ ಬಡಾವಣೆ ನಿರ್ಮಿಸಿ ಸಾವಿರಾರು ನಿವೇಶನ, ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್‌ಗಳನ್ನು ಮಾರಬಹುದು ಎಂದಾದರೆ, ಒಂದು ಪ್ಲಾನಿಂಗ್ ಅಥಾರಿಟಿಯಾಗಿದ್ದು, ಇಂಜಿನಿಯರ್‌ಗಳು, ಪ್ಲಾನರ್‌ಗಳು, ಐಎಎಸ್–ಕೆಎಎಸ್ ಅಧಿಕಾರಿಗಳು, ವಿಶೇಷ ಭೂ ಸ್ವಾಧೀನಾಧಿಕಾರಿ, ಮುಖ್ಯ ಲೆಕ್ಕಾಧಿಕಾರಿ, ಸರ್ವೆಯರ್‌ಗಳು, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ವಾಹನ ವ್ಯವಸ್ಥೆ ಸೇರಿದಂತೆ ಎಲ್ಲಾ ಸೌಲಭ್ಯ ಹೊಂದಿರುವ ಪ್ರಾಧಿಕಾರಕ್ಕೆ ರೈತರಿಂದ ಭೂಮಿ ಪಡೆದು ಬಡಾವಣೆ ಮಾಡಲು ಸಾಧ್ಯವಾಗುತ್ತಿಲ್ಲವೇಕೆ ಎಂಬ ಯಕ್ಷ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ.

ಅಂದರೆ ಖಾಸಗಿ ಡೆವಲಪರ್‌ಗಳ ಮೇಲೆ ರೈತರಿಗಿರುವ ನಂಬಿಕೆ, ವಿಶ್ವಾಸ ಮುಡಾದಂತಹ ಸರ್ಕಾರಿ ಸಂಸ್ಥೆ ಮೇಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕಳೆದ 2017ರಲ್ಲಿ ಡಿ.ಧ್ರುವಕುಮಾರ್ ಅಧ್ಯಕ್ಷರಾಗಿದ್ದಾಗ, ಪಿ.ಎಸ್.ಕಾಂತರಾಜು ಕಮಿಷ್ನರ್ ಹಾಗೂ ಎಂ.ಕೆ.ಸವಿತಾ ಕಾರ್ಯದರ್ಶಿಯಾಗಿದ್ದ ವೇಳೆ 219 ಎಕರೆ ಪ್ರದೇಶದ ಆರ್‌ಟಿ ನಗರ ಬಡಾವಣೆಯಲ್ಲಿ 1750 ನಿವೇಶನ ಹಾಗೂ ಲಲಿತಾದ್ರಿನಗರ ಬಡಾವಣೆಯಲ್ಲಿ 87 ಎಕರೆ ಪ್ರದೇಶದಲ್ಲಿ 570 ನಿವೇಶನಗಳನ್ನು ಹಂಚಿದ್ದನ್ನು ಹೊರತುಪಡಿಸಿದರೆ, ಕಳೆದ 8 ವರ್ಷಗಳಲ್ಲಿ ಪ್ರಾಧಿಕಾರದಿಂದ ಒಂದೇ ಒಂದು ನಿವೇಶನ ನೀಡಲಿಲ್ಲ.

ನಿವೇಶನಕ್ಕಾಗಿ 30 ವರ್ಷಗಳಿಂದ ಸುಮಾರು 86,000 ಮಂದಿ ಅರ್ಜಿ ಸಲ್ಲಿಸಿ ಕಾಯುತ್ತಿದ್ದು, ಆ ಪೈಕಿ ಎಷ್ಟೋ ಮಂದಿ ಸಾವನ್ನಪ್ಪಿದ್ದಾರೆ. ಈ ಹಿಂದೆ ಕೈಗೆಟಕುವ ದರದಲ್ಲಿ ಮನೆ ನೀಡುವ ಉದ್ದೇಶದಿಂದ ಮುಡಾ ಗುಂಪು ವಸತಿ ಯೋಜನೆ (Group Housing Scheme) ಜಾರಿಗೆ ಮುಂದಾಗಿ ಬೇಡಿಕೆ ಸಮೀಕ್ಷೆ ಮಾಡಿದಾಗ ಮನೆ ಬೇಕೆಂದು 45,000 ಮಂದಿ ಅರ್ಜಿ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಬಲ್ಲಹಳ್ಳಿ ವಸತಿ ಬಡಾವಣೆ ರಚಿಸಲು ಮುಂದಾದಾಗ ಭೂ ಸ್ವಾಧೀನಕ್ಕೆ ರೈತರು ನಿರಾಕರಿಸಿದ್ದರಿಂದ ಸರ್ಕಾರ ಶೇ.50:50ರ ಅನುಪಾತದ ಯೋಜನೆಯನ್ನು ಪರಿಚಯಿಸಿ ರೈತರ ಮನವೊಲಿಸಲು ಯತ್ನಿಸಲಾಗಿತ್ತಾದರೂ, ಸ್ಥಳೀಯ ರಾಜಕೀಯದಿಂದಾಗಿ ಆ ಯೋಜನೆಯೂ ನೆಲ ಕಚ್ಚಿತು.

ಬಡಾವಣೆಗೆ ಭೂಮಿ ಪಡೆಯಲೆಂದು ಮಾಡಿದ್ದ ಶೇ.50:50ರ ಅನುಪಾತದ ವ್ಯವಸ್ಥೆಯನ್ನು ಅಧಿಕಾರಿಗಳು ಕೆಲವರಿಗಾಗಿ ಹಾಗೂ ತಮ್ಮ ಸ್ವಾರ್ಥಕ್ಕಾಗಿ ದುರ್ಬಳಕೆ ಮಾಡಿಕೊಂಡ ಪರಿಣಾಮ ಇಂದು ಮುಡಾದಲ್ಲಿ ಪರಿಹಾರವಾಗಿ, ಬದಲಿಗೆ ಹಾಗೂ ಪ್ರೋತ್ಸಾಹದಾಯಕ ನಿವೇಶನಗಳನ್ನು ಪರಭಾರೆ ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರ ಸಂಬಂಧ ವಿಧಾನಸಭಾ ಅಧಿವೇಶನದಲ್ಲೂ ಭಾರಿ ಸದ್ದು ಮಾಡುತ್ತಿದೆ. ಹಗರಣ, ಅವ್ಯವಹಾರ, ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಮುಡಾ ಸಂಸ್ಥೆ ಇರಬೇಕೇ ಎಂದು ಅದರ ಅಸ್ತಿತ್ವವನ್ನೇ ಪ್ರಶ್ನಿಸುತ್ತಿರುವವರು, ನಿವೇಶನ ರಚಿಸಿ ಜನರಿಗೆ ನೀಡದೇ ತನ್ನ ಮೂಲ ಉದ್ದೇಶವನ್ನೇ ಮರೆತಿರುವ ಮುಡಾ ಅಧಿಕಾರಿಗಳು, ಜನಪ್ರತಿನಿಧಿಗಳ ವರ್ತನೆ ಬಗ್ಗೆ ಯಾರೂ ಪ್ರಶ್ನಿಸದಿರುವುದು ವಿಪರ್ಯಾಸವೇ ಸರಿ.

ಉಳ್ಳವರು ಇಲ್ಲದವರ ತಟ್ಟೆಗೆ ಕೈ ಹಾಕದಿದ್ದರೆ ಅರ್ಹರಿಗೆಲ್ಲಾ ಮೈಸೂರಲ್ಲಿ ನಿವೇಶನ ಸಿಗುತ್ತೆ!

- ಮನೆ ಮಾದೇಗೌಡರ ಮಾರ್ಮಿಕ ಕಟು ಸತ್ಯ ಉಲ್ಲೇಖ
- ಈ ಘೋಷಣೆ ಮೂಲಕ ಜನಪ್ರತಿನಿಧಿಗಳು, ಸರ್ಕಾರ ಮಾಡಬೇಕು
- ಎಲ್ಲರಿಗೂ ಕೊಡುವಷ್ಟು ನಿವೇಶನ ಮೈಸೂರಲ್ಲಿವೆ

ಮೈಸೂರು, ಜು.25– ಉಳ್ಳವರು ಇಲ್ಲದವರ ತಟ್ಟೆಗೆ ಕೈ ಹಾಕದಿದ್ದರೆ ಅರ್ಹರಿಗೆಲ್ಲಾ ಮೈಸೂರಿನಲ್ಲಿ ನಿವೇಶನ ನೀಡಲು ಅವಕಾಶವಿದೆ ಎಂದು ಆಶಾ ಮಂದಿರ ಯೋಜನೆ ಮೂಲಕ ಮನೆ ಮನೆ ಮಾದೇಗೌಡ್ರು ಎಂದೇ ಖ್ಯಾತರಾಗಿರುವ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರು ತಿಳಿಸಿದ್ದಾರೆ.



ಮಾದೇಗೌಡ್ರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಹಗರಣದ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರಿನಲ್ಲಿ ನೆಲೆಸಿರುವ, ನಿವೇಶನ ಅಥವಾ ಸ್ವಂತ ಸೂರಿಲ್ಲದ ಎಲ್ಲರಿಗೂ ನೀಡುವಷ್ಟು ನಿವೇಶನಗಳು ಲಭ್ಯವಿವೆ. ಆದರೆ ಇಲ್ಲದವರ ತಟ್ಟೆಗೆ ಉಳ್ಳವರು ಕೈ ಹಾಕಬಾರದು. ಈ ಘೋಷಣೆಯೊಂದಿಗೆ ಜನಪ್ರತಿನಿಧಿಗಳು ಮತ್ತು ಸರ್ಕಾರ ಬಹಿರಂಗವಾಗಿ ಮನವಿ ಮಾಡಬೇಕು ಎಂದಿದ್ದಾರೆ.

ನಮ್ಮ ಜನಪ್ರತಿನಿಧಿಗಳು ಸ್ವಾರ್ಥ, ಸ್ವ–ಹಿತಾಸಕ್ತಿ, ಜಾತಿ ವ್ಯಾಮೋಹ, ರಾಜಕೀಯ ಇಚ್ಛಾಶಕ್ತಿ ಇವುಗಳನ್ನು ಬಿಟ್ಟು ಹೊರಬಂದು, ಸಾರ್ವಜನಿಕರ ಸೇವೆಗೆ ಮುಂದಾದರೆ ಹಾಗೂ ಮೈಸೂರಿನವರೇ ಆಗಿರುವ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಿಗಿ ನಿಲುವನ್ನು ಬಿಟ್ಟು ಹೊರಬಂದರೆ ಮಾತ್ರ ಇದು ಸಾಧ್ಯ ಎಂದು ಅಭಿಪ್ರಾಯಿಸಿದ್ದಾರೆ.

ನಾವು ಈ ಹಿಂದೆ ಡಂಗೂರ ಸಾರುವ ಮೂಲಕ ಮನೆ ಮನೆಗೆ ಹೋಗಿ ಸಮೀಕ್ಷೆ ಮಾಡಿದ್ದೆವು. ಈಗಲೂ ನಮ್ಮ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಮೀಕ್ಷೆ ನಡೆಸಿ, ಯಾರಿಗೆ ನಿವೇಶನವಿಲ್ಲ, ಯಾರಿಗೆ ಆಶ್ರಯ ಇಲ್ಲವೋ ಅಂತಹವರನ್ನು ಗುರುತಿಸಿದರೆ ಲಭ್ಯವಿರುವ ನಿವೇಶನಗಳನ್ನು ಅರ್ಹರಿಗೆ ನೀಡಲು ಸಾಧ್ಯವಾಗುತ್ತದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಕ್ಕೆ ಅರ್ಜಿ ಹಾಕಿ ಕಾಯುತ್ತಿರುವ 86 ಸಾವಿರ ಮಂದಿಯೂ ಅರ್ಹರೆಂದು ಹೇಳಲು ಬರುವುದಿಲ್ಲ. ನಿವೇಶನ ಅಥವಾ ಮನೆ ಇರುವವರು ಸ್ವಯಂಪ್ರೇರಣೆಯಿಂದ ಹಿಂದೆ ಸರಿಯುವ ಮೂಲಕ ಯಾರಿಗೆ ನಿವೇಶನ ಇಲ್ಲವೋ ಅವರಿಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು ಎಂದು ಮನವಿ ಮಾಡಿದ್ದಾರೆ.

ಮೈಸೂರಿನಲ್ಲಿ ವಾಸ ಮಾಡಲು ಜಾಗ ಇದೆ. ನೀರು, ರಸ್ತೆ, ವಿದ್ಯುತ್, ಸೌರಶಕ್ತಿ ಸೌಲಭ್ಯವಿದೆ. ಮೈಸೂರನ್ನು ಸ್ವರ್ಗ ಮಾಡಲು ಬೇಕಾದ ಎಲ್ಲಾ ಸೌಕರ್ಯಗಳೂ ಇವೆ. ಹಾಗೆಯೇ ಪ್ರತಿಯೊಬ್ಬರಿಗೂ ಇಲ್ಲಿ ಬದುಕುವ ಹಕ್ಕಿದೆ. ಆದರೆ ಪ್ರಾಧಿಕಾರ ಅಥವಾ ಸರ್ಕಾರ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದರೆ ಎಲ್ಲರಿಗೂ ಆಶ್ರಯ ಒದಗಿಸಲು ಸಾಧ್ಯವಿದೆ. ನಮ್ಮ ಅವಧಿಯಲ್ಲಿ ನಾವೇ ಸ್ವತಃ ಮನೆ ಮನೆಗೆ ಹೋಗಿ ಸಮೀಕ್ಷೆ ನಡೆಸಿ, ನಿವೇಶನ ಇಲ್ಲದವರಿಗೆ 26 ಸಾವಿರ ನಿವೇಶನಗಳನ್ನು ಕೊಡಿಸಲು ಸಾಧ್ಯವಾಯಿತು. ಅದೇ ಮಾದರಿಯಲ್ಲಿ ಪ್ರಾಧಿಕಾರವೂ ರೈತರಿಂದ ಪರಸ್ಪರ ಒಪ್ಪಂದದ ಮೇರೆಗೆ ಭೂಮಿ ಪಡೆದು ನಿವೇಶನ ಮಾಡಿ, ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ನಿವೇಶನಗಳನ್ನು ಹಂಚಿದ್ದಲ್ಲಿ ಎಲ್ಲಾ ಸಮಸ್ಯೆ ಬಗೆಹರಿಯಲಿದೆ ಎಂದು ಸಲಹೆ ನೀಡಿದ್ದಾರೆ.

ಒಲಿಂಪಿಕ್ 2024: ಅಂಕಿತಾ ಭಗತ್ ಬೃಹತ್ ಅಂಕ ಗಳಿಕೆ; ಆರ್ಚರಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟ ಭಾರತ

ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನ ರ‍್ಯಾಂಕಿಂಗ್ ಸುತ್ತಿನಲ್ಲಿ ಭಾರತದ ಮಹಿಳಾ ಆರ್ಚರಿ ತಂಡ ಉತ್ತಮ ಪ್ರದರ್ಶನ ನೀಡಿದೆ. ದೀಪಿಕಾ ಕುಮಾರಿ, ಅಂಕಿತಾ ಭಗತ್ ಮತ್ತು ಭಜನ್ ಕೌರ್ ಭಾರತಕ್ಕೆ ಒಟ್ಟು 1,983 ಅಂಕಗಳನ್ನು ನೀಡಿದ್ದಾರೆ.

ಇದರೊಂದಿಗೆ ಭಾರತ ತಂಡ ನಾಲ್ಕನೇ ಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ. ವೈಯಕ್ತಿಕ ಸ್ಕೋರ್ ಕುರಿತು ಹೇಳಬೇಕೆಂದರೆ ಅಂಕಿತಾ ಭಗತ್ ಅವರು 72 ಶಾಟ್‌ಗಳನ್ನು ಹೊಡೆಯುವ ಮೂಲಕ ಒಟ್ಟು 666 ಅಂಕಗಳನ್ನು ಗಳಿಸಿ 11ನೇ ಸ್ಥಾನದಲ್ಲಿ ನಿಂತರು.

ಭಾರತೀಯ ಅಥ್ಲೀಟ್‌ಗಳ ವೈಯಕ್ತಿಕ ಪ್ರದರ್ಶನವನ್ನು ಗಮನಿಸಿದರೆ ಅಂಕಿತಾ 11ನೇ ಸ್ಥಾನದಲ್ಲಿದ್ದರೆ, ಭಜನ್ ಕೌರ್ 22ನೇ ಹಾಗೂ ದೀಪಿಕಾ ಕುಮಾರಿ 23ನೇ ಸ್ಥಾನದಲ್ಲಿದ್ದಾರೆ. ದ್ವಿತೀಯಾರ್ಧದ ಕೊನೆಯ ಎರಡು ಸೆಟ್‌ಗಳಲ್ಲಿ ಅಂಕಿತಾ ಅದ್ಭುತ ಪುನರಾಗಮನ ಮಾಡಿದರು. ಇದರಲ್ಲಿ ಅವರು 120 ರಲ್ಲಿ 112 ಅಂಕಗಳನ್ನು ಗಳಿಸಿದರು. ಕೊನೆಯ ಕ್ಷಣಗಳಲ್ಲಿ, ವಿಶೇಷವಾಗಿ 18 ವರ್ಷದ ಭಜನ್ ಕೌರ್ ಅವರಿಂದ ಅತ್ಯಂತ ಕಳಪೆ ಪ್ರದರ್ಶನ ಕಂಡುಬಂದಿದೆ. ಅವರು ಒಟ್ಟು 659 ಅಂಕಗಳನ್ನು ಸಂಗ್ರಹಿಸಿದರು. ದೀಪಿಕಾ ಅವರಿಗಿಂತ ಒಂದು ಅಂಕ ಹಿಂದಿದ್ದು, 658 ಅಂಕಗಳೊಂದಿಗೆ ರ‍್ಯಾಂಕಿಂಗ್ ಸುತ್ತನ್ನು ಮುಗಿಸಿದರು.

ನಿಯಮಗಳ ಕುರಿತಂತೆ ಹೇಳಬೇಕೆಂದರೆ, ತಂಡದ ಪಟ್ಟಿಯಲ್ಲಿ ಅಗ್ರ–4 ಸ್ಥಾನ ಪಡೆಯುವ ತಂಡಗಳು ಟೀಮ್ ಈವೆಂಟ್‌ನ ಕ್ವಾರ್ಟರ್ ಫೈನಲ್‌ಗೆ ನೇರ ಪ್ರವೇಶ ಪಡೆಯುತ್ತವೆ. ಭಾರತ 1983 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದರಿಂದ, ಅದು ನೇರವಾಗಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದೆ. ಭಾರತ ಈಗ ಕ್ವಾರ್ಟರ್ ಫೈನಲ್‌ನಲ್ಲಿ ಫ್ರಾನ್ಸ್ ಮತ್ತು ನೆದರ್‌ಲ್ಯಾಂಡ್ಸ್ ಪಂದ್ಯದ ವಿಜೇತರನ್ನು ಎದುರಿಸಲಿದೆ.

ಪ್ರವಾಹ ಪರಿಸ್ಥಿತಿ ಭೀತಿ; ನದಿ ಪಾತ್ರದ ಸ್ಥಳಗಳಿಗೆ ಜಿಪಂ ಸಿಇಓ ಭೇಟಿ

ಗ್ರಾಮಸ್ಥರಿಗೆ ಎಚ್ಚರಿಕೆ ಪಾಠ



ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಪರಿಶೀಲನೆ ನಡೆಸುತ್ತಿರುವುದು

ಮೈಸೂರು, ಜು.25(ಎಂಕೆ)– ತಿ.ನರಸೀಪುರ ತಾಲೂಕಿನ ಬೆನಕನಹಳ್ಳಿ ಗ್ರಾಪಂ ವ್ಯಾಪ್ತಿಯ ಕೆಂಡಗನಕೊಪ್ಪಲು, ಕಲಿಯೂರು ಗ್ರಾಪಂ ವ್ಯಾಪ್ತಿಯ ತಡಿಮಾಲಂಗಿ ಹಾಗೂ ಹೆಮ್ಮಿಗೆ ಗ್ರಾಮದಲ್ಲಿನ ನದಿ ಪಾತ್ರ ಸ್ಥಳಗಳಿಗೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಗುರುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನದಿ ಪಾತ್ರದಲ್ಲಿರುವ ಮನೆಗಳಿಗೆ ಭೇಟಿ ನೀಡಿ, ಗ್ರಾಮಸ್ಥರು ಎಚ್ಚರಿಕೆಯಿಂದಿರಲು ಹಾಗೂ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ತಿಳಿಸಿದರಲ್ಲದೆ ಪರಿಸ್ಥಿತಿಯನ್ನಾಧರಿಸಿ ಸ್ಥಳಾಂತರ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಲ್ ಜೀವನ್ ಮಿಷನ್ ಯೋಜನೆಯಡಿ ಮನೆಗಳಿಗೆ ನಳ(ನಲ್ಲಿ) ಸಂಪರ್ಕ ನೀಡಿರುವ ಬಗ್ಗೆ ಪರಿಶೀಲಿಸಿ, ಕಲಿಯೂರು ಗ್ರಾಪಂ ಗ್ರಂಥಾಲಯ ಹಾಗೂ ಹೆಮ್ಮಿಗೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ಬಿಸಿ ಊಟ ವಿತರಣೆ ಬಗ್ಗೆ ಶಾಲಾ ಮೂಲ ಸೌಕರ್ಯಗಳ ಪರಿಶೀಲನೆ ನಡೆಸಿದರು. ಹಾಗೆಯೇ ಕಲಿಯೂರು ಗ್ರಾಪಂ ಕಚೇರಿಗೆ ಭೇಟಿ ನೀಡಿ ಸಿಬ್ಬಂದಿಗಳ ಹಾಜರಾತಿ, ತೆರಿಗೆ ಸಂಗ್ರಹಣೆ, ಆಸ್ತಿಗಳ ಸರ್ವೇ, ನೀರು ನಿರ್ವಹಣೆ, ಮನ್ರೇಗಾ ಯೋಜನೆ, ಜೆ ಜೆ ಎಮ್ ಯೋಜನೆ ಅನುಷ್ಠಾನ ಸಭೆ ನಡೆಸಿದರು.

ಜಿಪಂ ಯೋಜನಾಧಿಕಾರಿ ಮೇಘಲಾ, ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತ ರಂಜಿತ್, ಸಹಾಯಕ ಕಾರ್ಯಪಾಲಕ ಅಭಿಯಂತರ ಕೈಲಾಶ್ ಮೂರ್ತಿ, ಸಹಾಯಕ ನಿರ್ದೇಶಕ ಶಶಿಕುಮಾರ್, ತಾಪಂ ಯೋಜನಾಧಿಕಾರಿ ರಂಗಸ್ವಾಮಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಗಾಯಿತ್ರಿ, ಶೈಲಜಾ, ಚಿದಾನಂದ ಮತ್ತಿತರರಿದ್ದರು.

ಜು.28, ಪಡುವಾರಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ವೈದ್ಯರ, ಪತ್ರಿಕಾ ದಿನಾಚರಣೆ

ಮೈಸೂರು, ಜು.25(ಜಿಎ)–ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಭೂಮಿಗಿರಿ ನಾರಾಯಣಪ್ಪ ಸಾಂಸ್ಕೃತಿಕ ಪ್ರತಿಷ್ಠಾನ, ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ವತಿಯಿಂದ ಜು.28ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಪಡುವಾರಹಳ್ಳಿ ಶ್ರೀ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ವೈದ್ಯರ ಹಾಗೂ ಪತ್ರಿಕಾ ದಿನಾಚರಣೆ ಏರ್ಪಡಿಸಲಾಗಿದೆ ಎಂದು ಕಾರ್ಯಕ್ರಮದ ಆಯೋಜಕ ಎನ್. ಬೆಟ್ಟೇಗೌಡ ತಿಳಿಸಿದ್ದಾರೆ.



ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆ ಮುಖ್ಯಸ್ಥ ಡಾ.ಸದಾನಂದ, ಸಾಹಿತಿ ಡಾ.ಸಿಪಿಕೆ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಪಾಲಿಕೆ ಮಾಜಿ ಸದಸ್ಯರಾದ ನಮ್ರತಾ ರಮೇಶ್, ಭಾಗ್ಯ ಮಹದೇಶ್, ವರಿಷ್ಠ ಕಾರ್ಮಿಕ ಅಧಿಕಾರಿ ವಿಷ್ಣುಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಭಾಗವಹಿಸಲಿದ್ದಾರೆ.

ಅತಿಥಿಗಳಾಗಿ ಅಲೆಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಭೈರಿ, ಜಿಲ್ಲಾ ರಾಜ್ಯಪಾಲ ಸಿರಿಬಾಲು, ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಜನಹಿತ ಸಂಘದ ಅಧ್ಯಕ್ಷ ಎಂ. ಭೈರಪ್ಪ, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಎಂ. ಮಹದೇವಸ್ವಾಮಿ, ಉಪಾಧ್ಯಕ್ಷ ಎಸ್. ರಾಮು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್, ಅಲೆಯನ್ಸ್ ಕ್ಲಬ್ ಕಾರ್ಯದರ್ಶಿ ಲಕ್ಷ್ಮೀದೇವಿ, ಖಜಾಂಚಿ ಎಂ.ಎನ್. ಚಂದ್ರಶೇಖರ್ ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ವೈದ್ಯ ಹಾಗೂ ಪತ್ರಿಕಾ ದಿನದ ಅಂಗವಾಗಿ ಅಂಶಿ ಪ್ರಸನ್ನ ಕುಮಾರ್– ಸಾಹಿತ್ಯರತ್ನ, ಡಾ.ಸದಾನಂದ, ಡಾ.ರಘುನಂದನ ಶೇಖರಪ್ಪ– ವೈದ್ಯರತ್ನ, ಸಿ.ಕೆ. ಮಹೇಂದ್ರ, ರಾಮ್– ಮಾಧ್ಯಮ ರತ್ನ ಪಶಸ್ತಿ ಪ್ರದಾನ ಮಾಡಲಾಗುವುದು ಹಾಗೂ ನಗರದ ಪ್ರಮುಖ ಆಸ್ಪತ್ರೆಗಳಿಂದ ಮಧುಮೇಹ, ರಕ್ತದೊತ್ತಡ, ನೇತ್ರ, ಕೀಲು ಮತ್ತು ಮೂಳೆ, ದಂತ ತಪಾಸಣೆ, ಡಾ.ಎ.ಎಸ್. ಪೂರ್ಣಿಮಾ ಅವರಿಂದ ಗರ್ಭಕೋಶದ ತೊಂದರೆ, ಮುಟ್ಟಿನ ಸಮಸ್ಯೆ ತಪಾಸಣೆ ನಡೆಲಾಗುವುದು. ಅಗತ್ಯವಿರುವರಿಗೆ ಕನ್ನಡಕಗಳನ್ನು ಕೂಡ ವಿತರಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲಿನಿಂದ ಇಳಿದು ಅದೇ ರೈಲಿನ ಚಕ್ರಕ್ಕೆ ತಲೆಕೊಟ್ಟು ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು,ಜು.25– ರೈಲಿಗೆ ತಲೆಕೊಟ್ಟು ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಮೆಜೆಸ್ಟಿಕ್ ರೈಲ್ವೆ ನಿಲ್ದಾಣದಲ್ಲಿ ಇಂದು(ಗುರುವಾರ) ನಡೆದಿದೆ. ಪಶ್ಚಿಮ ಬಂಗಾಳ ಮೂಲದ ಸುಶಾಂತ್ (40) ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ಒಡೆಯರ್ ಎಕ್ಸ್‌ಪ್ರೆಸ್ ರೈಲಿಗೆ ತಲೆಕೊಟ್ಟು ಸುಶಾಂತ್ ಆತ್ಮಹತ್ಯೆಗೆ ಶರಣಾಗಿದ್ದಾನೆ. ಇಂದು ಸಂಜೆ 4 ಗಂಟೆ ಸುಮಾರಿಗೆ ಬೆಂಗಳೂರಿನಿಂದ ಮೈಸೂರಿಗೆ ರೈಲು ಹೊರಟಿತ್ತು. ರೈಲು ಹೊರಡುತ್ತಿದ್ದಂತೆ ರೈಲಿನಿಂದ ಇಳಿದು ಅದೇ ರೈಲಿನ ಚಕ್ರಕ್ಕೆ ತಲೆಕೊಟ್ಟು ಸುಶಾಂತ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತ್ಮಹತ್ಯೆಗೆ ಶರಣಾದ ಸುಶಾಂತ್ ಮೈಸೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಎಂದು ತಿಳಿದು ಬಂದಿದೆ. ಸುಶಾಂತ್ ಒಡೆಯರ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಹೊರಟಿದ್ದ ಎಂದು ತಿಳಿದು ಬಂದಿದೆ.

'ವಿ.ಶ್ರೀನಿವಾಸಪ್ರಸಾದ್ ವ್ಯಕ್ತಿತ್ವ ಮತ್ತು ಹೋರಾಟ' ವಿಚಾರ ಮಂಥನ

ಮೈಸೂರು, ಜು.25– ಶ್ರೀ ವಿ.ಶ್ರೀನಿವಾಸ ಪ್ರಸಾದ್ ಅವರ 77ನೇ ಜನ್ಮ ದಿನಾಚರಣೆ ಅಂಗವಾಗಿ ಆ.6ರಂದು 'ವಿ.ಶ್ರೀನಿವಾಸಪ್ರಸಾದ್ ವ್ಯಕ್ತಿತ್ವ ಮತ್ತು ಹೋರಾಟ' ವಿಚಾರ ಮಂಥನ ಆಯೋಜಿಸಲಾಗಿದೆ.



ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನದ ಸಹಯೋಗದಲ್ಲಿ ಮಾನಸಗಂಗೋತ್ರಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣ ಅಂದು ಬೆಳಗ್ಗೆ 10.30ಕ್ಕೆ ವಿಶ್ವಮೈತ್ರಿ ಬುದ್ಧವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

'ವಿ.ಶ್ರೀನಿವಾಸಪ್ರಸಾದ್: ವ್ಯಕ್ತಿತ್ವ' ಕುರಿತು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಹಾಗೂ 'ವಿ.ಶ್ರೀನಿವಾಸಪ್ರಸಾದ್: ಹೋರಾಟದ ನೆಲೆಗಳು' ಕುರಿತು ಸಂಸ್ಕೃತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ವಿಚಾರ ಮಂಡಿಸಲಿದ್ದಾರೆ. ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸಪ್ರಸಾದ್ ಹಾಗೂ ಪ್ರಕಾಶಕ ಭರತ್ ರಾಮಸ್ವಾಮಿ ಮತ್ತಿತರರು ಉಪಸ್ಥಿತರಿರಲಿದ್ದಾರೆ.

'ಮಿಸ್ಟಿಕ್ ಡಿವೈನ್'ಗೆ ಡಾ.ಶ್ರೀನಿವಾಸ್ ಮೆಮೋರಿಯಲ್ ಕಪ್



ಮೈಸೂರು ರೇಸ್ ಕ್ಲಬ್‌ನಲ್ಲಿ ಗುರುವಾರ ನಡೆದ ರೇಸ್‌ನಲ್ಲಿ ವಿಜೇತ ಕುದುರೆ 'ಮಿಸ್ಟಿಕ್ ಡಿವೈನ್' ತರಬೇತುದಾರ ಸಿ.ಡಿ.ಮೊಣ್ಣಪ್ಪ ಅವರಿಗೆ ಚೈತನ್ಯ ಶ್ರೀನಿವಾಸ್ ಅವರು ತಮ್ಮ ಪುತ್ರಿ ಅತ್ಮಿಕ ಅವರೊಂದಿಗೆ 'ದಿ ಡಾ.ಎನ್.ಎಂ. ಶ್ರೀನಿವಾಸ್ ಮೆಮೋರಿಯಲ್ ಕಪ್' ಪ್ರದಾನ ಮಾಡಿದರು. ಚಿತ್ರದಲ್ಲಿ ಎಂಆರ್‌ಸಿ ಅಧ್ಯಕ್ಷರು, ಸ್ಟೀವರ್ಡ್‌ಗಳು, ಕಮಿಟಿ ಸದಸ್ಯರನ್ನು ಕಾಣಬಹುದು.

ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಮಾಲಿನ್ಯ ಪ್ರಮಾಣ ಕಡಿಮೆ

ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿದ ಹಿರಿಯ ಪ್ರಧಾನ ವಿಜ್ಞಾನಿ ಡಾ.ಕೃಪಾದಮ್ ಮಾಹಿತಿ

ಮೈಸೂರು, ಜು.25(ಬಿಎಲ್‌ಯು)– ಅಮೆರಿಕಾ, ಜಪಾನ್, ಚೈನಾ ಸೇರಿದಂತೆ ಅಭಿವೃದ್ಧಿ ಹೊಂದಿದ ವಿಶ್ವದ ಹಲವು ದೇಶಗಳಲ್ಲಿನ ಮಾಲಿನ್ಯಕ್ಕೆ ಹೋಲಿಸಿದರೆ ಭಾರತದ ಮಾಲಿನ್ಯ ಪ್ರಮಾಣ ಕಡಿಮೆ ಎಂದು ನಾಗ್ಪುರ್‌ನ ರಾಷ್ಟ್ರೀಯ ಪರಿಸರ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ ಹಿರಿಯ ಪ್ರಧಾನ ವಿಜ್ಞಾನಿ ಡಾ.ಆರ್.ಜೆ.ಕೃಪಾದಮ್ ತಿಳಿಸಿದರು.

ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಇಂದು ಆರಂಭವಾದ ಸಮಗ್ರ ವಿಧಾನಗಳ ಮೂಲಕ ಹವಾಮಾನ ಬದಲಾವಣೆ ತಗ್ಗಿಸುವಿಕೆ ಹಾಗೂ ಅಳವಡಿಕೆ ಮತ್ತು ಸ್ಥಿತಿಸ್ಥಾಪಕತ್ವ ಕುರಿತ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಮಾಲಿನ್ಯ ಪ್ರಮಾಣ ಮತ್ತಷ್ಟು ಕಡಿಮೆಯಾಗಬೇಕು ಎಂದು ಹೇಳಿದರು.

ಕೈಗಾರಿಕೆಗಳ ಕ್ಷಿಪ್ರ ಕ್ರಾಂತಿ, ಮಿತಿ ಮೀರಿದ ವಾಹನಗಳ ಸಂಚಾರ ಸೇರಿದಂತೆ ಹಲವು ಕಾರಣಗಳಿಂದ ಮಾಲಿನ್ಯವಾಗುತ್ತಿದೆ. ಇದು ಹವಾಮಾನ ಬದಲಾವಣೆಗೆ ಕಾರಣವಾಗುತ್ತದೆ ಎಂದರು.



ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಆರಂಭವಾದ ಸಮಗ್ರ ವಿಧಾನಗಳ ಮೂಲಕ ಹವಾಮಾನ ಬದಲಾವಣೆ ತಗ್ಗಿಸುವಿಕೆ ಹಾಗೂ ಅಳವಡಿಕೆ ಮತ್ತು ಸ್ಥಿತಿಸ್ಥಾಪಕತ್ವ ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ನಾಗ್ಪುರ್‌ನ ರಾಷ್ಟ್ರೀಯ ಪರಿಸರ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ ಹಿರಿಯ ಪ್ರಧಾನ ವಿಜ್ಞಾನಿ ಡಾ.ಕೃಪಾದಮ್ ಉದ್ಘಾಟಿಸಿದರು.

ಅಮೇರಿಕಾದಲ್ಲಿ ಮಾಲಿನ್ಯದ ಪ್ರಮಾಣ ಶೇಕಡ 6.5ರಷ್ಟಿದ್ದರೆ, ಜಪಾನ್ ಹಾಗೂ ಚೈನಾದಲ್ಲಿ ಶೇಕಡ 6ಕ್ಕಿಂತ ಹೆಚ್ಚಿದೆ. ಇನ್ನು ಕತಾರ್‌ನಲ್ಲಿರುವ ಭಾರಿ ಕೈಗಾರಿಕೆಗಳ ಪರಿಣಾಮ ಶೇ.36ರಷ್ಟು ಮಾಲಿನ್ಯ ಪ್ರಮಾಣವಿದೆ. ಆದರೆ ಭಾರತದಲ್ಲಿ ಶೇ.5ರಷ್ಟಿದೆ. ಈ ಪ್ರಮಾಣ ಮತ್ತಷ್ಟು ಕಡಿಮೆಯಾಗಬೇಕು ಎಂದು ಸಲಹೆ ನೀಡಿದರು.

ನಮ್ಮಲ್ಲಿ ಕಲ್ಲಿದ್ದಲು ಮೂಲಕ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಆದ ಕಾರಣ ಮನೆಗಳಲ್ಲಿ ಸೋಲಾರ್ ಶಕ್ತಿ ಬಳಕೆ ಸೇರಿದಂತೆ ನವೀಕರಿಸಬಹುದಾದ ಇಂಧನ ವ್ಯವಸ್ಥೆಯನ್ನು ಅಳವಡಿಸಿಕೊಂಡರೆ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಜೊತೆಗೆ ಮಾಲಿನ್ಯ ಆಗುವುದನ್ನು ತಡೆಗಟ್ಟಬಹುದು ಎಂದು ಡಾ.ಕೃಪಾದಮ್ ಅಭಿಪ್ರಾಯಪಟ್ಟರು.

ಈ ಶತಮಾನದಲ್ಲಿ ವಿಶ್ವದ ಮೇಲ್ಮೈ ತಾಪಮಾನ ಸರಾಸರಿ 30 ಡಿಗ್ರಿ ಸೆಂಟಿಗ್ರೇಡ್ ಮೀರುವ ಸಾಧ್ಯತೆ ಇದೆ. ಇದರಿಂದ ಭೂಮಿ ತಾಪಮಾನ ಹೆಚ್ಚಲಿದ್ದು, ಜನರು ಇದರಿಂದ ತೊಂದರೆಗೆ ಸಿಲುಕುತ್ತಾರೆ ಎಂದು ಡಾ.ಕೃಪಾದಮ್ ಎಚ್ಚರಿಸಿದರು.

ಎರಡು ದಿನಗಳ ಸಮ್ಮೇಳನದಲ್ಲಿ ಭಾರತದ 18 ರಾಜ್ಯಗಳ ಅಧ್ಯಾಪಕರು ಹಾಗೂ ಸಂಶೋಧಕರು ಭಾಗವಹಿಸಿದ್ದರು. ತಜ್ಞರು ಹವಾಮಾನ ಬದಲಾವಣೆ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಲಿದ್ದಾರೆ.

> “ ಅತಿಯಾದ ರಾಸಾಯನಿಕ ವಸ್ತುಗಳನ್ನು ಬಳಸುವುದರಿಂದ ಭೂಮಿಯ ಫಲವತ್ತತೆ ಹಾಳಾಗಿ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗುತ್ತಿಲ್ಲ. ಇಂತಹ ಹತ್ತಾರು ವ್ಯತಿರಿಕ್ತ ಪರಿಣಾಮಗಳಿಂದ ಇಡೀ ಭೂಗೋಳವೇ ಅಪಾಯಕ್ಕೆ ಸಿಲುಕಿದೆ. ಈ ಕಾರಣದಿಂದ ಹವಾಮಾನ ಬದಲಾವಣೆ ಇಡೀ ವಿಶ್ವವನ್ನು ಬಾಧಿಸುತ್ತಿದೆ. ಇದರಿಂದ ವಿಶ್ವದ ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತಿದೆ. **–ಡಾ.ಕೃಪಾದಮ್**

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಪತಿ ಡಾ.ಬಿ. ಸುರೇಶ್, ಕುಲಪತಿ ಡಾ.ಬಸವಣ್ಣಗೌಡಪ್ಪ, ಕುಲಸಚಿವ ಡಾ.ಮಂಜುನಾಥ್, ಡೀನ್ ಡಾ.ಕೆ.ಎ.ರವೀಶ್, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಹಿರಿಯ ಕಾರ್ಯಕ್ರಮ ಸಲಹೆಗಾರರಾದ ಡಾ.ಪ್ರೀತಿ ಸೋನಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 26 ಜುಲೈ 2024

ಮಂಡ್ಯ ಸಾಹಿತ್ಯ ಸಮ್ಮೇಳನ ಸಡಗರದೊಂದಿಗೆ ಪಾರದರ್ಶಕವಾಗಿರಲಿ

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಸಲಹೆ ನೀಡಿದ ಉಸ್ತುವಾರಿ ಸಚಿವರು

ಬೆಂಗಳೂರು/ಮಂಡ್ಯ,ಜು.25– ಮಂಬರುವ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಹಿತ್ಯ, ಸಾಂಸ್ಕೃತಿಕ ಶ್ರೀಮಂತಿಕೆಯ ಜೊತೆಗೆ ಪಾರದರ್ಶಕವಾಗಿರಲಿ ಎಂದು ಕೃಷಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಗುರುವಾರ ಬೆಂಗಳೂರಿನ ವಿಕಾಸಸೌಧದ ಸಭಾಂಗಣದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಿದ್ಧತೆ ಸಭೆಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅತ್ಯಂತ ದೊಡ್ಡ ಐತಿಹಾಸಿಕ ಹಿನ್ನೆಲೆ ಇದೆ. ಇದರ ಚರಿತ್ರೆ ಹಾಗೂ ಮಹತ್ವಕ್ಕೆ ಯಾವುದೇ ಕುಂದು ಉಂಟಾಗದಂತೆ ಸಂಭ್ರಮ, ಸಾಹಿತ್ಯಿಕ ಮೌಲ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೊರತೆಯಾಗದಂತೆ ಸಂಘಟನೆ ಮಾಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಸಂಘಟನೆಯಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಹಾಗೂ ಆರ್ಥಿಕ ಹೊಣೆಗಾರಿಕೆ ಸಂಪೂರ್ಣ ಜಿಲಾಡಳಿತಕ್ಕೆ ಸೇರಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರ ಮತ್ತು ಸಹಯೋಗದೊಂದಿಗೆ ಹಿಂದೆಂದಿಗಿಂತ ವಿಜೃಂಭಣೆಯಿಂದ ಆಯೋಜಿಸಬೇಕು. ಈಗಾಗಲೇ 26 ಉಪ ಸಮಿತಿಗಳನ್ನು ರಚಿಸಲಾಗಿದೆ.



ಬೆಂಗಳೂರಿನ ವಿಕಾಸಸೌಧದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಿದ್ಧತೆ ಸಭೆಯಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡುತ್ತಿರುವುದು.

ಎಲ್ಲಾ ಸಮಿತಿಗಳಿಗೂ ಸ್ಥಳೀಯ ಶಾಸಕರುಗಳು ನೇತೃತ್ವ ವಹಿಸಿದ್ದು, ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳು, ಸಾರ್ವಜನಿಕರು ಕನ್ನಡದ ಅಭಿಮಾನಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮ ನಡೆಸಬೇಕಾಗಿದೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ 30 ಕೋಟಿ ರೂ ಗಳನ್ನು ಒದಗಿಸುವ ಭರವಸೆ ದೊರೆತಿದೆ. ಅದು ಮಿತಿಯೊಳಗೆ ಸಂಪೂರ್ಣ ಕಾರ್ಯಕ್ರಮಗಳು ನಡೆಯಬೇಕು. ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಸಲ್ಲಿಸುವಂತಿಲ್ಲ ಎಂದರು.

ಈಗಾಗಲೇ ಬಜೆಟ್‌ನಲ್ಲಿ ಘೋಷಿಸಿರುವ ಅನುದಾನದಲ್ಲೇ ವ್ಯವಸ್ಥಿತವಾಗಿ ಸಮ್ಮೇಳನ ನಡೆಸಬೇಕು, ಹೆಚ್ಚು ಆರ್ಥಿಕ ಹೊರೆ ಬೀಳದಂತೆ ನಿಗದಿತ ಅನುದಾನದಲ್ಲೆ ಸಮ್ಮೇಳನ ಯಶಸ್ವಿಯಾಗಿ ನಡೆಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದ ಅವರು, ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಈಗಾಗಲೇ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ದೂರದ ಜಿಲ್ಲೆಗಳಿಂದ ಆಗಮಿಸುವ ಹಾಗೂ ಮಂಡ್ಯ ಜಿಲ್ಲೆಯ ಜನತೆಗೆ ಅನುಕೂಲವಾದ ಸ್ಥಳವನ್ನು ಅಂತಿಮಗೊಳಿಸಿ ಸಮ್ಮೇಳನದ ಸಿದ್ಧತೆ ಮಾಡಿಕೊಳ್ಳುವಂತೆ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳಿಗೆ ತಿಳಿಸಿದರು.


ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಾಡಿನ ಅತಿ ದೊಡ್ಡ ಸಾಂಸ್ಕೃತಿಕ ನುಡಿ ಹಬ್ಬ. ಇದನ್ನು ಅತ್ಯಂತ ಜವಾಬ್ದಾರಿಯಿಂದ, ಎಚ್ಚರಿಕೆಯಿಂದ ನಡೆಸಬೇಕಿದೆ. ಕರ್ನಾಟಕ ರಾಜ್ಯ 50ನೇ ವರ್ಷದ ಸುವರ್ಣ ಸಂಭ್ರಮದ ಅಂಗವಾಗಿ ಬಿಡುಗಡೆ ಮಾಡಿರುವ ಲಾಂಛನ ಎಲ್ಲಾ ಕಾರ್ಯಕ್ರಮದಲ್ಲಿ ವಿಶೇಷವಾಗಿ ಬಿಂಬಿತವಾಗಬೇಕು. ಖರ್ಚು–ವೆಚ್ಚಗಳಿಗೆ ಹೊಣೆಗಾರಿಕೆ ಇರಬೇಕು ಹಾಗಾಗಿ ಎಲ್ಲರೂ ಒಂದಾಗಿ ಕಾರ್ಯಕ್ರಮವನ್ನು ಆಯೋಜಿಸೋಣ ಎಂದು ಸಲಹೆ ನೀಡಿದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಮಾತನಾಡಿ, ಸಮ್ಮೇಳನಾಧ್ಯಕ್ಷರ ಆಯ್ಕೆ, ಕನ್ನಡ ಸಾಹಿತ್ಯ ಸಮ್ಮೇಳನದ ಸ್ವರೂಪ ಗೋಷ್ಠಿಗಳು, ಪುಸ್ತಕ ಮಳಿಗೆ, ಊಟೋಪಚಾರ ಅಚ್ಚುಕಟ್ಟಾಗಿರಬೇಕು. ಅನುದಾನವು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾಗಲಿದ್ದು, ಹಣಕಾಸಿನ ಸಂಪೂರ್ಣ ಜವಾಬ್ದಾರಿ ಜಿಲ್ಲಾಡಳಿತದ ಮೇಲಿರುತ್ತದೆ. ಸಾಹಿತ್ಯ ಪರಿಷತ್ತು ಸಂಪೂರ್ಣ ಸಹಕಾರ ನೀಡಿ ಸಮ್ಮೇಳನದ ಯಶಸ್ವಿಗೆ ಶ್ರಮಿಸಲಿದೆ ಎಂದು ಭರವಸೆ ನೀಡಿದರು.

ಸಭೆಯಲ್ಲಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಕೆ.ಎಂ.ಉದಯ್‌ಗೌಡ, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ. ಸಿಇಒ ಶೇಖ್ ತನ್ವೀರ್ ಆಸಿಫ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ, ಜಿಲ್ಲಾ ಕಸಾಪ ಸಂಚಾಲಕಿ ಮೀರಾ ಶಿವಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಪದಾಧಿಕಾರಿಗಳು ಹಾಗೂ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಕೆಆರ್‌ಎಸ್‌ನಿಂದ 1 ಲಕ್ಷ ಕ್ಯುಸೆಕ್ ನೀರು ಬಿಡುಗಡೆ ಸಾಧ್ಯತೆ

ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚನೆ



ಮಂಡ್ಯ, ಜು.25–ಕೆಆರ್‌ಎಸ್‌ನಿಂದ ನದಿಗೆ ಒಂದು ಲಕ್ಷ ಕ್ಯುಸೆಕ್ ನೀರನ್ನು ಹರಿಸುವ ಸಾಧ್ಯತೆ ಇರುವುದರಿಂದ ನದಿ ಪಾತ್ರದ ಜನರು ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್‌ಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯದ ಸುರಕ್ಷತೆ ಹಿತದೃಷ್ಟಿಯಿಂದ ಒಂದು ಲಕ್ಷಕ್ಕೂ ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರು ಹರಿಸುವ ಸಾಧ್ಯತೆ ಇರುವುದರಿಂದ ನದಿ ಪಾತ್ರದ ಸಾರ್ವಜನಿಕರು ತಮ್ಮ ಆಸ್ತಿಪಾಸ್ತಿ, ಜಾನುವಾರುಗಳ ರಕ್ಷಣೆಗೆ ಮುಂಜಾಗ್ರತಾ ಕ್ರಮ ಕೈಗೊಂಡು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಮನವಿ ಮಾಡಿದ್ದಾರೆ.

ಸಾರಂಗಿ ಕೃಷಿ ಪತ್ತಿನ ಸಂಘಕ್ಕೆ ನಾಗರಾಜು ಅಧ್ಯಕ್ಷ



ಅಧ್ಯಕ್ಷರಾಗಿ ಆಯ್ಕೆಯಾದ ಸಾರಂಗಿ ನಾಗರಾಜು ಅವರನ್ನು ಅಭಿನಂದಿಸಲಾಯಿತು.


ಕೆಆರ್.ಪೇಟೆ,ಜು.25–ತಾಲೂಕಿನ ಸಾರಂಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿಜೆಪಿ–ಜೆಡಿಎಸ್ ಮೈತ್ರಿ ಪಕ್ಷಗಳ ಬೆಂಬಲಿತ ಅಭ್ಯರ್ಥಿಯಾಗಿ ಸಾರಂಗಿ ನಾಗರಾಜು(ನಾಗಣ್ಣ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷರಾಗಿದ್ದ ಎನ್.ಎನ್. ನಾಗೇಶ್ ಅವರು ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ ಹೊರತು ಪಡಿಸಿ ಬೇರೆ ಯಾರೂ ಸಹ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ನಡೆಯಿತು. ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಾರಂಗಿ ನಾಗಣ್ಣ ಅವರನ್ನು ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಸಹೋದರ ಹೆಚ್.ಟಿ. ಲೋಕೇಶ್, ಮಾಜಿ ಸಚಿವ ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ತಾಪಂ ಮಾಜಿ ಸದಸ್ಯ ಮಲ್ಲೇನಹಳ್ಳಿ ಮೋಹನ್, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಕೈಗೋನಹಳ್ಳಿ ಕುಮಾರ್, ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯ ಸಾಮಿಲ್ ರವಿಕುಮಾರ್, ಭಾರತೀಪುರ ಪುಟ್ಟಣ್ಣ ಅಭಿನಂದಿಸಿದರು.

ದೇವಸ್ಥಾನದ ಬಾಗಿಲು ಮುರಿದು ಹುಂಡಿ ಹಣ ಕಳವು

ಪಾಂಡವಪುರ,ಜು.25– ದೇವಸ್ಥಾನದ ಬಾಗಿಲು ಮುರಿದು ಹುಂಡಿಯಲ್ಲಿದ್ದ ಕಾಣಿಕೆ ಹಣವನ್ನು ಕಳ್ಳರು ಕದ್ದು ಪರಾರಿಯಾಗಿರುವ ಘಟನೆ ತಾಲೂಕಿನ ಚಿಕ್ಕಮರಳಿ ಗ್ರಾಮದ ಶ್ರೀ ಬೋರೇದೇವರು ದೇವಸ್ಥಾನದಲ್ಲಿ ಬುಧವಾರ ರಾತ್ರಿ ಜರುಗಿದೆ.



ಮಧ್ಯರಾತ್ರಿಯ ಸಮಯದಲ್ಲಿ ದೇವಸ್ಥಾನದ ಬಾಗಿಲಿನ ಚಿಲಕ ಮುರಿದಿರುವ ಕಳ್ಳರು ದೇವಸ್ಥಾನ ಒಳಗಡೆ ನುಗ್ಗಿ ದೇವಸ್ಥಾನದ ಹುಂಡಿಯಲ್ಲಿದ್ದ ಸುಮಾರು ಐದಾರು ಸಾವಿರ ನಗದು ಹಣವನ್ನು ಕದ್ದು ಪರಾರಿಯಾಗಿದ್ದಾರೆ. ಗುರುವಾರ ಮುಂಜಾನೆ ಗ್ರಾಮಸ್ಥರು ದೇವಸ್ಥಾನದ ಬಾಗಿಲು ತೆಗೆದಿರುವುದನ್ನು ಕಂಡು ಸ್ಥಳಕ್ಕೆ ಹೋಗಿ ನೋಡಿದಾಗ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ತಕ್ಷಣ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ಮುಟ್ಟಿಸಿದ್ದಾರೆ. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳ್ಳರ ವಶಕ್ಕೆ ಆಗ್ರಹ: ತಾಲೂಕಿನಲ್ಲಿ ದೇವಸ್ಥಾನಗಳ ಕಳ್ಳತನಗಳು ದಿನೇ ದಿನೆ ಹೆಚ್ಚಾಗುತ್ತಿದ್ದು, ಪೊಲೀಸರು ಹುಂಡಿ ಕಳವು ಮಾಡುವ ಕಳ್ಳರನ್ನು ಪತ್ತೆ ಮಾಡುವಲ್ಲಿ ವಿಫಲರಾಗಿದ್ದಾರೆ. ತಾಲೂಕಿನಲ್ಲಿ ಸಾಕಷ್ಟು ದೇವಸ್ಥಾನಗಳಲ್ಲಿ ಕಳ್ಳತನವಾಗುತ್ತಿದ್ದು ಸಾರ್ವಜನಿಕರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಜನವಸತಿ ಪ್ರದೇಶದ ಗ್ರಾಮಗಳ ಮಧ್ಯಭಾಗದಲ್ಲಿರುವ ದೇವಸ್ಥಾನಗಳನ್ನೇ ಕಳ್ಳತನ ಮಾಡುತ್ತಿದ್ದಾರೆ ಎಂದರೆ ಗ್ರಾಮದ ಹೊರಭಾಗದಲ್ಲಿರುವ ದೇವಸ್ಥಾನಗಳನ್ನು ಬಿಡುತ್ತಾರ. ಹಾಗಾಗಿ ಪೊಲೀಸರು ದೇವಸ್ಥಾನಗಳನ್ನು ಟಾರ್ಗೆಟ್ ಮಾಡಿ ಹುಂಡಿ ಕಳವು ಮಾಡುತ್ತಿರುವ ಕಳ್ಳರನ್ನು ಹಿಡಿದು ಎಡೆಮುರಿ ಕಟ್ಟಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪಡಿತರ ವಿತರಣೆಗೆ ಎದುರಾಗಿರುವ ಸರ್ವರ್ ಸಮಸ್ಯೆ ಬಗೆಹರಿಸಲು ಒತ್ತಾಯ

ಮಂಡ್ಯ,ಜು.25– ರಾಜ್ಯಾದ್ಯಂತ ಪಡಿತರ ವಿತರಣೆಗೆ ಸರ್ವರ್ ಸಮಸ್ಯೆ ಬಗೆಹರಿಸಲು ಆಹಾರ ಇಲಾಖೆಯ ಅಧಿಕಾರಿಗಳು ಹಾಗೂ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಕೂಡಲೇ ಕ್ರಮ ವಹಿಸಬೇಕೆಂದು ಕರ್ನಾಟಕ ಸರ್ಕಾರಿ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜುಲೈ ತಿಂಗಳ ಪಡಿತರ ವಿತರಿಸಲು ಸರ್ವರ್ ಸಮಸ್ಯೆ ಎದುರಾಗಿದ್ದು, ಇದರಿಂದ ರಾಜ್ಯದ ಸಾವಿರಾರು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಇದ್ದರೂ ವಿತರಣೆ ಮಾಡಲು ಆಗುತ್ತಿಲ್ಲ. ಇದರಿಂದ ನ್ಯಾಯಬೆಲೆ ಅಂಗಡಿ ಸಿಬ್ಬಂದಿಗಳ ಮೇಲೆ ಸಾರ್ವಜನಿಕರು ಜಗಳವಾಡುವ ಸ್ಥಿತಿ ಎದುರಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿದ್ದಾರೆ.

ಇದರಿಂದ ಪಡಿತರ ಅಂಗಡಿ ಮಾಲೀಕರಿಗೆ ತೀವ್ರ ಮುಜುಗರವಾದರೆ, ಸಾರ್ವಜನಿಕರು ಸರಿಯಾದ ಸಮಯಕ್ಕೆ ಅಕ್ಕಿ, ರಾಗಿ, ಜೋಳ ಸಿಗದೆ ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ರೇಷನ್ ಕಾರ್ಡಿನಲ್ಲಿ ಹೊಸ ಹೆಸರುಗಳ ಸೇರ್ಪಡೆ ಕಾರ್ಯ ನಡೆಯುತ್ತಿರುವುದರಿಂದ ಪಡಿತರ ವಿತರಣೆ ಮಾಡಲು ತೊಂದರೆಯಾಗುತ್ತಿದೆ ಎಂದು ಅಳಲು ತೋಡಿಕೊಂಡಿದ್ದಾರೆ. ಜುಲೈ ತಿಂಗಳು ಮುಗಿಯಲು ಕೇವಲ 6 ದಿನ ಮಾತ್ರ ಬಾಕಿ ಇದೆ. ಆದ್ದರಿಂದ ಈ ತಿಂಗಳ ಪಡಿತರ ಜನರಿಗೆ ವಿತರಿಸಬೇಕೆಂದರೆ ರೇಷನ್ ಕಾರ್ಡಿಗೆ ಹೊಸ ಸೇರ್ಪಡೆ ಕಾರ್ಯ ನಿಲ್ಲಿಸಿ ಸರ್ವರ್ ವೇಗ ಮಾಡಿ, ಸಾರ್ವಜನಿಕರಿಗೆ ಆಹಾರ ಕಾಳುಗಳನ್ನು ವಿತರಣೆ ಮಾಡಲು ಅನುವು ಮಾಡಿಕೊಡಬೇಕೆಂದು ಅವರು ಮನವಿ ಮಾಡಿದ್ದಾರೆ.

ಜು. 30 ರಂದು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ

ಮಂಡ್ಯ,ಜು.25– ಮಂಡ್ಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕಲ್ಲು ಕಟ್ಟಡದ 2024–25 ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ ಹಾಗೂ ವಿವಿಧ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮವನ್ನು ಜುಲೈ 30 ರಂದು ಬೆಳಿಗ್ಗೆ 10.30 ಗಂಟೆಗೆ ಮಂಡ್ಯ ಬಾಲಕೀಯರ ಸರ್ಕಾರಿ ಪದವಿಪೂರ್ವ ಕಾಲೇಜು ಕಲ್ಲು ಕಟ್ಟಡ ಕಾಲೇಜು ಆವರಣದ ಕುವೆಂಪು ರಂಗಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ಕಲ್ಲುಕಟ್ಟಡ) ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ.ರವಿಕುಮಾರ್ ನೆರವೇರಿಸಲಿದ್ದು, ಅಪರ ಜಿಲ್ಲಾಧಿಕಾರಿ ಹಾಗೂ ಮೈಸೂರು ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಹೆಚ್.ಎಲ್.ನಾಗರಾಜ್ ಪ್ರಧಾನ ಭಾಷಣವನ್ನು ಮಾಡಲಿದ್ದಾರೆ. ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸಿ.ಚೆಲುವಯ್ಯ ಅವರು ಪ್ರತಿಭಾ ಪುರಸ್ಕಾರ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಲುಕಟ್ಟಡ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಶಾಲಾ ಶಿಕ್ಷಣ ಇಲಾಖೆಯ ಪ್ರಾಂಶುಪಾಲರಾದ ಹೆಚ್.ಪಿ ತಮ್ಮೇಗೌಡ ವಹಿಸಲಿದ್ದಾರೆ.

ಮೂರನೇ ಪುಟದಿಂದ

ವಿಧಾನಸಭೆಯಲ್ಲಿ ಅಂಗೀಕಾರ

ಇರುವುದರಿಂದ ರಾಜ್ಯಗಳ ಸ್ವಾಯತ್ತತೆ ದುರ್ಬಲಗೊಳ್ಳಲಿದೆ. ಭದ್ರತೆ ಖಚಿತಪಡಿಸಿಕೊಳ್ಳುವ, ಚುನಾವಣಾ ಸಿಬ್ಬಂದಿ ನಿರ್ವಹಣೆ, ಸರ್ಕಾರದ ಉತ್ತರದಾಯಿತ್ವ, ಆರ್ಥಿಕ ಮತ್ತು ಸಾಮಾಜಿಕ ಅಡೆತಡೆಗಳು ಏಕಕಾಲಿಕ ಚುನಾವಣೆಗಳಿಗೆ ಸಂಬಂಧಿಸಿದ ಗುರುತರ ಗಂಡಾಂತರಗಳಾಗಿವೆ. ಭಾರತದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಮತ್ತು ಒಕ್ಕೂಟ ಸಮಗ್ರತೆ ರಕ್ಷಿಸಲು ಏಕಕಾಲಿಕ ಚುನಾವಣಾ ನೀತಿ ಅನುಷ್ಠಾನಗೊಳಿಸಬಾರದು ಎಂದು ಕೇಂದ್ರ ಸರ್ಕಾರವನ್ನು ಸದನ ಆಗ್ರಹಿಸುತ್ತದೆ ಎಂದರು. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿ ವರದಿ ಪಡೆದು ನಂತರ 'ಒಂದು ರಾಷ್ಟ್ರ ಒಂದು ಚುನಾವಣೆ' ವ್ಯವಸ್ಥೆ ರೂಪಿಸಲು ಮುಂದಾಗಿದೆ ಎಂದರು. ಏಕಕಾಲಿಕ ಚುನಾವಣೆ ವ್ಯವಸ್ಥೆಯಿಂದ ಸಮಯ, ಜನರ ತೆರಿಗೆ ಹಣ, ಮಾನವ ಸಂಪನ್ಮೂಲ ಉಳಿತಾಯವಾಗಲಿದ್ದು, ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಪೂರಕ ವಾತಾವರಣ ನಿರ್ಮಾಣವಾಗಲಿದೆ. ರಾಜ್ಯ ಸರ್ಕಾರದ ನಿರ್ಣಯವನ್ನು ವಿರೋಧಿಸುತ್ತೇವೆ, ಇದು ಸರ್ವಾನುಮತದ ನಿರ್ಣಯ ಎಂಬುದಕ್ಕೆ ಪ್ರತಿಪಕ್ಷಗಳ ಸಹಮತ ಇಲ್ಲ ಎಂದು ಸ್ಪಷ್ಟಪಡಿಸಿದರು. ನಂತರ ಸಭಾಧ್ಯಕ್ಷ ಯು.ಟಿ.ಖಾದರ್, ನಿರ್ಣಯ ಸರ್ವಾನುಮತದಿಂದ ಅಂಗೀಕಾರಗೊಂಡಿದೆ ಎಂದು ಪ್ರಕಟಿಸಿದರು.

ಕ್ಷೇತ್ರ ಪುನರ್ವಿಂಗಡಣೆ: 2026ರ ಜನ ಗಣತಿ ಅಥವಾ ನಂತರ ನಡೆಯುವ ಜನ ಗಣತಿ ಆಧಾರದ ಮೇಲೆ ಕೇಂದ್ರ ಸರ್ಕಾರ ಕ್ಷೇತ್ರಗಳ ಪುನರ್ವಿಂಗಡಣೆ ಮಾಡಬಾರದು ಎಂದು ಕರ್ನಾಟಕ ವಿಧಾನಸಭೆ ಒತ್ತಾಯಿಸಿದೆ. ಜನಸಂಖ್ಯೆ ಆಧಾರದ ಮೇಲೆ ಸ್ಥಾನಗಳನ್ನು ಹೆಚ್ಚಿಸುವ ಸಂದರ್ಭದಲ್ಲಿ ಇದನ್ನು ಗಣನೆಗೆ ತೆಗೆದುಕೊಳ್ಳಬೇಕು. ಪ್ರತೀ ರಾಜ್ಯಕ್ಕೆ ಹಂಚಿಕೆ ಮಾಡಬೇಕಾದ ಲೋಕಸಭಾ ಕ್ಷೇತ್ರಗಳ ಸ್ಥಾನಗಳ ಸಂಖ್ಯೆಯನ್ನು ಮತ್ತು ಪ್ರತೀ ರಾಜ್ಯದ ವಿಧಾನಸಭೆಗೆ ನಿಗದಿಪಡಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು 1971ರ ಜನಗಣತಿಯನ್ನಾಧರಿಸಿ ನಿರ್ಧರಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಸದನ ಒತ್ತಾಯಿಸಿದೆ ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಸಿಇಟಿ ಪುನರ್ ಜಾರಿ: ಹಾಗೆಯೇ ದೇಶಾದ್ಯಂತ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಕಲ್ಪಿಸುವ ನೀಟ್ ಪರೀಕ್ಷಾ ವ್ಯವಸ್ಥೆ ರದ್ದುಗೊಳಿಸಿ, ಕರ್ನಾಟಕದಲ್ಲಿ ಸಿಇಟಿ ಮೂಲಕ ಪ್ರವೇಶಾತಿಗೆ ರಿಯಾಯಿತಿ ನೀಡುವ ನಿರ್ಣಯವನ್ನು ವಿಧಾನಮಂಡಲದ ಉಭಯ ಸದನಗಳಲ್ಲಿಂದು ಕೈಗೊಳ್ಳಲಾಯಿತು.

ಪ್ರತಿಪಕ್ಷಗಳ ಧರಣಿ, ಗದ್ದಲಗಳ ನಡುವೆಯೇ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ನಿರ್ಣಯ ಮಂಡಿಸಿದರು.

ನೀಟ್ ಪರೀಕ್ಷಾ ವ್ಯವಸ್ಥೆಯು ಗ್ರಾಮೀಣ ಬಡ ಮಕ್ಕಳ ವೈದ್ಯಕೀಯ ಶಿಕ್ಷಣಾವಕಾಶಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಹಾಗೂ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ನಿರರ್ಥಕಗೊಳಿಸುವುದು ಮಾತ್ರವಲ್ಲದೆ, ರಾಜ್ಯ ಸರ್ಕಾರದ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಸರ್ಕಾರದ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಇಂತಹ ಪರೀಕ್ಷಾ ವ್ಯವಸ್ಥೆಯಿಂದ ಕರ್ನಾಟಕಕ್ಕೆ ವಿನಾಯಿತಿ ನೀಡಬೇಕೆಂದು ಹಾಗೂ ಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಅಂಕಗಳನ್ನು ಆಧರಿಸಿ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶಾತಿ ನೀಡಬೇಕು.

ನೀಟ್ ಪರೀಕ್ಷೆಗಳಲ್ಲಿ ಆಗುತ್ತಿರುವ ಪುನರಾವರ್ತಿತ ಅಕ್ರಮಗಳನ್ನು ಪರಿಗಣಿಸಿ, ರಾಷ್ಟ್ರೀಯ ಮಟ್ಟದಲ್ಲಿ ಈ ವ್ಯವಸ್ಥೆ ರದ್ದುಪಡಿಸುವ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗ ಅಧಿನಿಯಮ 2019ಕ್ಕೆ ತಿದ್ದುಪಡಿ ಮಾಡುವಂತೆ ನಿರ್ಣಯದ ಮೂಲಕ ಕೇಂದ್ರ ಸರ್ಕಾರವನ್ನು ಸದನಗಳು ಒತ್ತಾಯಿಸಿವೆ. ನಿರ್ಣಯ ಕೈಗೊಂಡ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಕೇಂದ್ರೀಕೃತ ಆಡಳಿತ ನಡೆಸುವ ಉದ್ದೇಶದಿಂದ ನೀಟ್ ವ್ಯವಸ್ಥೆ ಜಾರಿಗೆ ತಂದಿದೆ ಎಂದು ದೂರಿದರು.

ಈ ಕಾಯ್ದೆಗೆ ದಕ್ಷಿಣ ಭಾರತದ ಬಹುತೇಕ ರಾಜ್ಯಗಳ ವಿರೋಧವಿದೆ, ಈಗಾಗಲೇ ತಮಿಳುನಾಡು ಸರ್ಕಾರವೂ ಕೂಡ ನಿರ್ಣಯ ಕೈಗೊಂಡು ಕೇಂದ್ರಕ್ಕೆ ಕಳುಹಿಸಿದೆ. ನೀಟ್ ಪರೀಕ್ಷೆ ಪಾರದರ್ಶಕವಾಗಿಲ್ಲ, ಹಲವು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿದೆ, ಇಂತಹ ವ್ಯವಸ್ಥೆಯಿಂದ ನಮ್ಮ ವಿದ್ಯಾರ್ಥಿಗಳಿಗೆ ನ್ಯಾಯ ದೊರಕುವುದಿಲ್ಲ. ಕರ್ನಾಟಕದ ಸಿಇಟಿ ಪರೀಕ್ಷೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದ್ದು, ಇದನ್ನು ಇತರ ರಾಜ್ಯಗಳು ಅನುಕರಣೆ ಮಾಡಿವೆ, ಆದ್ದರಿಂದ ಎನ್‌ಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಆಯಾ ರಾಜ್ಯಗಳೇ ವೈದ್ಯಕೀಯ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ನಿರ್ಣಯ ಒತ್ತಾಯಿಸಿದೆ.

ಪಾದಯಾತ್ರೆ ಮಾಡ್ತೇವೆ...

ಬದಲಿ ನಿವೇಶನ ಪಡೆದಿದ್ದಾರೆ. ದಾಖಲೆ ಇಲ್ಲದೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯದ್ರ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಅವರ ಕುಟುಂಬದ ಸದಸ್ಯರು ನಿವೇಶನ ಪಡೆದಿದ್ದಾರೆ. ಅದರ ಬಗ್ಗೆ ತನಿಖೆಯಾಗಬೇಕು ಎಂದು ಒತ್ತಾಯಿಸಿದರು. ಬಿಜೆಪಿಯ ನಾಲ್ಕು ವರ್ಷ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರ ಒಂದು ವರ್ಷದ ಆಡಳಿತ ಸೇರಿ ಐದು ವರ್ಷದಲ್ಲಿ ಸಾವಿರಾರು ಕೋಟಿ ಭ್ರಷ್ಟಾಚಾರ ನಡೆದಿದೆ. ಇದರ ತನಿಖೆಯನ್ನು ಹಾಲಿ ನ್ಯಾಯಾಧೀಶರಿಂದ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿ ಸಾರ್ವಜನಿಕ ಹಣವನ್ನು ವಸೂಲಿ ಮಾಡಬೇಕು ಎಂದು ಒತ್ತಾಯಿಸಿ ಜು.29ರಂದೇ ಪ್ರಗತಿಪರರು, ರೈತ, ಕನ್ನಡಪರ, ಸಾಮಾಜಿಕ ಕಳಕಳಿಯುಳ್ಳ ನಾಗರಿಕರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಿದ್ದೇವೆ ಎಂದು ಹೇಳಿದರು.

ನಿರ್ಧಾರ

ಬಿಜೆಪಿ ಆಡಳಿತ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮೇಕೆದಾಟು ಯೋಜನೆಗೆ ಆಗ್ರಹಿಸಿ ಕನಕಪುರದ ಸಂಗಮದಿಂದ ಬೆಂಗಳೂರಿನವರೆಗೆ ಎರಡು ಹಂತಗಳಲ್ಲಿ ಪಾದಯಾತ್ರೆ ಹಮ್ಮಿಕೊಂಡಿದ್ದರು. ಬಳ್ಳಾರಿ ಹಾಗೂ ಮೇಕೆದಾಟು ಪಾದಯಾತ್ರೆ ಕಾಂಗ್ರೆಸ್‌ಗೆ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ತಂದುಕೊಟ್ಟಿತು.

ಸದ್ಯಕ್ಕೆ ಯಾವುದೇ ಸಾರ್ವತ್ರಿಕ ಚುನಾವಣೆ ಇಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭ್ರಷ್ಟಾಚಾರ ಬಯಲಿಗೆಳೆಯಲು ಬಿಜೆಪಿ–ಜೆಡಿಎಸ್ ಪಾದಯಾತ್ರೆ ಹಮ್ಮಿಕೊಂಡಿವೆ.

ವಿಶೇಷಚೇತನ ಫಲಾನುಭವಿಗಳ ಪಟ್ಟಿ ಪ್ರಕಟ

ಮೈಸೂರು,ಜು.25–ಮೈಸೂರು ಮಹಾನಗರ ಪಾಲಿಕೆ ವತಿಯಿಂದ 2021–22ನೇ ಸಾಲಿನ ಶೇ.5ರ ಅನುದಾನದಡಿಯಲ್ಲಿ ವಿಶೇಷಚೇತನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗಲು ರೆಟ್ರೋಫಿಟ್‌ಮೆಂಟ್ ಜೋಡಣೆಯುಳ್ಳ ಸ್ಕೂಟರ್‌ಗಳನ್ನು ಉಚಿತ ವಾಗಿ ವಿತರಣೆ ಮಾಡಲಾಗುತ್ತಿದೆ. ವಿಶೇಷಚೇತನರಿಂದ ಪಾಲಿಕೆಗೆ ಒಟ್ಟು 115 ಅರ್ಜಿಗಳು ಸ್ವೀಕೃತಗೊಂಡಿದ್ದು, 52 ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಆಯ್ಕೆ ಮಾಡಲಾಗಿದೆ. ಉಳಿದ ಅರ್ಜಿಗಳನ್ನು ಮುಂದಿನ ಹಂತದಲ್ಲಿ ಪರಿಶೀಲಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಕ್ರಮ ವಹಿಸಲಾಗುವುದು. ಆಯ್ಕೆಯಾಗಿರುವ 52 ಫಲಾನುಭವಿಗಳ ಪಟ್ಟಿಯನ್ನು ಪಾಲಿಕೆ ಕಚೇರಿಯ ಸೂಚನಾ ಫಲಕದಲ್ಲಿ ಪ್ರಚಾರಪಡಿಸಲಾಗಿದ್ದು, ಸಾರ್ವಜನಿಕರು ಹಾಗೂ ವಿಶೇಷಚೇತನರು ಈ ಸಂಬಂಧ ಯಾವುದಾದರೂ ತಂಟೆ ತಕರಾರು ಅಥವಾ ಆಕ್ಷೇಪಣೆಗಳು ಇದ್ದಲ್ಲಿ ಜು.30ರೊಳಗಾಗಿ ಪಾಲಿಕೆ ಹೆಚ್ಚುವರಿ ಆಯುಕ್ತರಿಗೆ ಆಕ್ಷೇಪಣೆಯನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಜನೋರ್ತ್ರಿ–24' ಮಾನಸ ಮಾಧ್ಯಮ ಹಬ್ಬಕ್ಕೆ ತೆರೆ

ತುಮಕೂರು ವಿವಿ ತಂಡಕ್ಕೆ ಸಮಗ್ರ ಪ್ರಶಸ್ತಿ



'ಜನೋರ್ತ್ರಿ–24' ಮಾನಸ ಮಾಧ್ಯಮ ಹಬ್ಬದಲ್ಲಿ ತುಮಕೂರು ವಿಶ್ವವಿದ್ಯಾನಿಲಯ ತಂಡ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

ಮೈಸೂರು, ಜು.25(ಎಂಕೆ)– ಮೈಸೂರಿನ ಮಾನಸಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರತಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವತಿಯಿಂದ ನಡೆದ ಎರಡು ದಿನಗಳ 'ಜನೋರ್ತ್ರಿ–24' ಮಾನಸ ಮಾಧ್ಯಮ ಹಬ್ಬ ಯಶಸ್ವಿಯಾಯಿತು.

ಮಾಧ್ಯಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುದ್ದಿ ಬರವಣಿಗೆ, ಕಿರು ಚಿತ್ರ, ರೇಡಿಯೋ ಜಾಕಿ, ಸೃಜನಶೀಲ ಬರವಣಿಗೆ, ಚರ್ಚೆ, ರಸ ಪ್ರಶ್ನೆ, ಪೋಸ್ಟರ್ ರಚನೆ ಸೇರಿದಂತೆ 11 ಬಗೆಯ ಸ್ಪರ್ಧೆಗಳನ್ನೊಳಗೊಂಡ 'ಜನೋರ್ತ್ರಿ–24' ಮಾಧ್ಯಮ ಹಬ್ಬದಲ್ಲಿ ತುಮಕೂರು ವಿಶ್ವವಿದ್ಯಾನಿಲಯ ತಂಡ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

ಸೃಜನಶೀಲ ಬರವಣಿಗೆಯಲ್ಲಿ ತುಮಕೂರು ವಿವಿಯ ಶರಣಪ್ಪ ಪ್ರಥಮ, ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿಯಾ ಇವಾಂಜೆಲಿಯನ್ ದ್ವಿತೀಯ, ಮಹಾಜನಸ್ ಕಾಲೇಜಿನ ಪವನ್ ಕುಮಾರ್ ತೃತೀಯ ಸ್ಥಾನ ಪಡೆದರೆ, ಚರ್ಚಾ ಸ್ಪರ್ಧೆಯಲ್ಲಿ ಮಹಾರಾಜ ಕಾಲೇಜಿನ ಯೋಗೇಶ್ ಪ್ರಥಮ, ಮೈಸೂರು ವಿವಿಯ ಗುರುಪಾದಪ್ಪ ದ್ವಿತೀಯ ಹಾಗೂ ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಅಫ್ನಾನ್ ಪಾಶಾ ತೃತೀಯ ಸ್ಥಾನ ಗೆದ್ದರು.

ಪಿಟಿಸಿ(ಫೇಸ್ ಟು ಕ್ಯಾಮರಾ)ಯಲ್ಲಿ ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಅಫ್ನಾನ್ ಪಾಶಾ ಪ್ರಥಮ, ತುಮಕೂರು ವಿವಿಯ ಸವಿತಾ ದ್ವಿತೀಯ, ಬೆಂಗಳೂರು ಸೆಂಟ್ ಜೋಸೆಫ್ ಕಾಲೇಜಿನ ಸೃಷ್ಟಿ ತೃತೀಯ ಸ್ಥಾನ ಪಡೆದರೆ, ಪೋಸ್ಟರ್ ರಚನೆಯಲ್ಲಿ ತುಮಕೂರು ವಿವಿ ಸುಕನ್ಯ ಪ್ರಥಮ, ಅಮೃತ ಯೂನಿವರ್ಸಿಟಿಯ ಸಂಗೀತಾ ಮತ್ತು ಕಾಶಿನಾಥನ್ ದ್ವಿತೀಯ ಹಾಗೂ ಬೆಂಗಳೂರು ಸೆಂಟ್ ಜೋಸೆಫ್ ಕಾಲೇಜಿನ ಕಿರಣ್ ಮೈ ಮತ್ತು ಸ್ವಾಮಿನಾಥನ್ ತೃತೀಯ ಸ್ಥಾನ ಪಡೆದುಕೊಂಡರು.

ಸುದ್ದಿ ಬರವಣಿಗೆಯಲ್ಲಿ ತುಮಕೂರು ವಿವಿ ಎಂ.ರಂಗನಾಥ ಪ್ರಥಮ, ಕುವೆಂಪು ವಿವಿಯ ಜಿ.ಟಿ.ಸುದೀರ್ ದ್ವಿತೀಯ, ಅಮೃತ ಯೂನಿವರ್ಸಿಟಿಯ ತುಷಾರ ತೃತೀಯ ಸ್ಥಾನ ಗೆದ್ದರೆ, ರಸಪ್ರಶ್ನೆಯಲ್ಲಿ ಅಮೃತ ಯೂನಿವರ್ಸಿಟಿಯ ಪ್ರತೀಮಾ ಮತ್ತು ದರ್ಶನ್ ಪ್ರಥಮ, ತುಮಕೂರು ಸಿದ್ದಾರ್ಥ್ ಮೀಡಿಯಾ ಸ್ಟಡೀಸ್‌ನ ಎಂ.ಕೆ.ಹನುಮಂತ ಮತ್ತು ಬಸವರಾಜ್ ದ್ವಿತೀಯ ಹಾಗೂ ಕುವೆಂಪು ವಿವಿಯ ಸುದೀರ್ ಮತ್ತು ಅಂಕಿತಾ ತೃತೀಯ ಸ್ಥಾನ ಗೆದ್ದರು. ಹಾಗೆಯೇ ಕಿರು ಚಿತ್ರದಲ್ಲಿ ಅಮೃತ ಯೂನಿವರ್ಸಿಟಿಯ 'ಶ್ರದ್ಧಾ' ಪ್ರಥಮ ತುಮಕೂರು ಸಿದ್ದಾರ್ಥ್ ಮೀಡಿಯಾ ಸ್ಟಡೀಸ್‌ನ 'ಸರ್ವೈವ್' ದ್ವಿತೀಯ ಹಾಗೂ ಬೆಂಗಳೂರು ವಿವಿ ಜ್ಞಾನಭಾರತಿಯ 'ನನ್ನ ಕನಸು' ಕಿರು ಚಿತ್ರ ತೃತೀಯ ಸ್ಥಾನ ಪಡೆಯಿತು.

ರೇಡಿಯೋ ಜಾಕಿ ವಿಭಾಗದಲ್ಲಿ ಬೆಂಗಳೂರು ವಿವಿ ಜ್ಞಾನಭಾರತಿಯ ರಾಜಶೇಖರ್ ಪ್ರಥಮ, ತುಮಕೂರು ವಿವಿಯ ಪಲ್ಲವಿ ದ್ವಿತೀಯ, ಯಲಹಂಕ ಪ್ರಥಮ ದರ್ಜೆ ಕಾಲೇಜಿನ ಮೋಹನ್ ತೃತೀಯ ಸ್ಥಾನ ಪಡೆದರೆ, ರೀಲ್ಸ್‌ನಲ್ಲಿ ಉಡುಪಿ ಎಂಜಿಎಂನ ಶಕೀಬ್ ಪ್ರಥಮ, ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿಯಾ ಇವಾಂಜೆಲಿಯನ್ ದ್ವಿತೀಯ, ಬೆಂಗಳೂರು ವಿವಿ ಜ್ಞಾನಭಾರತಿಯ ವೈಭವ್ ತೃತೀಯ ಸ್ಥಾನ ಗೆದ್ದರು. ಮೊಬೈಲ್ ಫೋಟೋಗ್ರಫಿಯಲ್ಲಿ ಬೆಂಗಳೂರು ವಿವಿ ಜ್ಞಾನಭಾರತಿಯ ಹುಲಿಗಪ್ಪ ಪ್ರಥಮ, ತುಮಕೂರು ವಿವಿ ಸುರೇಂದ್ರ ದ್ವಿತೀಯ, ಕುವೆಂಪು ವಿವಿ ಅಭಿಷೇಕ್ ತೃತೀಯ ಸ್ಥಾನ ಪಡೆದರೆ, ಕ್ಯಾಮರಾ ಫೋಟೋಗ್ರಫಿಯಲ್ಲಿ ಕಾವಾ ಕಾಲೇಜಿನ ನಯನ್ ರಾಮ್ ಪ್ರಥಮ, ಅಮೃತ ಯೂನಿವರ್ಸಿಟಿಯ ಡಿ.ಆರ್. ತೇಜಸ್ ದ್ವಿತೀಯ, ಕಾವಾ ಕಾಲೇಜಿನ ಎಸ್.ದರ್ಶನ್ ತೃತೀಯ ಸ್ಥಾನ ಪಡೆದುಕೊಂಡರು. ಅದೇ ರೀತಿಯ ಕಡೆಯ ಹುಚ್ಚು ಜಾಹಿರಾತು ವಿಭಾಗದಲ್ಲಿ ಅಮೃತ ಯೂನಿವರ್ಸಿಟಿ ಪ್ರಥಮ, ಬೆಂಗಳೂರು ಎಲೆಕ್ಟ್ರಾನಿಕ್ ಮೀಡಿಯಾ ದ್ವಿತೀಯ ಹಾಗೂ ಯಲಹಂಕ ಪ್ರಥಮ ದರ್ಜೆ ಕಾಲೇಜು ತೃತೀಯ ಸ್ಥಾನ ಪಡೆದುಕೊಂಡಿತು. ಒಟ್ಟಾರೆ ಅತೀ ಹೆಚ್ಚು ಅಂಕ ಪಡೆದ ತುಮಕೂರು ವಿವಿ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿಗೆ ಭಾಜನರಾದರು.

ಬಹುಮಾನ ವಿತರಣೆ: ವಿಜೇತ ವಿದ್ಯಾರ್ಥಿಗಳಿಗೆ ಟಿವಿ5 ಸುದ್ದಿ ವಾಹಿನಿಯ ಕಾರ್ಯನಿರ್ವಾಹಕ ಸಂಪಾದಕ ರಮಾಕಾಂತ್ ಆರ್ಯನ್, ಪತ್ರಕರ್ತ ಕೆ.ಮಧುಸೂದನ್, ಉದ್ಯಮಿ ಮುತ್ತುರಾಜ್ ಇನ್ನಿತರರು ಬಹುಮಾನ, ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರ ವಿತರಿಸಿದರು. ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಪ್ರೊ.ಎಂ.ಎಸ್.ಸಪ್ನಾ ಉಪಸ್ಥಿತರಿದ್ದರು.

ಪತ್ರಕರ್ತರಿಗೆ ಸತ್ಯವೇ ಸ್ಫೂರ್ತಿ...

ಪತ್ರಕರ್ತರಿಗೆ ಸತ್ಯಕ್ಕಿಂತ ದೊಡ್ಡ ಸ್ಫೂರ್ತಿ ಮತ್ತೊಂದಿಲ್ಲ. ಸತ್ಯದ ಪರವಾಗಿದ್ದರೆ ಎಂತಹ ಸಂದಿಗ್ಧ ಪರಿಸ್ಥಿತಿಯನ್ನಾದರೂ ಎದುರಿಸಬಹುದು. ಗುಲಾಮಗಿರಿಯ ವಿರುದ್ಧ ನಿಲ್ಲಬೇಕಾದರೆ ಸತ್ಯದ ಜೊತೆಗಿರಬೇಕು ಎಂದು ಟಿವಿ5 ಸುದ್ದಿ ವಾಹಿನಿಯ ಕಾರ್ಯನಿರ್ವಾಹಕ ಸಂಪಾದಕ ರಮಾಕಾಂತ್ ಆರ್ಯನ್ ಭಾವಿ ಪತ್ರಕರ್ತರಿಗೆ ಕಿವಿಮಾತು ಹೇಳಿದರು.

ಪ್ರಜಾಪ್ರಭುತ್ವದ ಯಾವುದೇ ರಂಗವೂ ಉಚಿತವಲ್ಲ. ಹಾಗೆಯೇ ಮಾಧ್ಯಮ ರಂಗವೂ ಕೂಡ ಉಚಿತವಾಗಿಲ್ಲ. ಸುದ್ದಿಗಳನ್ನು ಉಚಿತವಾಗಿ ಪ್ರಕಟಿಸುವುದು ಸಹಜವಾದರೂ ಜಾಹಿರಾತುಗಳನ್ನು ಪಡೆದು ಜೀವನ ಕಟ್ಟಿಕೊಳ್ಳುವುದು ಒಂದು ಭಾಗವಾಗಿದೆ. ಕಾಲಘಟ್ಟಕ್ಕೆ ಅನುಗುಣವಾಗಿ ಜನರ ಅಭಿರುಚಿಯೂ ಬದಲಾಗುತ್ತಿದೆ. ಜನಮನ್ನಣೆ, ಜನಮಾನ್ಯತೆ, ಜನರ ಅಭಿರುಚಿಗೆ ತಕ್ಕಂತೆ ಸುದ್ದಿಗಳನ್ನು ಪ್ರಕಟಿಸಬೇಕಿದೆ. ಇತ್ತೀಚೆಗಂತೂ ಸಂವಾದ, ಚರ್ಚೆ, ಅಭಿಪ್ರಾಯಗಳಿಗೆ ಹೆಚ್ಚಿನ ಮನ್ನಣೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಪತ್ರಕರ್ತರು ಸತ್ಯವೆಂಬ ನಿಧಿಯನ್ನು ಹುಡುಕಬೇಕು. ಯಾವುದೇ ಪತ್ರಿಕಾ ಅಥವಾ ಮಾಧ್ಯಮ ಸಂಸ್ಥೆಯಲ್ಲಿ ಸೇರಲಾಗದಿದ್ದರೂ ಸ್ವತಃ ತಮ್ಮ ಕೈಯಲ್ಲಿರುವ ಮೊಬೈಲ್ ಮೂಲಕ ವೃತ್ತಿ ಆರಂಭಿಸಬಹುದು. ಯೂಟ್ಯೂಬ್ ಚಾನಲ್ ಮೂಲಕ ಒಂದೊಂದು ಸತ್ಯವನ್ನು ಹೊರಗೆಳೆದು ಜನರಿಗೆ ತೋರಿಸುತ್ತಾ ಹೋಗಿ, ನೋಡುಗರ ಗಮನ ಸೆಳೆಯಿರಿ. ಅದುವೆ ಬದಲಾವಣೆ ಎಂದು ಸಲಹೆ ನೀಡಿದರು.

ಮನೆ ಊಟ, ಹಾಸಿಗೆ, ಬಟ್ಟೆ ಕೋರಿಕೆ ಅರ್ಜಿ ವಜಾ; ದರ್ಶನ್‌ಗೆ ಜೈಲೂಟವೇ ಗತಿ



ಬೆಂಗಳೂರು, ಜು.25– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಅವರು ಮನೆ ಊಟ, ಹಾಸಿಗೆ, ಬಟ್ಟೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು 24ನೇ ಎಸಿಎಂಎಂ ಕೋರ್ಟ್ ಗುರುವಾರ ವಜಾಗೊಳಿಸಿದೆ. ಈಗ ದರ್ಶನ್‌ಗೆ ಜೈಲಿನ ಊಟವೇ ಗತಿ ಆಗಿದೆ. ಜೈಲೂಟದಿಂದ ಅಜೀರ್ಣ, ಅತಿಸಾರ ಆಗಿದೆ. ಇದರಿಂದ ದೇಹದ ತೂಕ ಕಡಿಮೆಯಾಗುತ್ತಿದೆ ಎಂಬ ಕಾರಣ ನೀಡಿ ಮನೆಯ ಊಟ ತರಿಸಲು ಅನುಮತಿ ಕೋರಿ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ವಿಶ್ವನಾಥ್ ಸಿ.ಗೌಡರ್, ಕೊಲೆ ಆರೋಪಿಗಳಿಗೆ ಮನೆಯ ಊಟ, ಬಟ್ಟೆ, ಹಾಸಿಗೆ ಪಡೆಯಲು ಅವಕಾಶವಿಲ್ಲ. ಜೈಲು ನಿಯಮಾವಳಿ 728ರಲ್ಲಿ ಮನೆಯ ಊಟ, ಬಟ್ಟೆ, ಹಾಸಿಗೆ ಪಡೆಯಲು ಅವಕಾಶವಿಲ್ಲ ಎಂದು ಹೇಳಿ, ಅರ್ಜಿ ವಜಾಗೊಳಿಸಿದ್ದಾರೆ. ಜೈಲೂಟದಿಂದ ದರ್ಶನ್‌ಗೆ ಯಾವುದೇ ಸಮಸ್ಯೆ ಆಗಿಲ್ಲ ಎಂದರು.

ದೇಶ - ವಿದೇಶ

ನೀಟ್ ಪತ್ರಿಕೆ ಸೋರಿಕೆ ಪ್ರಕರಣ

1 ಪ್ರಶ್ನೆ ಪತ್ರಿಕೆಗೆ 60 ಲಕ್ಷ ನೀಡಿ 150 ಅಭ್ಯರ್ಥಿಗಳಿಂದ ಖರೀದಿ

ಪಾಟ್ನಾ: ನೀಟ್ ಪತ್ರಿಕೆ ಸೋರಿಕೆ ಹಗರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಮಾಹಿತಿ ಹೊರಬಿದ್ದಿದ್ದು, 35ರಿಂದ 60 ಲಕ್ಷ ರೂ. ನೀಡಿ ನೀಟ್ ಪ್ರಶ್ನೆ ಪತ್ರಿಕೆಗಳನ್ನು ಖರೀದಿಸಿರುವುದು ತನಿಖೆಯಿಂದ ತಿಳಿದು ಬಂದಿದೆ. ಬಿಹಾರದ ಅಭ್ಯರ್ಥಿಗಳು 35ರಿಂದ 45 ಲಕ್ಷ ರೂ.ಗೆ ಪೇಪರ್ ಖರೀದಿಸಿದ್ದರು. ಆದರೆ ಬೇರೆ ರಾಜ್ಯಗಳ ಅಭ್ಯರ್ಥಿಗಳಿಗೆ 55ರಿಂದ 60 ಲಕ್ಷ ರೂ.ಗೆ ಪತ್ರಿಕೆ ನೀಡಲು ನಿರ್ಧರಿಸಲಾಗಿತ್ತು ಎಂಬ ಆತಂಕಕಾರಿ ಮಾಹಿತಿ ತಿಳಿದು ಬಂದಿದೆ. ಇದುವರೆಗೆ ಸುಮಾರು 150 ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಗಳನ್ನು ಖರೀದಿಸಿದ್ದಾರೆ. ಇವುಗಳಲ್ಲಿ ಕೆಲವು ಪರೀಕ್ಷಾ ಕೇಂದ್ರಗಳು ಜಾರ್ಖಂಡ್‌ನ ಹಜಾರಿ ಬಾಗ್‌ನಲ್ಲಿ ಮತ್ತು ಕೆಲವು ಮಹಾರಾಷ್ಟ್ರದ ಲಾತೂರ್ ಜಿಲ್ಲೆಯಲ್ಲಿವೆ. ಕೆಲವು ಅಭ್ಯರ್ಥಿಗಳು ಗುಜರಾತ್‌ನ ಗೋದ್ರಾ ಮತ್ತು ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಪರೀಕ್ಷಾ ಕೇಂದ್ರಗಳನ್ನು ಹೊಂದಿದ್ದರು. ಪೇಪರ್ ಸೋರಿಕೆ ಪ್ರಕರಣದ ತನಿಖೆ ನಡೆಯುತ್ತಿದ್ದರೂ ಈ ದಂಧೆಯ ಪ್ರಮುಖ ಆರೋಪಿ ಸಂಜೀವ್ ಮುಖಿಯಾ ಇನ್ನೂ ತಲೆ ಮರೆಸಿಕೊಂಡಿದ್ದಾನೆ. ಆದರೆ ರಾಕಿ ಮತ್ತು ಚಿಂಟು ಸೇರಿದಂತೆ ಅವನ ಸಹಾಯಕರು ಮತ್ತು ಸಹಚರರು ಸಿಬಿಐ ವಶದಲ್ಲಿದ್ದಾರೆ. ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿರುವ ಓಯಸಿಸ್ ಶಾಲೆಗೆ ಹೋಗುತ್ತಿದ್ದ ನೀಟ್ ಪೇಪರ್‌ಗಳನ್ನು ರಾಕಿ ಹೊರತೆಗೆದು ನಂತರ ಚಿಂಟು ಮೂಲಕ ಬಿಹಾರಕ್ಕೆ ಪೇಪರ್‌ಗಳನ್ನು ಕಳುಹಿಸಿದ್ದ ಎಂದು ಆರೋಪಿಸಲಾಗಿದೆ. ಚಿಂಟು ಸಂಜೀವ್ ಮುಖಿಯ ಸೊಸೆಯ ಪತಿ. ನೀಟ್ ಪೇಪರ್ ಸೋರಿಕೆ ಪ್ರಕರಣದ ಬಹುತೇಕ ಆರೋಪಿಗಳು ನಾಮಡಾ ಜಿಲ್ಲೆಯ ನಿವಾಸಿಗಳಾಗಿದ್ದಾರೆ.



ತಂದೆಯ ಕಣ್ಣೆದುರೇ 200 ಅಡಿ ಬೆಟ್ಟದಿಂದ ಬಿದ್ದು ಯುವತಿ ಸಾವು

ವಾಷಿಂಗ್ಟನ್: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿನ ಯೋಸೆಮೈಟ್ ರಾಷ್ಟ್ರೀಯ ಉದ್ಯಾನದಲ್ಲಿ ತಂದೆ ಜತೆಗೆ ಕಡಿದಾದ ಬಂಡೆ ಏರುವ ಚಾರಣದಲ್ಲಿ ಭಾಗಿಯಾಗಿದ್ದ ಅರಿಜೋನಾ ರಾಜ್ಯ ವಿವಿಯ 20 ವರ್ಷದ ವಿದ್ಯಾರ್ಥಿನಿ ಕಾಲುಜಾರಿ ಬಿದ್ದು ಮೃತಪಟ್ಟಿದ್ದಾಳೆ. ಮತ ದುರ್ದೈವಿಯನ್ನು ಗ್ರೇಸ್ ರೊಹ್ಲೋಫ್ ಎಂದು ಗುರುತಿಸಲಾಗಿದೆ.



ಗ್ರೇಸ್ ರೊಹ್ಲೋಫ್ ಮತ್ತು ಆಕೆಯ ತಂದೆ ಜೊನಾಥನ್ ರೊಹ್ಲೋಫ್ ಇಬ್ಬರೂ ಬಹಳ ಪರಿಣಿತ ಪರ್ವತಾರೋಹಿಗಳು. ಜುಲೈ 11ರಂದು ತಮ್ಮ ಜತೆಗೆ ಕಡಿದಾದ ಬೆಟ್ಟ ಏರುತ್ತಿದ್ದ ಇತರೆ ಪರ್ವತಾರೋಹಿಗಳಿಗೆ ಸಹಾಯ ಮಾಡಲು ಇಬ್ಬರೂ ನಿಧಾನವಾಗಿ ಏರಿದ್ದರು. ಆದರೆ ಇದ್ದಕ್ಕಿದ್ದಂತೆ ಮಳೆ ಆರ್ಭಟಿಸಿತ್ತು. ಇದರಿಂದ ಅವರ ಚಾರಣ ಅಪಾಯಕಾರಿಯಾಗಿ ಪರಿಣಮಿಸಿತ್ತು. ಮಗಳು ಗ್ರೇಸ್, ಕಡಿದಾದ ಕಲ್ಲಿನ ಬೆಟ್ಟದಿಂದ ಮುಖ ಕೆಳಗಿರುವ ಸ್ಥಿತಿಯಲ್ಲಿ ಆಳದ ಗುಂಡಿಗೆ ಬೀಳುವ ಎದೆ ನಡುಗಿಸುವ ಸನ್ನಿವೇಶವನ್ನು ಜೊನಾಥನ್ ಕಣ್ಣಾರೆ ಕಂಡಿದ್ದಾರೆ. ಗ್ರೇಸ್ ಬಿದ್ದ ಜಾಗವನ್ನು ತಲುಪಲು ಜೊನಾಥನ್ ಕೂಡಲೇ ಪ್ರಯತ್ನಿಸಿದ್ದರು. ಆದರೆ ಬಹಳ ಸಂಕೀರ್ಣವಾದ ಪ್ರದೇಶದಲ್ಲಿ ಅವರು ಕೆಳಕ್ಕೆ ಇಳಿಯುವುದು ಸಹ ಸುಲಭವಾಗಿರಲಿಲ್ಲ. ಘಟನೆ ಬಳಿಕ ಜೊನಾಥನ್ ಅವರು ಮಗಳನ್ನು ಕಾಪಾಡುವ ರಕ್ಷಣಾ ತಂಡಕ್ಕಾಗಿ 911ಕ್ಕೆ ಕರೆ ಮಾಡಿದ್ದಾರೆ. ರಕ್ಷಣಾ ತಂಡಗಳು ಗ್ರೇಸ್ ಇದ್ದ ಸ್ಥಳ ತಲುಪಲು 3 ಗಂಟೆ ಬೇಕಾಗಿತ್ತು. ಬೆಟ್ಟ ಇಳಿಯುವಾಗ ಗ್ರೇಸ್‌ಳ ಹೊಸ ಹೈಕಿಂಗ್ ಬೂಟ್‌ಗಳು ಜಾರತೊಡಗಿದ್ದವು. ಕಾಲುಗಳು ಜಾರುತ್ತಿವೆ ಎಂದು ಆಕೆ ತಂದೆಗೆ ಕೂಗಿ ಹೇಳಿದ್ದಳು. ಆದರೆ ಅದು ಹೇಳಿ ನಿಮಿಷಗಳಾಗುವುದರಲ್ಲಿ ಆಕೆ ಕೆಳ ಜಾರಿದ್ದಳು. ಜೊನಾಥನ್ ಅಸಹಾಯಕರಾಗಿ ನೋಡಲಷ್ಟೇ ಸಾಧ್ಯವಾಯಿತು.

ಮನಿಲಾ ಕೊಲ್ಲಿಯಲ್ಲಿ ಮುಳುಗಿದ ಫಿಲಿಪ್ಪೀನ್ಸ್ ಟ್ಯಾಂಕರ್: ತೈಲ ಸೋರಿಕೆ ಭೀತಿ

ಮನಿಲಾ: ಸಮುದ್ರದಲ್ಲಿ ಎದ್ದ ಎತ್ತರದ ಅಲೆಗಳ ಕಾರಣದಿಂದಾಗಿ ಫಿಲಿಪ್ಪೀನ್ಸ್‌ನ ತೈಲ ಟ್ಯಾಂಕರ್‌ವೊಂದು ಮನಿಲಾ ಕೊಲ್ಲಿಯಲ್ಲಿ ಗುರುವಾರ ಮುಳುಗಿದೆ. ನಂತರ ರಾತ್ರಿ ಕೋಸ್ಟ್ ಗಾರ್ಡ್ ನಡೆಸಿದ ರಕ್ಷಣಾ ಕಾರ್ಯಾಚರಣೆಯಲ್ಲಿ ಟ್ಯಾಂಕರ್‌ನ 17 ಸಿಬ್ಬಂದಿಗಳ ಪೈಕಿ 16 ಮಂದಿಯನ್ನು ರಕ್ಷಿಸಲಾಗಿದೆ. ಸದ್ಯ ಈ ಹಡಗಿನಿಂದ ತೈಲ ಸೋರಿಕೆಯಾಗುತ್ತಿದೆಯೇ ಎಂಬುದನ್ನು ಕಂಡು ಹಿಡಿಯಲು ಕೋಸ್ಟ್ ಗಾರ್ಡ್ ಸಿಬ್ಬಂದಿ ಪ್ರಯತ್ನಿಸುತ್ತಿದೆ. ಟೆರ್ರಾ ನೋವಾ ಹೆಸರಿನ ಟ್ಯಾಂಕರ್ ಬಟಾನ್ ಪ್ರಾಂತ್ಯದಿಂದ ಕೇಂದ್ರ ಪ್ರಾಂತ್ಯವಾದ ಇಲೋಯಿಲೊಗೆ ಸುಮಾರು 1.4 ಮಿಲಿಯನ್ ಲೀಟರ್ (3,70,000 ಗ್ಯಾಲನ್) ಕೈಗಾರಿಕಾ ಇಂಧನ ತೈಲವನ್ನು ಹೊತ್ತು ಸಾಗುತ್ತಿತ್ತು. ಸಮುದ್ರದಲ್ಲಿ ಟ್ಯಾಂಕರ್ ಮುಳುಗಿದ ಸ್ಥಳದಲ್ಲಿ ನೀರಿನ ಮೇಲೆ ಸುಮಾರು 3.7 ಕಿಲೋಮೀಟರ್ ಉದ್ದದ ತೈಲ ಸೋರಿಕೆ ಆಗಿರುವುದು ವೈಮಾನಿಕ ಸಮೀಕ್ಷೆಯಲ್ಲಿ ತಿಳಿದುಬಂದಿದೆ. ಆದರೆ, ಅದು ಟ್ಯಾಂಕರ್‌ನ ಇಂಧನ ಟ್ಯಾಂಕ್‌ನಿಂದ ಸೋರಿಕೆಯಾದ ತೈಲವಿರಬಹುದು ಎಂದು ಅಂದಾಜಿಸಲಾಗಿದೆ. ಟ್ಯಾಂಕರ್ ಮುಳುಗಿದಾಗ, ಕೋಸ್ಟ್ ಗಾರ್ಡ್‌ನ ಬಿಆರ್‌ಪಿ ಮೆಲ್ಚೋರಾ ಅಕ್ವಿನೊ ಎಂಬ ಹಡಗು ಅದರ ಹತ್ತಿರದಲ್ಲಿಯೇ ಇತ್ತು. ಸದ್ಯ ಈ ಹಡಗಿನಲ್ಲಿರುವ ಕೋಸ್ಟ್ ಗಾರ್ಡ್ ಸಿಬ್ಬಂದಿಯು ಕಾಣೆಯಾದ ಓರ್ವ ಟ್ಯಾಂಕರ್ ಸಿಬ್ಬಂದಿಗಾಗಿ ಹುಡುಕಾಟ ನಡೆಸಿದ್ದಾರೆ.




ಐಫೋನ್ ವಿಚಾರವಾಗಿ ಜಗಳ; ತಂಗಿಯನ್ನೇ ಕೊಂದ ಬಾಲಕಿ



ಅಮೆರಿಕ: 12 ವರ್ಷದ ಬಾಲಕಿಯೊಬ್ಬಳು ತನ್ನ 8 ವರ್ಷದ ಸಹೋದರಿಯನ್ನು ಕೊಂದಿರುವ ಘಟನೆ ಅಮೆರಿಕದ ಟೆನ್ನೆಸ್ಸಿಯಲ್ಲಿ ನಡೆದಿದೆ. ಐಫೋನ್ ವಿಚಾರವಾಗಿ ಇಬ್ಬರ ನಡುವೆ ಜಗಳ ಪ್ರಾರಂಭವಾಗಿದ್ದು, ಈ ವೇಳೆ ಬಾಲಕಿ ತನ್ನ ತಂಗಿಯ ಕತ್ತು ಹಿಸುಕಿ ಕೊಂದಿದ್ದಾಳೆ. ಇದಲ್ಲದೇ ಯಾರೂ ತನ್ನನ್ನು ಅನುಮಾನಿಸಬಾರದೆಂದು, ಅವಳು ತನ್ನ ಅಪರಾಧವನ್ನು ಮರೆಮಾಚಲು ಪ್ರಯತ್ನಿಸಿದ್ದಾಳೆ. ಆದರೆ ಮನೆಯಲ್ಲಿ ಅಳವಡಿಸಿದ್ದ ಸಿಸಿಟಿವಿಯಲ್ಲಿ ಸಂಪೂರ್ಣ ಘಟನೆ ಸೆರೆಯಾಗಿದ್ದು, ಈ ದೃಶ್ಯ ಕಂಡು ಬಾಲಕಿಯ ಪೋಷಕರು ಬೆಚ್ಚಿ ಬಿದ್ದಿದ್ದಾರೆ. ಮೃತ ಬಾಲಕಿ ಡೆಮಾರಿಯಾ ಹೋಲಿಂಗ್ಸ್‌ವರ್ತ್ (8) ಎಂದು ಗುರುತಿಸಲಾಗಿದೆ. ಪೋಷಕರ ದೂರಿನ ಮೇರೆಗೆ ಪೊಲೀಸರು ಬಾಲಕಿಯನ್ನು ಬಂಧಿಸಿದ್ದಾರೆ. ಕೊಲೆ ಮತ್ತು ಸಾಕ್ಷ್ಯ ನಾಶಪಡಿಸಿದ ಪ್ರಕರಣದಡಿಯಲ್ಲಿ ಬಾಲಕಿ ವಿರುದ್ಧ ಕೇಸು ದಾಖಲಿಸಲಾಗಿದೆ. ತನಿಖೆ ವೇಳೆ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದು, ಆರೋಪಿ ಬಾಲಕಿ ತನ್ನ ಸಹೋದರಿಯನ್ನು ಕತ್ತು ಹಿಸುಕಿ ಹತ್ಯೆ ಮಾಡಿರುವುದು ಕಂಡುಬಂದಿದೆ. ಬೇಸಿಗೆ ರಜೆಯಲ್ಲಿ ಅಜ್ಜಿ ಮನೆಗೆ ಬಂದಿದ್ದ ಈ ಇಬ್ಬರು ಸಹೋದರಿಯರ ನಡುವೆ ಫೋನಿಗಾಗಿ ಜಗಳ ನಡೆದಿದೆ. ಕೋಪಗೊಂಡ ಬಾಲಕಿ ಕತ್ತು ಹಿಸುಕಿ ಕೊಂದಿದ್ದಾಳೆ.

ಮೋಸ್ಟ್ ಬ್ಯೂಟಿಫುಲ್ ಬೈಕರ್ ಮೋಟೋ ತಾನ್ಯ ರಸ್ತೆ ಅಪಘಾತಕ್ಕೆ ಬಲಿ

ಮಾಸ್ಕೋ: ಖ್ಯಾತ ಮಹಿಳಾ ಬೈಕರ್ ಮೋಟೋ ತಾನ್ಯ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾಳೆ. ಅಪಘಾತದ ರಭಸಕ್ಕೆ ಈಕೆಯ BMW S1000RR ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಈ ಅಪಘಾತದಲ್ಲಿ ಮೋಟೋ ತಾನ್ಯ ಸ್ಥಳದಲ್ಲೇ ಮೃತಪಟ್ಟರೆ, ಮತ್ತೋರ್ವ ರೈಡರ್ ಗಂಭೀರವಾಗಿ ಗಾಯಗೊಂಡಿದ್ದಾರೆ. ರಷ್ಯಾದ ಮೋಸ್ಟ್ ಬ್ಯೂಟಿಫುಲ್ ಬೈಕರ್ ಎಂದೇ ಗುರುತಿಸಿಕೊಂಡಿರುವ ತಾಟ್ಯನ ಒರ್ಲೋಲಿನಾ ನಿಧನಕ್ಕೆ ರೇಸಿಂಗ್ ಜಗತ್ತು ಕಂಬನಿ ಮಿಡಿದಿದೆ. ಮುಗ್ಲಾದಿಂ ಬೋಡ್ರಮ್ ರಸ್ತೆಯಲ್ಲಿ ಈ ಅಪಘಾತ ಸಂಭವಿಸಿದೆ.



ವೇಗವಾಗಿ ಸಾಗುತ್ತಿದ್ದ ಮೋಟೋ ತಾನ್ಯ ಏಕಾಏಕಿ ನಿಯಂತ್ರಣ ಕಳೆದು ಕೊಂಡಿದ್ದಾಳೆ. ಇದರ ಪರಿಣಾಮ ಅದೇ ವೇಗದಲ್ಲಿ ಬೈಕ್ ನೇರವಾಗಿ ಟ್ರಕ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯಾದ ರಭಸಕ್ಕೆ ಬೈಕ್ ಸಂಪೂರ್ಣ ಪುಡಿ ಪುಡಿಯಾಗಿದೆ. ಮಾಹಿತಿ ತಿಳಿಯುತ್ತಿದ್ದಂತೆ ವೈದ್ಯಕೀಯ ತಂಡ ಸ್ಥಳಕ್ಕೆ ಧಾವಿಸಿದೆ. ಆದರೆ ಡಿಕ್ಕಿಯ ರಸಭಕ್ಕೆ ತಾನ್ಯ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಮೋಟಾ ತಾನ್ಯ ಹಾಗೂ ಇತರ ರೇಸಿಂಗ್ ಪಟುಗಳ ಜೊತೆ ವೇಗವಾಗಿ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ತಾನ್ಯ ತಂಡದ ಇತರ ಸದಸ್ಯರ ಬೈಕ್ ಸ್ಕಿಡ್ ಆಗಿದೆ. ತಾನ್ಯ ಮುಂಭಾಗದಲ್ಲಿ ಬೈಕ್ ಸ್ಕಿಡ್ ಆಗಿ ಬಿದ್ದ ಕಾರಣ ಏಕಾಏಕಿ ಬ್ರೇಕ್ ಹಾಕಿದ್ದಾರೆ. ಇದರಿಂದ ಅತೀ ವೇಗದಲ್ಲಿದ್ದ ಬೈಕ್ ನಿಯಂತ್ರಣ ಕಳೆದುಕೊಂಡು ಟ್ರಕ್‌ಗೆ ಡಿಕ್ಕಿಯಾಗಿ ಮೃತಪಟ್ಟಿದ್ದಾಳೆ. ಮೋಟೋ ತಾನ್ಯ ತನ್ನ 13 ವರ್ಷದ ಮಗನನ್ನು ಅಗಲಿದ್ದಾಳೆ.

ಮೈಸೂರು ವಾರಿಯರ್ಸ್ ತಂಡಕ್ಕೆ 18 ಆಟಗಾರರ ಆಯ್ಕೆ

- ಮಹಾರಾಜ ಟ್ರೋಫಿಯ 3ನೇ ಆವೃತ್ತಿಯಲ್ಲಿ ತಂಡ ಪ್ರತಿನಿಧಿಸಲಿರುವ ಆಟಗಾರರು
- ಆ.15ರಿಂದ ಸೆ.1ರವರೆಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಪಂದ್ಯಾವಳಿ



ಬೆಂಗಳೂರಿನಲ್ಲಿ ಗುರುವಾರ ನಡೆದ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗ, ಪವನ್ ರಂಗ ಸೇರಿದಂತೆ ತಂಡದ ಆಟಗಾರರು ಹಾಗೂ ತರಬೇತುದಾರರನ್ನು ಚಿತ್ರದಲ್ಲಿ ಕಾಣಬಹುದು.



ಕರುಣ್ ನಾಯರ್



ಪ್ರಸಿದ್ಧ್ ಕೃಷ್ಣ




ಗೌತಮ್ ಕೃಷ್ಣಪ್ಪ



ಕಾರ್ತಿಕ್ ಸಿ. ಅಜಿತ್



ಮನೋಜ್ ಭಾಂಡಗೆ



ವೆಂಕಟೇಶ್ ಎಂ

ಮೈಸೂರು,ಜು.25(ಪಿಎಂ)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20–2024ರ (3ನೇ ಆವೃತ್ತಿ) ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡದ ಪರವಾಗಿ ಆಡಲು 18 ಆಟಗಾರರನ್ನು ಆಯ್ಕೆ ಮಾಡಲಾಗಿದೆ.

ಮೈಸೂರು ವಾರಿಯರ್ಸ್ ತಂಡದ ಮಾಲೀಕತ್ವ ಹೊಂದಿರುವ ಎನ್.ಆರ್. ಗ್ರೂಪ್ ವತಿಯಿಂದ ತಂಡಕ್ಕೆ ಆಟಗಾರರನ್ನು ಆಯ್ಕೆ ಮಾಡಿ, ಆಟಗಾರರ ಜೊತೆ ಒಪ್ಪಂದ ಕೂಡ ಮಾಡಿಕೊಳ್ಳಲಾಗಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ)ನಲ್ಲಿ ಗುರುವಾರ ನಡೆದ ಹರಾಜು ಪ್ರಕ್ರಿಯೆಯಲ್ಲಿ ಆಟಗಾರರನ್ನು ಆಯ್ಕೆ ಮಾಡಲಾಯಿತು.

ಈ ಆಟಗಾರರರು ಆ.15ರಿಂದ ಸೆ.1ರವರೆಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಮಹಾರಾಜ ಟ್ರೋಫಿಯ ಮೂರನೇ ಆವೃತ್ತಿಯ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಈ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವು ಹುಬ್ಬಳ್ಳಿ ಟೈಗರ್ಸ್, ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರಾಗನ್ಸ್, ಗುಲ್ಬರ್ಗಾ ಮಿಸ್ಟಿಕ್ಸ್ ಮತ್ತು ಶಿವಮೊಗ್ಗ ಲಯನ್ಸ್ ಸೇರಿದಂತೆ ಕರ್ನಾಟಕದ ಐದು ತಂಡಗಳ ವಿರುದ್ಧ ಹಣಾಹಣಿ ನಡೆಸಲಿದೆ.

ಹರಾಜು ಪ್ರಕ್ರಿಯೆ ಬಳಿಕ ಮಾತನಾಡಿದ ಮೈಸೂರು ವಾರಿಯರ್ಸ್ ತಂಡದ ಮಾಲೀಕರೂ ಆದ ಸೈಕಲ್ ಪ್ಯೂರ್ ಅಗರಬತ್ತಿ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ಮಹಾರಾಜ ಟ್ರೋಫಿಯ 3ನೇ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರವಾಗಿ ಆಡಲು ರಾಜ್ಯದ ಅತ್ಯುತ್ತಮ ಆಟಗಾರರನ್ನು ಆಯ್ಕೆ ಮಾಡಲಾಗಿದೆ. ಇದು ಸಂತಸ ತಂದಿದೆ. ಈ ವರ್ಷ ನಮ್ಮ ತಂಡ ಪ್ರಶಸ್ತಿ ಮುಡಿಗೇರಿಸಿಕೊಳ್ಳುವ ವಿಶ್ವಾಸವಿದೆ ಎಂದು ತಿಳಿಸಿದರು.

ಮೈಸೂರು ವಾರಿಯರ್ಸ್ ತಂಡದ ಮಾಲೀಕರೂ ಆದ ರಂಗ ಸನ್ಸ್ ಏರೋಸ್ಪೇಸ್‌ನ ಸಿಇಓ ಪವನ್ ರಂಗ ಮಾತನಾಡಿ, ಆಯ್ಕೆಗೊಂಡಿರುವ ಆಟಗಾರರು ಎನ್‌ಆರ್ ಗ್ರೂಪ್ ಅಧೀನದ ಮೈಸೂರು ವಾರಿಯರ್ಸ್ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವ ಪೂರ್ಣ ಭರವಸೆ ನಮಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ವಾರಿಯರ್ಸ್ ತಂಡದಲ್ಲಿ ರಾಹುಲ್ ದ್ರಾವಿಡ್ ಪುತ್ರ

ಟೀಂ ಇಂಡಿಯಾ ಮಾಜಿ ಮುಖ್ಯ ಕೋಚ್ ಹಾಗೂ ಕ್ರಿಕೆಟ್ ದಿಗ್ಗಜ ರಾಹುಲ್ ದ್ರಾವಿಡ್ ಅವರ ಪುತ್ರ ಸಮಿತ್ ದ್ರಾವಿಡ್ ಮಹಾರಾಜ ಟ್ರೋಫಿಯ ಟಿ20 2024ರ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಗುರುವಾರ ನಡೆದ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಸಮಿತ್ ದ್ರಾವಿಡ್ ಅವರು ಮೈಸೂರು ವಾರಿ ಯರ್ಸ್ ಪಾಲಾಗಿದ್ದಾರೆ. ಸಮಿತ್ ದ್ರಾವಿಡ್ ಭರವಸೆಯ ಆಲ್ ರೌಂಡರ್.



ಮೈಸೂರು ವಾರಿಯರ್ಸ್ ತಂಡದ ಸದಸ್ಯರು

- ಕಾರ್ತಿಕ್ ಸಿ. ಅಜಿತ್
- ಕಾರ್ತಿಕ್ ಎಸ್‌ಯು
- ಕರುಣ್ ನಾಯರ್
- ಸಮಿತ್ ದ್ರಾವಿಡ್
- ಹರ್ಷಿಲ್ ಧರ್ಮನಿ
- ಮನೋಜ್ ಭಾಂಡಗೆ
- ಜಗದೀಶ್ ಸುಚಿತ್
- ಗೌತಮ್ ಕೃಷ್ಣಪ್ಪ
- ವಿದ್ಯಾಧರ ಪಾಟೀಲ
- ವೆಂಕಟೇಶ್ ಎಂ
- ಗೌತಮ್ ಮಿಶ್ರಾ
- ಧನುಷ್‌ಗೌಡ
- ದೀಪಕ್ ದೇವಾಡಿಗ
- ಸುಮಿತ್ ಕುಮಾರ್
- ಸ್ಮಯನ್ ಶ್ರೀವಾಸ್ತವ
- ಜಾಸ್ಪರ್ ಇಜೆ
- ಸರ್ಫರಾಜ್ ಅಶ್ರಫ್
- ಪ್ರಸಿದ್ಧ್ ಕೃಷ್ಣ

ಹರಾಜಿನಲ್ಲಿ ಮರು ಖರೀದಿ

ಕಳೆದ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡ ವನ್ನು ಪ್ರತಿನಿಧಿಸಿದ್ದ ಪ್ರಸಿದ್ಧ್ ಕೃಷ್ಣ, ಜಗದೀಶ್ ಸುಚಿತ್, ಗೌತಮ್ ಮಿಶ್ರಾ ಹಾಗೂ ಎಂ.ವೆಂಕಟೇಶ ಅವರನ್ನು ಈ ಬಾರಿಯ ಆವೃತ್ತಿಗೂ ಮರು ಖರೀದಿ ಮಾಡಲಾಗಿದೆ.



ವಿದ್ಯಾಧರ ಪಾಟೀಲ

ತಂಡಕ್ಕೆ ನಾಲ್ವರು ರಿಟೈನ್...

ಪ್ರತಿ ಫ್ರಾಂಚೈಸ್‌ಗಳು ಈ ಹಿಂದಿನ ಆವೃತ್ತಿಯ ತಂಡದಿಂದ ನಾಲ್ಕು ಆಟಗಾರರನ್ನು ಉಳಿಸಿ ಕೊಳ್ಳಲು (ರಿಟೈನ್) ಅವಕಾಶ ಇದ್ದ ಹಿನ್ನೆಲೆಯಲ್ಲಿ ಮೈಸೂರು ವಾರಿಯರ್ಸ್ ತಂಡವು ಕರುಣ್ ನಾಯರ್, ಮನೋಜ್ ಭಾಂಡಗೆ, ಕಾರ್ತಿಕ್ ಎಸ್.ಯು ಹಾಗೂ ಕಾರ್ತಿಕ್ ಸಿ.ಅಜಿತ್ ಅವರನ್ನು ಉಳಿಸಿಕೊಂಡಿದೆ.



ಜಗದೀಶ್ ಸುಚಿತ್

3ನೇ ಆವೃತ್ತಿಯ ಮಹಾರಾಜ ಟ್ರೋಫಿ ಹರಾಜು ಪ್ರಕ್ರಿಯೆ

ಮೈಸೂರು ಕ್ರಿಕೆಟರ್ ಚೇತನ್‌ಗೆ ಅತೀ ಹೆಚ್ಚು ಮೊತ್ತ

ಮೈಸೂರು, ಜು.25(ಪಿಎಂ)– ಮಹಾರಾಜ ಟ್ರೋಫಿ 3ನೇ ಆವೃತ್ತಿಗೆ ಗುರುವಾರ ನಡೆದ ಹರಾಜು ಪ್ರಕ್ರಿಯೆಯಲ್ಲಿ ಭರವಸೆ ಆಟಗಾರರು ಲಕ್ಷಾಂತರ ರೂ.ಗೆ ವಿವಿಧ ತಂಡಗಳ ಪಾಲಾಗಿದ್ದು, ಈ ಪೈಕಿ ಮೈಸೂರು ಮೂಲದ ಕ್ರಿಕೆಟರ್ ಚೇತನ್ ಎಲ್.ಆರ್. ಅವರನ್ನು 8.60 ಲಕ್ಷ ರೂ.ಗೆ ಬೆಂಗಳೂರು ಬ್ಲಾಸ್ಟರ್ಸ್ ಆಯ್ಕೆ ಮಾಡಿಕೊಂಡಿದೆ. ಆ ಮೂಲಕ ಇಡೀ ಹರಾಜು ಪ್ರಕ್ರಿಯೆಯಲ್ಲಿ ಅತೀ ಹೆಚ್ಚು ಮೊತ್ತಕ್ಕೆ ಹರಾಜಾದ ಆಟಗಾರ ಎಂಬ ಹಿರಿಮೆಗೆ ಭಾಜನರಾಗಿದ್ದಾರೆ.



ಮೈಸೂರು ಜಿಲ್ಲೆಯ ಇಲವಾಲ ಹೋಬಳಿಯ ಎಲ್.ಡಿ.ರೇವಣ್ಣ ಹಾಗೂ ಪಿ.ಎಸ್.ಸರಸ್ವತಿ ದಂಪತಿ ಪುತ್ರ ಚೇತನ್, 2000ನ ಮೇ 25ರಂದು ಜನಿಸಿದ್ದಾರೆ. ಚಿಕ್ಕ ವಯಸ್ಸಲ್ಲೇ ಕ್ರಿಕೆಟ್‌ನತ್ತ ಒಲವು ಹೊಂದಿದ್ದ ಅವರು, ಎಸ್‌ಎಸ್‌ಎಲ್‌ಸಿಗೆ ಬರುವ ವೇಳೆಗೆ ಕ್ರಿಕೆಟ್‌ನಲ್ಲಿ ಸಂಪೂರ್ಣ ತೊಡಗಿಸಿಕೊಂಡರು. ಇದೀಗ ಹುಬ್ಬಳಿಯಲ್ಲಿ ರೈಲ್ವೆ ಇಲಾಖೆಯಲ್ಲಿ ಉದ್ಯೋಗಿ ಆಗಿರುವ ಅವರು, 3ನೇ ಆವೃತ್ತಿಯ ಮಹಾರಾಜ ಟ್ರೋಫಿಯ ಹರಾಜಿನಲ್ಲಿ ಹೆಚ್ಚು ಮೊತ್ತಕ್ಕೆ ಆಯ್ಕೆಯಾದವರಲ್ಲಿ ಮೊದಲನೇ ಸ್ಥಾನ ಅಲಂಕರಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಚೇತನ್, ಇಷ್ಟೊಂದು ದುಬಾರಿ ಮೊತ್ತಕ್ಕೆ ಆಯ್ಕೆಯಾಗುತ್ತೇನೆ ಎಂದುಕೊಂಡಿರಲಿಲ್ಲ. ಒಟ್ಟಾರೆ ಈ ಅನಿರೀಕ್ಷಿತ ಅದೃಷ್ಟ ಖುಷಿ ತಂದಿದೆ. ನಾನು ಮೊಟ್ಟ ಮೊದಲಿಗೆ ಮಹಾರಾಜ ಟ್ರೋಫಿ ಪಂದ್ಯಾವಳಿಗೆ 2022ರಲ್ಲಿ ಪ್ರವೇಶಿಸಿದೆ. ಆಗ ಇದೇ ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ ಆಯ್ಕೆಯಾಗಿದ್ದೆ. ಅದೇ ತಂಡಕ್ಕೆ ಈ ಬಾರಿ ಮತ್ತೆ ಆಯ್ಕೆಯಾಗಿರುವುದು ಸಂತಸ ಉಂಟು ಮಾಡಿದೆ. ಗದಾಧರ್ ನನ್ನ ಕ್ರಿಕೆಟ್ ತರಬೇತುದಾರರು. ಐಪಿಎಲ್ ಪ್ರವೇಶಿಸುವ ಆಕಾಂಕ್ಷೆ ಹೊಂದಿದ್ದೇನೆ. ಅದು ಈಡೇರುವ ಎಲ್ಲಾ ವಿಶ್ವಾಸ ಹೊಂದಿದ್ದು, ಆ ನಿಟ್ಟಿನಲ್ಲಿ ಶ್ರಮ ವಹಿಸಲಿದ್ದೇನೆ ಎಂದು ತಿಳಿಸಿದರು.



ಹರಾಜು ಪ್ರಕ್ರಿಯೆಯಲ್ಲಿ ಮೈಸೂರು ವಾರಿಯರ್ಸ್ ಪ್ರತಿನಿಧಿಗಳು.

ಜು.28, 'ಚೀನಿ ಮಾಮನಿಗೆ ಒಂದು ದಿನ' ಕಾರ್ಯಕ್ರಮ

ಮೈಸೂರು, ಜು.25(ಜಿಎ)–ಮೈಸೂರಿನ ನಾಲ್ವಡಿ ಸೋಷಿಯಲ್, ಕಲ್ಚರಲ್ ಮತ್ತು ಎಜುಕೇಷನ್ ಟ್ರಸ್ಟ್ ವತಿಯಿಂದ ಜು.28 ರಂದು ಸಂಜೆ 5.30ಕ್ಕೆ ಕಲಾಮಂದಿರದಲ್ಲಿ ಹಳೆಮನೆ ಅಂಗಳದಲ್ಲಿ ರಂಗ ತಾರೆಗಳ ನೆನಪು ಕಾರ್ಯಕ್ರಮ ಪ್ರಯುಕ್ತ 'ಚೀನಿ ಮಾಮನಿಗೆ ಒಂದು ದಿನ' ಎಂಬ ಕಾರ್ಯ ಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ರಂಗಗೀತೆ ಹಾಡಲಾಗುವುದು. ಹಿರಿಯ ಕಲಾವಿದ ಶಿವಾಜಿರಾವ್ ಜಾಧವ್ ಕಾರ್ಯಕ್ರಮ ಉದ್ಘಾಟಿಸುವರು. ರಂಗಾಯಣದ ಮಾಜಿ ನಿರ್ದೇಶಕ ಎಚ್. ಜನಾರ್ಧನ್ (ಜನ್ನಿ) ಅಧ್ಯಕ್ಷತೆ ವಹಿಸುವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಬಿ.ಎಂ. ರಾಮಚಂದ್ರು, ನಂದಾ ಹಳೆಮನೆ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮಂಜುನಾಥ ಬೆಳ ಕೆರೆ ರಚನೆಯ ಹಾಗೂ ತಾವು ನಿರ್ದೇ ಶಿಸಿರುವ ಶರೀಫ ಎಂಬ ನಾಟಕ ಪ್ರದರ್ಶನ ನಡೆಯಲಿದೆ ಎಂದರು. ಗೋಷ್ಠಿಯಲ್ಲಿ ಬಿ.ಎಂ.ರಾಮ ಚಂದ್ರು, ನಂದಾ ಹಳೆಮನೆ, ಜಗದೀಶ್‌ಕುಮಾರ್ ಉಪಸ್ಥಿತರಿದ್ದರು.

ಸ್ನಾತಕ ಪದವಿಯ ಚತುರ್ಮಾಸ ಫಲಿತಾಂಶ ಪ್ರಕಟ


ಮೈಸೂರು: ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ) ಜೂನ್, ಜುಲೈ–2024ರಲ್ಲಿ ನಡೆಸಿದ ಸ್ನಾತಕ ಪದವಿಯ 2ನೇ, 4ನೇ ಮತ್ತು ಆರನೇ ಚತುರ್ಮಾಸ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಿದೆ. ಫಲಿತಾಂಶಗಳನ್ನು UUCMS- Student Login ಮೂಲಕ ಪಡೆಯಬಹುದು. ಅಂಕಗಳ ಮರು ಎಣಿಕೆಗೆ ಜು.29, ಫೋಟೋಪ್ರತಿ ಪಡೆ ಯಲು ಜು.30, ಮರು ಮೌಲ್ಯಮಾಪನಕ್ಕೆ ಆ.3 ಕೊನೆಯ ದಿನವಾಗಿರುತ್ತವೆ.

ಶಿಥಿಲಾವಸ್ಥೆಯ ಕಟ್ಟಡದಲ್ಲಿ ಜೀವ ಭಯದಲ್ಲಿ ದಿನ ದೂಡುತ್ತಿರುವ ನರ್ಸಿಂಗ್ ವಿದ್ಯಾರ್ಥಿನಿಯರು

- ಪದೇಪದೇ ಕುಸಿದು ಬೀಳುತ್ತಿರುವ ಮೇಲ್ಛಾವಣಿ ಗಾರೆ ಚಕ್ಕೆ
- ಮಳೆ ನೀರಿನಿಂದ ಸೋರುತ್ತಿರುವ ಕಟ್ಟಡ



ನರ್ಸಿಂಗ್ ವಿದ್ಯಾರ್ಥಿನಿಯರ ಹಾಸ್ಟೆಲ್ ಮೇಲ್ಛಾವಣಿಯ ಪ್ಲಾಸ್ಟರಿಂಗ್ ಮಾಡಿರುವ ಗಾರೆ ಚಕ್ಕೆಗಳು ಕಳಚಿ ಬಿದ್ದಿರುವುದು.



ಮಳೆ ನೀರಿನಿಂದ ಸೋರುತ್ತಿರುವ ಕಟ್ಟಡ.



ಹಾಸ್ಟೆಲ್ ಕಟ್ಟಡದ ದುಸ್ಥಿತಿ.

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಜು.25 – ಸೋರುತ್ತಿರುವ ಮೇಲ್ಛಾವಣಿ, ಪದೇ ಪದೇ ಕುಸಿದು ಬೀಳುತ್ತಿರುವ ಚಾವಣಿಯ ಗಾರೆ ಚಕ್ಕೆ, ನೀರೇ ಇಲ್ಲದ ಶೌಚಾಲಯದ ಅವ್ಯವಸ್ಥೆಯಿರುವ ಮೈಸೂರು ಸರ್ಕಾರಿ ಶುಶ್ರೂಷಕರ ಶಾಲೆಯ ವಸತಿನಿಲಯದ ಶಿಥಿಲಗೊಂಡ ಕಟ್ಟಡದಲ್ಲಿ 122 ವಿದ್ಯಾರ್ಥಿನಿಯರು ಆತಂಕದಿಂದ ದಿನ ದೂಡುತ್ತಿದ್ದು, ಅಪಾಯ ಸಂಭವಿಸುವ ಮುನ್ನ ವಿದ್ಯಾರ್ಥಿನಿಯರನ್ನು ಸ್ಥಳಾಂತರಿಸುವಂತೆ ಪೋಷಕರು ಆಗ್ರಹಿಸಿದ್ದಾರೆ.

ಪ್ರತಿಷ್ಠಿತ ಮೈಸೂರು ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ನರ್ಸಿಂಗ್ ಶಾಲೆಯ ವಿದ್ಯಾರ್ಥಿನಿಯರ ವಸತಿನಿಲಯವೇ ಸಂಪೂರ್ಣವಾಗಿ ಶಿಥಿಲಾವಸ್ಥೆ ತಲುಪಿದ್ದು, ಅಪಾಯದ ಮುನ್ಸೂಚನೆ ನೀಡುತ್ತಿದೆ. ಸುಮಾರು 80 ವರ್ಷಕ್ಕೂ ಹಳೆಯದಾದ ಕಟ್ಟಡ ನಿರ್ವಹಣೆ ಕೊರತೆಯಿಂದ ದುರ್ಬಲಗೊಂಡಿದ್ದು, ಮೇಲ್ಛಾವಣಿ, ಪಿಲ್ಲರ್‌ಗೆ ಅಳವಡಿಸಿರುವ ಕಬ್ಬಿಣದ ರಾಡ್‌ಗಳು ತುಕ್ಕು ಹಿಡಿದಿದ್ದು, ಮೇಲ್ಛಾವಣಿಯ ಪ್ಲಾಸ್ಟರಿಂಗ್ ಮಾಡಿರುವ ಗಾರೆ ಚಕ್ಕೆಗಳು ನಿರಂತರವಾಗಿ ಬೀಳುತ್ತಿವೆ. ಇದರಿಂದ ಕಟ್ಟಡ ಅಪಾಯದ ಸ್ಥಿತಿಗೆ ತಲುಪಿದ್ದು, ವಿದ್ಯಾರ್ಥಿನಿಯರ ಆತಂಕ ಹೆಚ್ಚಾಗಿದೆ.

ತುರ್ತಾಗಿ ಎಚ್ಚೆತ್ತುಕೊಳ್ಳಲೇಬೇಕು

ಮೆಡಿಕಲ್ ಕಾಲೇಜಿನ ಡೀನ್ ಹಾಗೂ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿನಿಲಯದ ಕಟ್ಟಡದ ವಾಸ್ತವ ಸ್ಥಿತಿಯನ್ನು ತಜ್ಞರೊಂದಿಗೆ ಪರಿಶೀಲಿಸಬೇಕು. ಈಗಾಗಲೇ ಕಟ್ಟಡದ ಒಳಭಾಗದಲ್ಲಿ ಗಾರೆ ಚಕ್ಕೆ ಉದುರುತ್ತಿದ್ದು, ಅಪಾಯ ಸಂಭವಿಸುವ ಮುನ್ನ ಎಚ್ಚೆತ್ತುಕೊಳ್ಳಬೇಕು. ವಿದ್ಯಾರ್ಥಿನಿಯರನ್ನು ಕೂಡಲೇ ಬಿಸಿಎಂ ಹಾಸ್ಟೆಲ್‌ಗೆ ಸ್ಥಳಾಂತರಿಸಬೇಕು. **–ವಿದ್ಯಾರ್ಥಿನಿಯರ ಪೋಷಕರ ಆಗ್ರಹ**

ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜು ಆವರಣದಲ್ಲಿರುವ ನರ್ಸಿಂಗ್ ವಿದ್ಯಾರ್ಥಿನಿಯರ ವಸತಿನಿಲಯದ ಕಟ್ಟಡದ ಮೇಲೆ ಗಿಡಗಳು ಬೆಳೆದು ಬೇರೂರಿರುವುದರಿಂದ ಗೋಡೆಗಳು ದುರ್ಬಲಗೊಂಡಿವೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೊಸದಾಗಿ ನಿರ್ಮಿಸಿಕೊಟ್ಟ ಮಾದರಿಯಲ್ಲೇ ನರ್ಸಿಂಗ್ ವಿದ್ಯಾರ್ಥಿನಿಯರ ವಸತಿನಿಲಯ ನೆಲಸಮ ಮಾಡಿ ಹೊಸದಾಗಿ ಕಟ್ಟಬೇಕೆಂದು ನಿರ್ಧರಿಸಲಾಗಿತ್ತಾದರೂ, ಕಳೆದ ಒಂದು ವರ್ಷದಿಂದ ಶಿಥಿಲಾವಸ್ಥೆ ತಲುಪಿರುವ ಕಟ್ಟಡದಲ್ಲಿಯೇ ನರ್ಸಿಂಗ್ ವಿದ್ಯಾರ್ಥಿನಿಯರ ವಾಸ್ತವ್ಯಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಹೆಚ್ಚಿದ ಆತಂಕ: ಮೈಸೂರಲ್ಲಿ ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಗೆ ಹಳೆ ಕಟ್ಟಡಗಳು ಕುಸಿದು ಬೀಳುವ ಆತಂಕ ಹೆಚ್ಚಾಗಿದೆ. ಕಳೆದ ನಾಲ್ಕು ದಿನದ ಹಿಂದೆ ಒಲಂಪಿಯಾ ಚಿತ್ರಮಂದಿರದ ಗೋಡೆ ಕುಸಿದ ಪ್ರಕರಣದಿಂದ ನರ್ಸಿಂಗ್ ವಿದ್ಯಾರ್ಥಿನಿಯರ ಆತಂಕ ಹೆಚ್ಚಾಗಿದೆ. ಕಳೆದ 2–3 ದಿನದಿಂದ ಕಟ್ಟಡದ ಮೇಲ್ಛಾವಣಿಯ ಗಾರೆ ಚಕ್ಕೆ ಉದುರಲಾರಂಭಿಸಿದೆ. ಇದರಿಂದ ರಾತ್ರಿ ವೇಳೆ ಜೀವ ಕೈಯ್ಯಲಿಡಿದು ಸಮಯ ಕಳೆಯುವಂತಾಗಿದೆ.

122 ವಿದ್ಯಾರ್ಥಿನಿಯರ ವಾಸ್ತವ್ಯ: ಶಿಥಿಲಗೊಂಡ ಹಾಸ್ಟೆಲ್‌ನಲ್ಲಿ ಒಟ್ಟು 122 ವಿದ್ಯಾರ್ಥಿನಿಯರು ವಾಸ್ತವ್ಯ ಹೂಡಿದ್ದಾರೆ. ಈ ಕಟ್ಟಡದಲ್ಲಿರುವ 9 ಶೌಚಾಲಯಗಳ ಪೈಕಿ 3 ಶೌಚಾಲಯಗಳು ಮಾತ್ರ ಬಳಕೆಗೆ ಯೋಗ್ಯವಾಗಿದ್ದು, ಇದನ್ನೇ ಅವಲಂಬಿಸುವ ದುಸ್ಥಿತಿ ನಿರ್ಮಾಣವಾಗಿದೆ.

ಕೊಡಗಲ್ಲಿ ಮಳೆ ಆರ್ಭಟ; ಹಲವೆಡೆ ಭಾರೀ ಹಾನಿ

● ವಾಹನ ಸಂಚಾರದಲ್ಲಿ ವ್ಯತ್ಯಯ ● ಆರೆಂಜ್ ಅಲರ್ಟ್ ಘೋಷಣೆ



ಸೋಮವಾರಪೇಟೆ-ಶಾಂತಳ್ಳಿ ರಸ್ತೆಯಲ್ಲಿ ಕುಸಿದ ಮಣ್ಣು ತೆರವುಗೊಳಿಸಲಾಯಿತು.

ಮಡಿಕೇರಿ, ಜು.25–ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿಯೊಂದಿಗೆ ಪುಷ್ಯ ಮಳೆ ಆರ್ಭಟಿಸುತ್ತಿದ್ದು, ಜಿಲ್ಲೆಯ ವಿವಿಧೆಡೆ ಬಾರಿ ಹಾನಿ ಸಂಭವಿಸಿದೆ. ಈ ನಡುವೆ ಮಳೆ ಮುಂದುವರೆಯುವ ಸಾಧ್ಯತೆ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆ ಮುನ್ಸೂಚನೆಯಿಂದ ಜಿಲ್ಲಾದ್ಯಂತ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಗಾಳಿ ಸಹಿತ ಮಳೆಯಿಂದಾಗಿ ಭಾಗಮಂಡಲ–ತಲಕಾವೇರಿ ರಸ್ತೆಗೆ ಮರ ಬಿದ್ದು ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯವಾಗಿತ್ತು. ನಂತರ ಭಾಗಮಂಡಲ ಅರಣ್ಯ ವಲಯ ಸಿಬ್ಬಂದಿ ಮರ ತೆರವುಗೊಳಿಸಿದರು.

ಕಳೆದ 24 ಗಂಟೆ ಅವಧಿಯಲ್ಲಿ ಭಾರಿ ಗಾಳಿಯಿಂದ ವಿವಿಧೆಡೆ ಒಟ್ಟು 80 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, 1 ಟ್ರಾನ್ಸ್‌ಫಾರ್ಮರ್ ಹಾನಿಗೀಡಾಗಿದೆ. ಇದರಿಂದ ಸೆಸ್ಕ್‌ಗೆ 8.38 ಲಕ್ಷ ರೂ. ನಷ್ಟ ಸಂಭವಿಸಿದೆ. 2 ಜಾನುವಾರುಗಳು ಮೃತಪಟ್ಟಿದ್ದು, ಬಿದ್ದ 4 ಮರಗಳನ್ನು ತೆರವು ಮಾಡಲಾಗಿದೆ. 2 ಮನೆಗಳಿಗೆ ಭಾಗಶಃ ಹಾಗೂ 6 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ ಎಂದು ಜಿಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ.

ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ಸೋಮವಾರಪೇಟೆ–ಶಾಂತಳ್ಳಿ ರಸ್ತೆಯಲ್ಲಿ ಭೂ ಕುಸಿದು ಸಂಪರ್ಕ ಕಡಿತವಾಗಿತ್ತು. ಶಾಂತಳ್ಳಿ ರಸ್ತೆಯ ಕಲ್ಲಂದೂರು ಜೇಡಿಗುಂಡಿಯಲ್ಲಿ ಮರಗಳ ಸಹಿತ ಭೂ ಕುಸಿತವಾದ ಪರಿಣಾಮ 2 ಗಂಟೆಗೂ ಅಧಿಕ ಕಾಲ ವಾಹನಗಳು ರಸ್ತೆಯಲ್ಲಿ ಸಾಲುಗಟ್ಟಿ ನಿಂತಿದ್ದವು. ಸ್ಥಳೀಯ ಪಂಚಾಯಿತಿ, ಟಾಸ್ಕ್‌ಫೋರ್ಸ್, ಅರಣ್ಯ ಇಲಾಖೆ ಸಿಬ್ಬಂದಿ ಜೆಸಿಬಿ ಮೂಲಕ ರಸ್ತೆಗೆ ಕುಸಿದಿದ್ದ ಮಣ್ಣು, ಮರಗಳನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿದರು.

ಇಂದು ಶಾಲಾ–ಕಾಲೇಜಿಗೆ ರಜೆ

ಕೊಡಗಿನಲ್ಲಿ ಬಿರುಸಿನ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರ, ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಜು.26ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಹಾರಂಗಿ ಜಲಾಶಯ: ಹಾರಂಗಿ ಜಲಾನಯನ ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಮಟ್ಟದಲ್ಲೂ ಏರಿಕೆಯಾಗಿದೆ.

2859 ಅಡಿಗಳಷ್ಟು ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಪ್ರಸ್ತುತ 2856.77 ಅಡಿ ನೀರು ಸಂಗ್ರಹವಿದೆ. ಗುರುವಾರ ಜಲಾಶಯಕ್ಕೆ 15,640 ಕ್ಯುಸೆಕ್ ಒಳ ಹರಿವು ಬರುತ್ತಿದ್ದು, 12,000 ಕ್ಯುಸೆಕ್ ಹೊರ ಬಿಡಲಾಗುತ್ತಿದೆ.

ಮಳೆ ವಿವರ: ಕಳೆದ 24 ಗಂಟೆ ಅವಧಿಯಲ್ಲಿ ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ಗ್ರಾಮದಲ್ಲಿ ದಾಖಲೆಯ 218 ಮಿ.ಮೀ. ಮಳೆಯಾಗಿದ್ದು, ಕೊಡ್ಲಿಪೇಟೆ ವ್ಯಾಪ್ತಿಯಲ್ಲಿ 105, ಪೊನ್ನಂಪೇಟೆ ತಾಲೂಕಿನ ಹುದಿಕೇರಿ ವ್ಯಾಪ್ತಿಯಲ್ಲಿ 123.7, ಶ್ರೀಮಂಗಲ 95, ಮಡಿಕೇರಿ ತಾಲೂಕಿನ ಭಾಗಮಂಡಲದಲ್ಲಿ 106 ಮಿ.ಮೀ ಮಳೆಯಾಗಿದೆ.

ಪೂಚೆಕಲ್‌ನಲ್ಲಿ ರಸ್ತೆಬದಿ ಬರೆ ಕುಸಿತ



ಪೂಚೆಕಲ್‌ನಲ್ಲಿ ಬರೆ ಕುಸಿದ ರಸ್ತೆಬದಿಗೆ ಟಾರ್ಪಲ್ ಹೊದಿಸಿರುವುದು.

ಗೋಣಿಕೊಪ್ಪ, ಜು.25–ಗಾಳಿ ಮಳೆ ಆರ್ಭಟಕ್ಕೆ ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೂಚೆಕಲ್‌ನಲ್ಲಿ ರಸ್ತೆಬದಿ ಬರೆ ಕುಸಿದಿದೆ.

ಎಡಬಿಡದೆ ಸುರಿಯುತ್ತಿರುವ ಮಳೆಯಿಂದ ಶ್ರೀಮಂಗಲದಿಂದ ಕುಟ್ಟಕ್ಕೆ ತೆರಳುವ ಮಾರ್ಗಮಧ್ಯೆ ಪೂಚೆಕಲ್‌ನ ರಸ್ತೆಬದಿ ಬರೆ ಕುಸಿದಿದ್ದು, ಈ ಸ್ಥಳದ ತಳಭಾಗದಲ್ಲಿ ಲಕ್ಷ್ಮಣತೀರ್ಥ ನದಿ ಮೈದುಂಬಿ ಹರಿಯುತ್ತಿದೆ. ಅಲ್ಲದೆ, ಸುಮಾರು 60 ರಿಂದ 80 ಅಡಿಗಳಷ್ಟು ದೂರದವರೆಗೆ ರಸ್ತೆ ಬಿರುಕು ಬಿಟ್ಟು ಆತಂಕ ಸೃಷ್ಟಿಸಿದೆ. ಬರೆ ಕುಸಿತ ಸ್ಥಳದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಟಾರ್ಪಲ್‌ಗಳನ್ನು ಹೊದಿಸಲಾಗಿದ್ದು, ರಸ್ತೆಬದಿಯಲ್ಲಿ ಎಚ್ಚರಿಕೆಯ ಟೇಪ್‌ಗಳನ್ನು ಅಳವಡಿಸಲಾಗಿದೆ.

ಶೀತ ವಾತಾವರಣಕ್ಕೆ ಕೊಳೆಯುತ್ತಿರುವ ಕಾಫಿ



ಮಡಿಕೇರಿ, ಜು.25–ಜಿಲ್ಲಾ ವ್ಯಾಪ್ತಿಯಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದ ಕೊಡಗಿನ ಆರ್ಥಿಕ ಬೆನ್ನೆಲುಬಾಗಿರುವ ಕಾಫಿ ಫಸಲಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಾರಂಭಿಸಿದ್ದು, ಅತಿಯಾದ ಮಳೆಯಿಂದ ಶೀತ ವಾತಾವರಣ ಉಂಟಾಗಿ ತೋಟಗಳಲ್ಲಿ ಕಾಫಿ ಕಾಯಿಗಳು ಕೊಳೆತು ಉದುರಲಾರಂಭಿಸಿವೆ.

ಪ್ರಸಕ್ತ ಸಾಲಿನ ಫೆಬ್ರವರಿ, ಮಾರ್ಚ್‌ನಲ್ಲಿ ಜಿಲ್ಲೆಯಲ್ಲಿ ಬೆಳೆಗಾರನ ನಿರೀಕ್ಷೆಯ 'ಹೂ ಮಳೆ'ಯಾಗಿಲ್ಲ. ಇದರಿಂದ ಸಾಕಷ್ಟು ತೋಟಗಳಲ್ಲಿ ಅರಳಬೇಕಿದ್ದ ಕಾಫಿ ಹೂಗಳು ಕರಟಿ ಹೋಗಿದ್ದರೆ, ಅಳಿದುಳಿದ ಹೂಗಳು ಮಳೆಯಿಂದ ಅರಳಿ ಬೆಳೆಗಾರನಿಗೆ ಕೊಂಚ ನೆಮ್ಮದಿ ತಂದಿತ್ತು ಆದರೆ, ಇದೀಗ ಗಾಯದ ಮೇಲೆ ಬರೆ ಎಳೆದಂತೆ ಎಡೆ ಬಿಡದೆ ಸುರಿದ ಭಾರೀ ಮಳೆ ಕಾಫಿ ಕಾಯಿಗಳು ಕೊಳೆತು ಉದುರಲು ಕಾರಣವಾಗುವ ಮೂಲಕ ಬೆಳೆಗಾರನನ್ನು ತೀವ್ರ ಆತಂಕಕ್ಕೆ ತಳ್ಳಿದೆ.

ದಕ್ಷಿಣ ಕೊಡಗಿನ ಕಾನೂರು, ಕಿರುಗೂರು, ಹುದಿಕೇರಿ, ಬಿರುನಾಣಿ ತೆರಾಲು, ಬಿ.ಶೆಟ್ಟಿಗೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಕಾಫಿ ಫಸಲು ಮಳೆಯಿಂದ ನೆಲಕಚ್ಚುತ್ತಿದೆ. ಸಂಪಾಜೆ ಹೋಬಳಿ, ಭಾಗಮಂಡಲ, ನಾಪೋಕ್ಲು, ಶಾಂತಳ್ಳಿ, ಹುರಿಕೇರಿ ವಿವಿಧೆಡೆ ಹೆಚ್ಚಿನ ಮಳೆಯಾಗಿದೆ. ಇದರಿಂದ ಕಾಫಿ ಕಾಯಿ ಕಟ್ಟಿ ಬೆಳೆಯುವ ಅತ್ಯಂತ ಸೂಕ್ಷ್ಮವಾದ ಈ ಅವಧಿಯಲ್ಲಿ ಗಿಡಗಳಲ್ಲಿನ ಕಾಫಿ ಕಾಯಿಗಳ ಇಡೀ ಗೊಂಚಲು ಕೊಳೆ ರೋಗಕ್ಕೆ ನಿಧಾನವಾಗಿ ಸಿಲುಕಲಾರಂಭಿಸಿದೆ. ಮತ್ತೆ ಹಲವೆಡೆ ಶೀತ ವಾತಾವರಣದಿಂದ ಕಾಫಿ ಕಾಯಿ ಉದುರುತ್ತಿದ್ದು, ಬೆಳೆಗಾರರನ್ನು ಚಿಂತೆಗೀಡು ಮಾಡಿದೆ.

ಭಾರಿ ಪ್ರಮಾಣದ ಫಸಲು ಕುಸಿತ: ಪ್ರಕೃತಿ ವೈಪರೀತ್ಯಗಳಿಂದ ಮುಂದಿನ ಸಾಲಿನ ಕಾಫಿ ಫಸಲು ತೀವ್ರ ಕುಸಿತಕ್ಕೆ ಒಳಗಾಗುವ ಸಾಧ್ಯತೆ ಗೋಚರಿಸಲಾರಂಭಿಸಿದೆ. ಪ್ರಸಕ್ತ ಸಾಲಿನಲ್ಲಿ ಕಾಫಿಗೆ ಅತ್ಯುತ್ತಮ ಮತ್ತು ದಾಖಲೆಯ ದರ ಲಭ್ಯವಾಗಿದೆ. ಇದೇ ದರ ಮುಂದಿನ ಸಾಲಿನಲ್ಲೂ ಇರಬಹುದೆನ್ನುವ ನಿರೀಕ್ಷೆ ಬೆಳೆಗಾರನದ್ದಾಗಿದೆ. ಆದರೆ, ನಿರೀಕ್ಷೆಯ ಫಸಲು ಕೈಗೆಟುಕದಿದ್ದಲ್ಲಿ ಉತ್ತಮ ಧಾರಣೆ ಇದ್ದರು ಬೆಳೆಗಾರ ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕುವ ಎಲ್ಲಾ ಸಾಧ್ಯತೆಗಳು ಕಂಡು ಬರುತ್ತಿದೆ.

ರಸ್ತೆ ಸರಿಪಡಿಸುವಂತೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ



ವಿರಾಜಪೇಟೆ ಕೆದಮುಳ್ಳೂರು ಗ್ರಾಪಂನ ತೆರ್ಮೆಮೊಟ್ಟೆ ಬಳಿ ರಸ್ತೆ ಸರಿಪಡಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ವಿರಾಜಪೇಟೆ, ಜು.25–ಗ್ರಾಮದ ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ ಸಮೀಪದ ಕೆದಮುಳ್ಳೂರು ಗ್ರಾಮ ಪಂಚಾಯಿತಿಯ ತೆರ್ಮೆಮೊಟ್ಟೆ ಬಳಿ ಗ್ರಾಮಸ್ಥರು ಗುರುವಾರ ಪ್ರತಿಭಟನೆ ನಡೆಸಿದರು.

ಕೆದಮುಳ್ಳೂರು, ತೆರ್ಮೆಮೊಟ್ಟೆ, ಬಾರಿಕಾಡು ಸೇರಿದಂತೆ ಪಾಲಂಗಾಲ ಗ್ರಾಮಸ್ಥರು ಒಂದೆಡೆ ಜಮಾಯಿಸಿ, ರಸ್ತೆ ಕುಸಿದು ಒಂದು ತಿಂಗಳಾದರೂ ಬದಲಿ ರಸ್ತೆ ಸಂಚಾರ ವ್ಯವಸ್ಥೆಯನ್ನು ತಾಲೂಕು ಆಡಳಿತ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶೀಘ್ರದಲ್ಲೇ ಬದಲಿ ರಸ್ತೆ ಸಂಚಾರ ವ್ಯವಸ್ಥೆ ಮಾಡದಿದ್ದರೆ ಗ್ರಾಪಂಗೆ ಮುತ್ತಿಗೆ ಹಾಕಿ ಬೀಗ ಜಡಿದು ಪ್ರತಿಭಟನೆ ಮಾಡುತ್ತೇವೆ. ತಹಸೀಲ್ದಾರ್ ಇಲ್ಲಿಗೆ ಬಂದು ರಸ್ತೆಗೆ ಪ್ಲಾಸ್ಟಿಕ್ ಹೊದಿಕೆ ಹಾಕಿ ಸಂಚಾರ ಬಂದ್ ಮಾಡಿ ಹೋಗಿದ್ದು, ಪ್ರಕೃತಿ ವಿಕೋಪ ಪರಿಹಾರದಡಿ ಅನುದಾನ ಬಳಸಿ ರಸ್ತೆ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಗ್ರಾಪಂ ಉಪಾಧ್ಯಕ್ಷ ಎಂ.ಎ.ಪರಮೇಶ್ವರ್ ಮಾತನಾಡಿ, ಮಳೆಯಿಂದ ಕೆಲ ದಿನಗಳ ಹಿಂದೆ ಕೆದಮುಳ್ಳೂರಿನಿಂದ ಕರಡ ಗ್ರಾಮ ಸಂಪರ್ಕಿಸುವ ಕಾಂಕ್ರೀಟ್ ರಸ್ತೆಯಲ್ಲಿ ಸಂಚಾರ ದುಸ್ತರವಾಗಿತ್ತು. ಇದರಿಂದ ರಸ್ತೆ ಕುಸಿಯುವ ಭೀತಿಯಿಂದ ಅಧಿಕಾರಿಗಳು ರಸ್ತೆಗೆ ಹೊದಿಕೆ ಅಳವಡಿಸಿ ಸಂಚಾರ ನಿರ್ಬಂಧಿಸಿದ್ದರು. ಸಂಚಾರ ನಿರ್ಬಂಧಿಸಿ ತಿಂಗಳಾಗುತ್ತಾ ಬಂದಿದ್ದರೂ ರಸ್ತೆ ದುರಸ್ತಿ ಕೈಗೊಂಡಿಲ್ಲ. ಇದರಿಂದ ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರಿಗೆ ನಿತ್ಯ ಸಮಸ್ಯೆಯಾಗುತ್ತಿದೆ. ಆದರೂ ತಾಲೂಕು ಆಡಳಿತ ಮಾತ್ರ ಇನ್ನೂ ಸಂಚಾರಕ್ಕೆ ಬದಲಿ ರಸ್ತೆ ವ್ಯವಸ್ಥೆಗೊಳಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಪಂ ಮಾಜಿ ಸದಸ್ಯ ಚೋಟು ಬಿದ್ದಪ್ಪ ಮಾತನಾಡಿ, ಸ್ಥಳೀಯರಿಗೆ ಸಮೀಪದಲ್ಲಿ ಹಾದು ಹೋಗುವ ಬದಲಿ ರಸ್ತೆಯನ್ನು ತಾಲೂಕು ಆಡಳಿತ ವ್ಯವಸ್ಥೆ ಮಾಡಿಕೊಡಬೇಕು. ಹೆಗ್ಗಳ ಮಾರ್ಗವಾಗಿ ಅಧಿಕ ಕಿಲೋ ಮೀಟರ್ ಕ್ರಮಿಸಿ ವಿರಾಜಪೇಟೆಗೆ ತೆರಳಲು ಕಷ್ಟವಾಗುತ್ತಿದೆ. ಶೀಘ್ರದಲ್ಲೇ ರಸ್ತೆ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಪಿಡಿಓ ಬಿ.ಮಣಿ, ಪ್ರತಿಭಟನಾಕಾರರ ಮನವೊಲಿಸಿ ಮಾತನಾಡಿ, ಈಗಾಗಲೇ ಗ್ರಾಮಸ್ಥರ ಸಮಸ್ಯೆ ತಿಳಿದಿದೆ. ಸದ್ಯದಲ್ಲೇ ರಸ್ತೆ ಕಾಮಗಾರಿ ಕುರಿತು ತಹಸೀಲ್ದಾರ್‌ಗೆ ಮತ್ತೊಮ್ಮೆ ಮನವಿ ಸಲ್ಲಿಸಲಾಗುವುದು. ಬದಲಿ ರಸ್ತೆ ದುರಸ್ತಿಗೆ ಕನಿಷ್ಠ 7 ಲಕ್ಷ ರೂ. ಅನುದಾನ ಅಗತ್ಯವಿದ್ದು, ಗ್ರಾಮಸ್ಥರ ಬೇಡಿಕೆಯನ್ನು ಪರಿಗಣಿಸಿ ರಸ್ತೆ ಕಾಮಗಾರಿ ನಡೆಸಲಾಗುತ್ತದೆ ಎಂದು ಭರವಸೆ ನೀಡಿದರು.

ಸರ್ಕಾರಿ ನೌಕರನ ಪತ್ತೆಗೆ ಮುಂದುವರೆದ ಶೋಧ



ಕೊಪ್ಪ ಸೇತುವೆ ಬಳಿಯ ಕಾವೇರಿ ನದಿಯಲ್ಲಿ ಅರುಣ್ ಕುಮಾರ್ ಪತ್ತೆಗೆ ಗುರುವಾರವೂ ಶೋಧ ಕಾರ್ಯ ನಡೆಸಲಾಯಿತು.

ಮಡಿಕೇರಿ, ಜು.25–ಕುಶಾಲನಗರದ ಕೊಪ್ಪ ಸೇತುವೆ ಮೇಲಿನಿಂದ ಕಾವೇರಿ ನದಿಗೆ ಹಾರಿ ಮಡಿಕೇರಿ ಉಪವಿಭಾಗಾಧಿಕಾರಿ ಕಚೇರಿ ಸಿಬ್ಬಂದಿ ಅರುಣ್ ಕುಮಾರ್ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಮೇರೆಗೆ ಗುರುವಾರವೂ ನಿರಂತರ ಶೋಧ ಕಾರ್ಯ ನಡೆಸಲಾಯಿತು.

ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ ಸಹಿತ ಒಟ್ಟು 5 ತಂಡ ಕೊಪ್ಪ ಸೇತುವೆಯಿಂದ ಕಣಿವೆ ರಾಮಲಿಂಗೇಶ್ವರ ದೇವಾಲಯ ಮುಂಭಾಗ ಹರಿಯುವ ನದಿ ಉದ್ದಕ್ಕೂ ತೀವ್ರ ಶೋಧ ನಡೆಸಿತು. ಕಾವೇರಿ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿರುವುದು ಮತ್ತು ಹಾರಂಗಿ ಜಲಾಶಯದಿಂದಲೂ ನದಿಗೆ ನೀರು ಹರಿಸುತ್ತಿರುವ ಕಾರಣ ಶೋಧ ಕಾರ್ಯಾಚರಣೆ ರಕ್ಷಣಾ ತಂಡಗಳಿಗೆ ಸವಾಲಾಗಿ ಪರಿಣಮಿಸಿವೆ.

ಎಸ್‌ಪಿ ರಾಮರಾಜನ್ ಭೇಟಿ: ಗುರುವಾರ ಕಣಿವೆಯ ರಾಮಲಿಂಗೇಶ್ವರ ದೇವಾಲಯ ಬಳಿಗೆ ಆಗಮಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶೋಧ ಕಾರ್ಯ ಪರಿಶೀಲಿಸಿದರು. ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ತೂಗು ಸೇತುವೆ ಬಳಿ ನೀರಿನ ಹರಿವಿನ ಕುರಿತು ಮಾಹಿತಿ ಪಡೆದರು. ನದಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿರುವ ಹಿನ್ನೆಲೆಯಲ್ಲಿ ಜಾಗೃತಿ ವಹಿಸಿ ರ‍್ಯಾಫ್ಟಿಂಗ್ ದೋಣಿಗಳಲ್ಲಿ ಶೋಧ ಕಾರ್ಯ ನಡೆಸುವಂತೆ ನಿರ್ದೇಶನ ನೀಡಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್‌ಪಿ ರಾಮರಾಜನ್, ಮಡಿಕೇರಿ ಎಸಿ ಕಚೇರಿ ಸಿಬ್ಬಂದಿ ಅರುಣ್ ಕುಮಾರ್ ಪತ್ತೆಗಾಗಿ ವಿಶೇಷ ತಂಡಗಳನ್ನು ರಚಿಸಲಾಗಿದೆ. ಕುಶಾಲನಗರ ಡಿವೈಎಸ್‌ಪಿ ಗಂಗಾಧರಪ್ಪ ನೇತೃತ್ವದಲ್ಲಿ 14 ಪೊಲೀಸರ ತಂಡ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಒಳಗೊಂಡ 5 ತಂಡಗಳನ್ನು ರಚಿಸಲಾಗಿದೆ ಈ ತಂಡಗಳು ಕುಶಾಲನಗರದಿಂದ ನದಿ ಯುದ್ದಕ್ಕೂ ಅರುಣ್ ಕುಮಾರ್ ಅವರ ಪತ್ತೆಗೆ ಪ್ರಯತ್ನಿಸುತ್ತಿವೆ ಎಂದರು. ಈ ಸಂದರ್ಭ ಕುಶಾಲನಗರ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಆರ್‌ಪಿಐ ಚನ್ನನಾಯಕ, ಕುಶಾಲನಗರ ವೃತ್ತ ನಿರೀಕ್ಷಕ ರಾಜೇಶ್ ಕೊಟ್ಯಾನ್, ಗ್ರಾಮಾಂತರ ಠಾಣಾಧಿಕಾರಿ ಮೋಹನ್ ರಾಜ್ ಹಾಜರಿದ್ದರು.

ಜು.31ಕ್ಕೆ ನಗರದಲ್ಲಿ ಜನಪದ ಸಂಭ್ರಮ

ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮ ಸಿದ್ಧತೆಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಜನಪದ ಸಂಭ್ರಮದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಜು.25–ನಗರದಲ್ಲಿ ಜು.31ರಂದು ಜಿಲ್ಲಾ ಜನಪದ ಸಂಭ್ರಮ ಹಮ್ಮಿಕೊಂಡಿದ್ದು, ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಜನಪದ ಸಂಭ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಜನಪದ ಕಲೆಗಳ ತವರೂರು ಎಂದೇ ಪ್ರಸಿದ್ಧಿ ಪಡೆದಿದೆ. ಜಿಲ್ಲೆಯ ಕಲೆ, ಸಂಸ್ಕೃತಿ ಬಿಂಬಿಸುವಂತಹ ವಿಶಿಷ್ಟ, ವಿಭಿನ್ನ ಕಾರ್ಯಕ್ರಮಗಳಿಗೆ ಒತ್ತು ನೀಡಬೇಕು. ಜಿಲ್ಲೆಯಲ್ಲಿ ಸಾಕಷ್ಟು ಜಾನಪದ ಕಲಾವಿದರಿದ್ದು, ಅದರಲ್ಲೂ ಗ್ರಾಮೀಣ ಮಹಿಳೆಯರಿಗೆ ಕಾರ್ಯಕ್ರಮದಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ಜಿಲ್ಲೆಯ ಕಲಾ ಸಂಸ್ಕೃತಿ, ಇತರೆ ಜಿಲ್ಲೆಗಳಿಗೆ ಪಸರಿಸುವಂತಾಗಬೇಕು. ಈ ಸಂಬಂಧ ರೂಪುರೇಷೆ ಸಿದ್ಧಪಡಿಸಬೇಕು ಎಂದು ತಿಳಿಸಿದರು.

ಕರ್ನಾಟಕ ಜಾನಪದ ಅಕಾಡೆಮಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜನಪದ ಸಂಭ್ರಮ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 9 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದಿಂದ ಜಿಲ್ಲಾಡಳಿತ ಭವನದವರೆಗೆ ಮೆರವಣಿಗೆ ಏರ್ಪಡಿಸಲಾಗಿದೆ. ಬಳಿಕ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಎಲ್ಲಾ ಕಲಾವಿದರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ವೇದಿಕೆ ಕಾರ್ಯಕ್ರಮದಲ್ಲಿ ಎಲ್ಲಾ ಕಲಾಪ್ರದರ್ಶನಗಳು ಅನಾವರಣಗೊಳ್ಳಲು ವ್ಯವಸ್ಥೆ ಮಾಡಬೇಕು. ಜನಪದ ಸಂಭ್ರಮ ಸಂಬಂಧ ಉಪನ್ಯಾಸ ಆಯೋಜಿಸಬೇಕು. ಆಧುನಿಕತೆಯ ಆಡಂಬರಕ್ಕೆ ಸಿಲುಕಿ ನಶಿಸಿ ಹೋಗುತ್ತಿರುವ ಜನಪದ ಕಲೆಗಳಿಗೆ ಜೀವ ತುಂಬುವ ಮಾಹಿತಿ ಉಪನ್ಯಾಸ ನೀಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ನಮ್ರತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಆಕಾಶವಾಣಿ ಕಲಾವಿದ ಉಮೇಶ್, ತಹಸೀಲ್ದಾರ್ ಗಿರಿಜ, ಜಿಲ್ಲಾ ಜಾನಪದ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಹನೂರಲ್ಲಿ ವಿಜೃಂಭಣೆಯ ಕೆಂಪೇಗೌಡರ ಜಯಂತಿ



ಹನೂರಿನಲ್ಲಿ ಕೆಂಪೇಗೌಡರ ಪುತ್ಥಳಿ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಹನೂರು, ಜು.25–ಪಟ್ಟಣದಲ್ಲಿ ವಿಶ್ವಮಾನವ ಒಕ್ಕಲಿಗರ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಕೆಂಪೇಗೌಡರ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನಂತರ ಬೆಳ್ಳಿ ರಥದಲ್ಲಿ ಕೆಂಪೇಗೌಡರ ಪುತ್ಥಳಿಗೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮಾಜಿ ಶಾಸಕ ಆರ್.ನರೇಂದ್ರ ಹಾಗೂ ಸಮಾಜದ ಹಿರಿಯ ಮುಖಂಡರು ಪುಷ್ಪಾರ್ಚನೆ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಕೇರಳದ ಚಂಡಿವಾದ್ಯ, ಡೊಳ್ಳು ಕುಣಿತ ವೀರಗಾಸೆ, ಬೊಂಬೆ ಕುಣಿತ, ದೊಣ್ಣೆ ವರಸೆ, ಹಳ್ಳಿಕಾರ್ ಜೋಡ್ ಎತ್ತುಗಳು ನೋಡುಗರ ಕಣ್ಮನ ಸೆಳೆಯಿತು.

ಶ್ರೀ ಸೋಮೇಶ್ವರನಾಥಸ್ವಾಮೀಜಿ ಮಾತನಾಡಿ, ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಜಯಂತಿಯನ್ನು ದೇಶಾದ್ಯಂತ ಮೂಲೆ ಮೂಲೆಯಲ್ಲಿ ಆಚರಿಸಲಾಗುತ್ತಿದೆ. ಮಹನೀಯರ ಜಯಂತಿ ಆಚರಣೆ ಮಾಡುವ ನಾವು ಅವರ ಬದುಕು ಹೋರಾಟವನ್ನು ಅನುಸರಿಸಬೇಕು. ಹಬ್ಬ, ಜಯಂತಿಗಳ ಆಚರಣೆ ಯಿಂದ ಒಗ್ಗಟ್ಟು ಬೆಳೆಯುತ್ತದೆ. ಬುದ್ಧ, ಬಸವ ಅಂಬೇಡ್ಕರ್, ಕುವೆಂಪು ಅವರು ನಾಡಿಗೆ ಮರೆಯಲಾಗದ ಕೊಡುಗೆ ಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಎಂ.ಆರ್.ಮಂಜುನಾಥ್, ಮಾಜಿ ಶಾಸಕ ಪರಿಮಳಾ ನಾಗಪ್ಪ, ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಗಂಗಾಧರ್, ನಿರ್ದೇಶಕ ಮಂಜೇಗೌಡ, ಜಿಲ್ಲಾಧ್ಯಕ್ಷ ಎಲ್.ನಾಗೇಂದ್ರ, ವಿಶ್ವಮಾನವ ಒಕ್ಕಲಿಗರ ಸಂಘದ ಅಧ್ಯಕ್ಷ ಲಿಂಗರಾಜುಗೌಡ, ಎಂಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಪ್ರವೀಣ್ ಕುಮಾರ್, ಟಿಹೆಚ್‌ಓ ಪ್ರಕಾಶ್, ಇಓ ಉಮೇಶ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ರಾಜೇಗೌಡ, ಹನೂರು ಹಾಗೂ ಕೊಳ್ಳೇಗಾಲ ಒಕ್ಕಲಿಗರ ಸಂಘದ ನಿರ್ದೇಶರು, ಸಮಾಜದ ಮುಖಂಡರು ಹಾಜರಿದ್ದರು.

ಪ್ರೋತ್ಸಾಹಧನ ಮುಂದುವರೆಸಲು ಮನವಿ ಸಲ್ಲಿಕೆ



ಪ.ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮುಂದುವರೆಸುವಂತೆ ಒತ್ತಾಯಿಸಿ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಸಮಿತಿಯಿಂದ ಎಡಿಸಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಜು.25–ಉನ್ನತ ಶ್ರೇಣಿಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಯೋಜನೆ ಮುಂದುವರೆಸುವಂತೆ ಒತ್ತಾಯಿಸಿ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಸಮಿತಿ ವತಿಯಿಂದ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಲಾಯಿತು.

ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಪಿಹೆಚ್‌ಡಿ ಹಾಗೂ ವಿದೇಶದಲ್ಲಿ ವ್ಯಾಸಂಗ ಮಾಡುವವರಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರೋತ್ಸಾಹಧನ ಯೋಜನೆ ಜಾರಿಗೊಳಿಸಲಾಗಿದೆ. ಆದರೆ, ಇತ್ತೀಚೆಗೆ ಸಮಾಜ ಕಲ್ಯಾಣ ಇಲಾಖೆ ಕೆಲ ಬದಲಾವಣೆ ಮಾಡಿದ್ದು, ಸದರಿ ಪ್ರೋತ್ಸಾಹಧನ ಪಡೆಯಲು ತೊಂದರೆಯಾಗುತ್ತಿದೆ. ಆದ್ದರಿಂದ ಹಿಂದಿನ ನಿಯಮದಂತೆ ಪ್ರೋತ್ಸಾಹಧನ ಮುಂದುವರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಎಂ.ಶಿವನಾಗಣ್ಣ, ಪ್ರಧಾನ ಕಾರ್ಯದರ್ಶಿ ಸೋಮಸುಂದರ್ ಮಲ್ಲಯ್ಯನಪುರ, ಸಂಘಟನಾ ಕಾರ್ಯದರ್ಶಿಗಳಾದ ಬಿ.ರವಿ, ಸಿದ್ದರಾಜು, ನಿರ್ದೇಶಕ ಶಿವು ಹಾಜರಿದ್ದರು.

ಬೂತ್ ಮಟ್ಟದಿಂದಲೇ ವಿಜಯಪತಾಕೆ ಹಾರಿಸೋಣ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಪದಾಧಿಕಾರಿಗಳ ಸಭೆಯಲ್ಲಿ ಜನಧ್ವನಿ ವೆಂಕಟೇಶ್



ಚಾಮರಾಜನಗರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಹಿಂದುಳಿದ ವರ್ಗಗಳ ಮೋರ್ಚಾ ಪದಾಧಿಕಾರಿಗಳ ಸಭೆಯಲ್ಲಿ ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ಮಾತನಾಡಿದರು.

ಚಾಮರಾಜನಗರ, ಜು.25–ಪ್ರತಿ ಬೂತ್ ಮಟ್ಟದಲ್ಲೂ ಬಿಜೆಪಿ ವಿಜಯ ಪತಾಕೆ ಹಾರಿಸಲು ಪಕ್ಷದ ಓಬಿಸಿ ಮೋರ್ಚಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಶ್ರಮಿಸಬೇಕು ಎಂದು ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ತಿಳಿಸಿದರು.

ನಗರದ ರಾಮಸಮುದ್ರ ಕುಲುಮೆ ರಸ್ತೆಯ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಹಿಂದುಳಿದ ವರ್ಗಗಳ ಮೋರ್ಚಾ ಚಾಮರಾಜನಗರ ಗ್ರಾಮಾಂತರ ಮತ್ತು ನಗರ ಮಂಡಲ ಪದಾಧಿಕಾರಿಗಳ ಸಭೆ ಮತ್ತು ಮಂಡಲ ಪ್ರವಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಜಾರಿಯಾಗಬೇಕಾದರೆ ನಾವೆಲ್ಲರೂ ಒಗ್ಗೂಡಬೇಕು. 100ಕ್ಕೂ ಹೆಚ್ಚು ಸಮುದಾಯಗಳ ಹಿಂದುಳಿದ ವರ್ಗಗಳು ಸಣ್ಣದಾಗಿ ಕಾಣುತ್ತಿದೆ. ಒಗ್ಗಟ್ಟಿನ ಕೊರತೆಯಿಂದ ನಮಗೆ ಯಾರು ಶಕ್ತಿ ನೀಡುವುದಿಲ್ಲ. ಹಾಗಾಗಿ ಬಲಪ್ರದರ್ಶಿಸಿ ನಾವೆಲ್ಲರೂ ಒಗ್ಗೂಡಬೇಕು ಎಂದರು.

ಬೃಹತ್ ಸಮಾವೇಶ: ಮುಂದಿನ ದಿನಗಳಲ್ಲಿ ಚಾಮರಾಜನಗರದಲ್ಲಿ ಲಕ್ಷ ಜನ ಸೇರಿಸಿ ಓಬಿಸಿ ಮೋರ್ಚಾ ಸಮಾವೇಶ ನಡೆಸಲಾಗುವುದು ಎಂದು ಜನಧ್ವನಿ ವೆಂಕಟೇಶ್ ತಿಳಿಸಿದರು.

ಜಿಲ್ಲಾ ಉಪಾಧ್ಯಕ್ಷ ಮಂಗಲ ಶಿವಕುಮಾರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ವಿಶ್ವ ನಾಯಕರಾಗಿದ್ದಾರೆ. ಹಿಂದುಳಿದ ವರ್ಗಗಳ ನಾಯಕರಾದ ಮೋದಿ ದೇಶವನ್ನು ಮುನ್ನಡೆಸುತ್ತಿದ್ದಾರೆ. ಹಾಗಾಗಿ ಓಬಿಸಿ, ಎಸ್‌ಸಿ, ಎಸ್‌ಟಿ ಸಮುದಾಯದ ಯುವಕರನ್ನು ಪಕ್ಷಕ್ಕೆ ಸೇರಿಸುವ ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕು ಎಂದರು.

ರಾಷ್ಟ್ರೀಯ ಮೋರ್ಚಾ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ ಮಾತನಾಡಿದರು. ಓಬಿಸಿ ಮೋರ್ಚಾ ನಗರ ಮಂಡಲ ಅಧ್ಯಕ್ಷ ಪುನೀತ್ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ಬಾಲರಾಜು, ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವರಾಜ್, ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಸೋಮಣ್ಣ ಉಪ್ಪಾರ್, ಗೋಪಾಲ್ ಕೃಷ್ಣ, ಮಾಜಿ ಅಧ್ಯಕ್ಷ ನಟರಾಜೇಗೌಡ, ಗ್ರಾಮಾಂತರ ಮಂಡಲ ಅಧ್ಯಕ್ಷ ದೇವರಾಜು, ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಮಹೇಶ್, ಕಾರ್ಯಾಲಯ ಕಾರ್ಯದರ್ಶಿ ನಾಗರಾಜು ಭಾಗವಹಿಸಿದ್ದರು.

ಇಂದು ಲೊಕ್ಕನಹಳ್ಳಿಯಲ್ಲಿ ಜನಸ್ಪಂದನಾ ಕಾರ್ಯಕ್ರಮ

ಹನೂರು: ತಾಲೂಕಿನ ಲೊಕ್ಕನಹಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಕಾಲೇಜು ವಿಭಾಗದಲ್ಲಿ ಜು.26ರಂದು ಬೆಳಗ್ಗೆ 10 ಗಂಟೆಗೆ ಹೋಬಳಿ ಮಟ್ಟದ ಜನಸ್ಪಂದನಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಶಾಸಕ ಮಂಜುನಾಥ್ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆ ವಹಿಸಲಿದ್ದು, ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕರಿಸಲಾಗುವುದು ಎಂದು ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಚಾಮರಾಜನಗರ, ಜು.25–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ–ಹೊನ್ನಳ್ಳಿ, ಗೋಪುರ–ಸೋಮವಾರಪೇಟೆ (ಗಾಳಿಪುರ) ಮಾರ್ಗ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜು.27ರಂದು ಬೆಳಗ್ಗೆ 7 ರಿಂದ ಸಂಜೆ 4 ಗಂಟೆವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹರದನಹಳ್ಳಿ ಉಪವಿಭಾಗ ಮಾರ್ಗಗಳ ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂದಿಗೌಡನಹಳ್ಳಿ, ಅಟ್ಟುಗೂಳಿಪುರ, ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಮೂಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಮತ್ತು ಕಿಲಗೆರೆ, ಯನಗುಂಬ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛಲವಾದಿ ನಾರಾಯಣಸ್ವಾಮಿಗೆ ಅಭಿನಂದನೆ...



ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದ ಛಲವಾದಿ ನಾರಾಯಣಸ್ವಾಮಿ ಅವರನ್ನು ಚಾಮರಾಜನಗರ ಜಿಲ್ಲಾ ಬಿಜೆಪಿಯಿಂದ ಬೆಂಗಳೂರಿನ ಶಾಸಕರ ಭವನದಲ್ಲಿ ಅಭಿನಂದಿಸಲಾಯಿತು. ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಮಹದೇವಸ್ವಾಮಿ ಎಂ.ಹೊನ್ನೂರು, ಹನೂರು ಮಂಡಲಾಧ್ಯಕ್ಷ ರಾಜು, ಗ್ರಾಪಂ ಸದಸ್ಯ ಕೇತಹಳ್ಳಿ ಚಿಕ್ಕನಾಗಪ್ಪ, ಕೋಣನಪುರ ಪ್ರಭು ಇದ್ದರು.


ಗಣೇಶ್ ಈಗ ದ್ವಾಪರ ದಾಟುತ ಬಂದ ಕೃಷ್ಣ

ಮುಂಗಾರುಮಳೆ ನಂತರ ಕಾಮಿಡಿ ಬಿಟ್ಟು ರೊಮ್ಯಾಂಟಿಕ್ ಕಾಮಿಡಿ ಪಾತ್ರಗಳನ್ನೇ ಮಾಡುತ್ತಾ ಬಂದ ನಟ ಗೋಲ್ಡನ್‌ಸ್ಟಾರ್ ಗಣೇಶ್, ಇದೀಗ ಅದೇ ಜಾನರ್‌ನ ಮತ್ತೊಂದು ಚಿತ್ರದಲ್ಲಿ ನಟಿಸಿದ್ದಾರೆ. ಅದರ ಹೆಸರು ಕೃಷ್ಣಂ ಪ್ರಣಯಸಖಿ. ಗಣೇಶ್ ಅಭಿನಯದ 41ನೇ ಚಿತ್ರ ಇದಾಗಿದ್ದು, ಆ.15ರಂದು ಬಿಡುಗಡೆಯಾಗಲಿದೆ. ತನ್ನ ವಿಭಿನ್ನ ಶೈಲಿಯ ಹಾಡುಗಳ ಮೂಲಕವೇ ಸುದ್ದಿಯಾಗುತ್ತಿರುವ ಈ ಚಿತ್ರಕ್ಕೆ ದಂಡುಪಾಳ್ಯ ಖ್ಯಾತಿಯ ಶ್ರೀನಿವಾಸರಾಜು ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದ ಮತ್ತೊಂದು ಹಾಡು ಇದೀಗ ಬಿಡುಗಡೆಯಾಗಿದೆ. ಡಾ॥ವಿ.ನಾಗೇಂದ್ರಪ್ರಸಾದ್ ಸಾಹಿತ್ಯ ರಚಿಸಿರುವ, ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ 'ದ್ವಾಪರ ದಾಟುತ ಬಂದ... ಎಂಬ ಹಾಡು, ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಮಿಲಿಯನ್‌ಗಟ್ಟಲೆ ವೀಕ್ಷಣೆಯಾಗಿದೆ. ಇದು ಚಿತ್ರದ ಮೂರನೇ ಹಾಡಾಗಿದ್ದು, ಸಿನಿಮಾದ ಆರು ಹಾಡುಗಳೂ ಒಂದಕ್ಕಿಂತ ಒಂದು ವಿಭಿನ್ನವಾಗಿವೆ. ಆ ಪೈಕಿ ಈಗಾಗಲೇ 'ಮೈಮ್ಯಾರೇಜ್ ಇಸ್ ಫಿಕ್ಸ್' ಹಾಗೂ 'ಚಿನ್ನಮ್ಮ ಚಿನ್ನಮ್ಮ' ಎಂಬ ಎರಡು ಹಾಡು ಬಿಡುಗಡೆಯಾಗಿದ್ದು, ಮಿಲಿಯನ್‌ಗಟ್ಟಲೆ ವೀಕ್ಷಣೆಯಾಗಿವೆ.

ವಿಭಿನ್ನವಾದ ಕೌಟುಂಬಿಕ ಕಥಾಹಂದರ ಹೊಂದಿರುವ ಕೃಷ್ಣಂ ಪ್ರಣಯಸಖಿ ಚಿತ್ರವನ್ನು ತ್ರಿಶೂಲ್ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಪ್ರಶಾಂತ್ ಜಿ. ರುದ್ರಪ್ಪ ಅವರು ಅದ್ಧೂರಿ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದಾರೆ. ಚಿತ್ರಕ್ಕೆ ವಿಯೆಟ್ನಾಂನಂಥ ಸುಂದರ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಕೃಷ್ಣಂ ಪ್ರಣಯ ಸಖಿ ಚಿತ್ರದಲ್ಲಿ ಗಣೇಶ್ ಜೊತೆ ನಾಯಕಿಯಾಗಿ ಮಲಯಾಳಂನ ಮಾಳವಿಕ ನಾಯರ್ ಅವರು ನಟಿಸಿದ್ದಾರೆ.

ಚಿತ್ರದ ಕುರಿತು ಮಾತನಾಡಿರುವ ನಾಯಕ ನಟ ಗಣೇಶ್, ನನ್ನ ಸಿನಿ ಕೆರಿಯರ್‌ನಲ್ಲೇ ನಾನು ಕಂಡಂಥ ಬೆಸ್ಟ್ ನಿರ್ದೇಶಕರಲ್ಲಿ ಇವರೂ ಒಬ್ಬರು, ಸಿನಿಮಾ ಬಗ್ಗೆ ತುಂಬಾ ಫ್ಯಾಷನ್ ಇಟ್ಟುಕೊಂಡಿದ್ದಾರೆ. ಅದ್ಭುತವಾದ ಫ್ಯಾಮಿಲಿ ಡ್ರಾಮಾ ಇದಾಗಿದೆ. ಸ್ವಾತಂತ್ರ್ಯ ದಿನ ಹಾಗೂ ವರಮಹಾಲಕ್ಷ್ಮಿ ಹಬ್ಬದ ವಿಶೇಷವಾಗಿ ನಮ್ಮ ಕೃಷ್ಣಂ ಪ್ರಣಯಸಖಿ ಚಿತ್ರ ತೆರೆಗೆ ಬರುತ್ತಿದೆ ಎಂದು ಹೇಳಿದ್ದಾರೆ.

ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧು ಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ರಘುರಾಮ್, ಮಾನಸಿ ಸುಧೀರ್, ಅಂಬುಜ, ಗಿರಿ ಶಿವಣ್ಣ ಮುಂತಾದವರು ಚಿತ್ರದ ಇತರೆ ತಾರಾಬಳಗದಲ್ಲಿದ್ದಾರೆ.


'ಕೃಷ್ಣಂ ಪ್ರಣಯಸಖಿ' ಚಿತ್ರದಲ್ಲಿ ಗಣೇಶ್, ಮಾಳವಿಕ ನಾಯರ್


ಅಜಿತ್ ಕುಮಾರ್


ಪ್ರಶಾಂತ್ ನೀಲ್


ರಾಕಿಂಗ್‌ಸ್ಟಾರ್ ಯಶ್

ಕೆಜಿಎಫ್-3 ಚಿತ್ರದಲ್ಲಿ ಅಜಿತ್-ಯಶ್

ಕೆಜಿಎಫ್ ನಿರ್ದೇಶಕ ಪ್ರಶಾಂತ್‌ನೀಲ್ ಇದೀಗ ತಮಿಳು ಸ್ಟಾರ್ ನಟ ಅಜಿತ್‌ಗೆ ಆಕ್ಷನ್‌ಕಟ್ ಹೇಳಲು ಸಜ್ಜಾಗಿದ್ದಾರೆ. ಈಗಾಗಲೇ ಅಜಿತ್‌ರನ್ನು ಭೇಟಿಯಾಗಿರುವ ಪ್ರಶಾಂತ್ ನೀಲ್ ಅವರಿಗೆ ಒಂದು ಸುತ್ತಿನ ಕಥೆಯನ್ನೂ ಹೇಳಿದ್ದಾರೆ. ಅವರ ಕಾನ್ಸೆಪ್ಟ್ ಅಜಿತ್‌ಗೂ ಇಷ್ಟವಾಗಿ ಅಭಿನಯಿಸಲು ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಎನ್ನಲಾಗಿದೆ. ಈ ಇಬ್ಬರು ದಿಗ್ಗಜರ ಸಂಗಮದಲ್ಲಿ ಹೊರಬರಲಿರುವ ಸಿನಿಮಾ ಹೇಗಿರಬಹುದು ಎಂದು ಈಗಿನಿಂದಲೇ ಅಭಿಮಾನಿಗಳು ಲೆಕ್ಕಾಚಾರ ಹಾಕುತ್ತಿದ್ದಾರೆ. ಇದರ ಜೊತೆಗೆ ಮುಂದೆ ಸೆಟ್ಟೇರಲಿರುವ ಕೆಜಿಎಫ್-3 ಸಿನಿಮಾದಲ್ಲೂ ಸಹ ಅಜಿತ್ ನಟಿಸಲು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಸಲಾರ್-2 ನಂತರ ಪ್ರಶಾಂತ್‌ನೀಲ್, ಅಜಿತ್ ಜೊತೆ 2 ಚಿತ್ರಗಳನ್ನು ನಿರ್ದೇಶಿಸಲು ರೆಡಿಯಾಗಿದ್ದಾರೆ. ಕಳೆದ ತಿಂಗಳು ವಿದಾಮುಯರ್ಚಿ ಚಿತ್ರದ ಸಮಯದಲ್ಲಿ ಅಜಿತ್ ಮತ್ತು ಪ್ರಶಾಂತ್ ಭೇಟಿಯಾಗಿದ್ದರು. ಈ ಕಾಂಬಿನೇಶನ್ ಚಿತ್ರ 2025ಕ್ಕೆ ಸೆಟ್ಟೇರಿ 2026ರಲ್ಲಿ ಬಿಡುಗಡೆಯಾಗುವ ಸಾಧ್ಯತೆಗಳಿವೆ. ಇದಲ್ಲದೆ ಹೊಂಬಾಳೆ ಫಿಲಂಸ್‌ನ ಮತ್ತೊಂದು ಬಹು ನಿರೀಕ್ಷಿತ ಕೆಜಿಎಫ್-3 ಚಿತ್ರದಲ್ಲಿ ಅಜಿತ್ ಮತ್ತು ರಾಕಿಂಗ್ ಸ್ಟಾರ್ ಯಶ್ ತೆರೆ ಹಂಚಿಕೊಳ್ಳಲಿದ್ದಾರೆ ಎಂದೂ ಹೇಳಲಾಗುತ್ತಿದೆ. ಎಲ್ಲದಕ್ಕೂ ಅಧಿಕೃತ ಘೋಷಣೆ ಆದ ಮೇಲಷ್ಟೇ ಸ್ಪಷ್ಟ ಚಿತ್ರಣ ದೊರಕಲಿದೆ. ಸದ್ಯ ಪ್ರಶಾಂತ್‌ನೀಲ್ ಜೂ. ಎನ್‌ಟಿಆರ್ ಜೊತೆಗಿನ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಅಜಿತ್‌ಕುಮಾರ್ ಕೂಡ ವಿದಾಮುಯರ್ಚಿ ಚಿತ್ರದಲ್ಲಿ ತೊಡಗಿಕೊಂಡಿದ್ದಾರೆ.

'ಓಂ ಶಿವ' ಪ್ರೇಮಕಥೆಯಲ್ಲಿ ಶಿವನ ಜಪ!

ಒಂದು ವಿಭಿನ್ನ ಪ್ರೇಮಕಥೆಯ ಜೊತೆಗೆ, ಆಕ್ಷನ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ ಓಂ ಶಿವ. ಆಲ್ವಿನ್ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಟೈಟಲ್‌ಟ್ರ್ಯಾಕ್ ಇತ್ತೀಚೆಗೆ ಬಿಡುಗಡೆಯಾಯಿತು. ಶಿವನ ಮಹಿಮೆಯನ್ನು ಸಾರುವ ಈ ಹಾಡಿಗೆ ಶ್ರೀರಾಮ ತಪಸ್ವಿ ಹಾಗೂ ಮದನ್ ಸಂಸ್ಕೃತ ಭಾಷೆಯಲ್ಲಿ ಸಾಹಿತ್ಯ ರಚಿಸಿದ್ದಾರೆ. ಭಾರ್ಗವ ಕೃಷ್ಣ ಚಿತ್ರದ ನಾಯಕನಾಗಿ ನಟಿಸಿದ್ದು, ಮಗನ ಚಿತ್ರಕ್ಕೆ ತಂದೆ ಕೃಷ್ಣ ಕೆ.ಎನ್. ಅವರೇ ಬಂಡವಾಳ ಹೂಡಿದ್ದಾರೆ.

ವೇದಿಕೆಯಲ್ಲಿ ನಿರ್ದೇಶಕ ಅಲ್ವಿನ್ ಮಾತನಾಡುತ್ತ, ಈ ಹಿಂದೆ ನಾನು 'ರಾಜ್ ಬಹದ್ದೂರ್' ಚಿತ್ರ ನಿರ್ದೇಶಿಸಿದ್ದೆ. ಓಂ ಶಿವ ಎರಡನೇ ಚಿತ್ರ ನವಿರಾದ ಲವ್‌ಸ್ಟೋರಿಯನ್ನು ಈ ಚಿತ್ರದಲ್ಲಿ ಹೇಳಲು ಟ್ರೈ ಮಾಡಿದ್ದೇವೆ, ಸೀರಿಯಸ್ ಆಗಿ ಲವ್ ಮಾಡುತ್ತಿದ್ದಾಗ ಕಳೆದುಹೋಗಿದ್ದ ನಾಯಕಿ, ಮತ್ತೆ ಬಂದಾಗ ಏನೆಲ್ಲಾ ಆಗುತ್ತದೆ ಎನ್ನುವುದೇ ಚಿತ್ರದ ಒನ್‌ಲೈನ್ ಸ್ಟೋರಿ, ಇದೊಂದು ನಾರ್ಮಲ್ ಲವ್‌ಸ್ಟೋರಿ ಆದ್ರೂ, ವಿಭಿನ್ನವಾದ ನಿರೂಪಣೆಯಿದೆ ಎಂದರು. ನಾಯಕ ಭಾರ್ಗವ ಮಾತನಾಡುತ್ತ, ಓಂ ಶಿವ ಸಾಹಸಮಯ ಪ್ರೇಮಕಥೆಯಾಗಿದ್ದು, ನಾಯಕ ಶಿವನ ಜೀವನದಲ್ಲಿ ನಡೆಯುವ ಘಟನೆಗಳನ್ನು ಈ ಚಿತ್ರ ಹೇಳುತ್ತದೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಬಿಡುಗಡೆಯ ಸಿದ್ಧತೆ ನಡೆಯುತ್ತಿದೆ. ನನ್ನ ಪಾತ್ರದಲ್ಲಿ ತುಂಬಾ ವೇರಿಯೇಶನ್ಸ್ ಇದ್ದು, ಅದಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದೆ. ಮುಂದಿನ ತಿಂಗಳು ಚಿತ್ರವನ್ನು ರಿಲೀಸ್ ಮಾಡುವ ಯೋಜನೆಯಿದೆ. ನಟಿ ಲಕ್ಷ್ಮೀ ಅವರು ನನ್ನ ತಾಯಿಯ ಪಾತ್ರ ಮಾಡಿದ್ದಾರೆ ಎಂದು ಹೇಳಿದರು. ನಾಯಕಿ ವಿರಾಣಿಕಾ ಶೆಟ್ಟಿ ಮಾತನಾಡಿ, ನನ್ನ ವಿಡಿಯೋವೊಂದನ್ನು ನೋಡಿ ಈ ಚಿತ್ರಕ್ಕೆ ಆಯ್ಕೆ ಮಾಡಿಕೊಂಡರು. ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಅಂಜಲಿ. ಹೆಚ್ಚಾಗಿ ಮಳೆಯಲ್ಲೇ ಶೂಟಿಂಗ್ ನಡೆಸಿದ್ದೇವೆ ಎಂದು ಹೇಳಿದರು. ನಿರ್ಮಾಪಕ ಕೆ.ಎನ್.ಕೃಷ್ಣ ಮಾತನಾಡಿ, ನಮ್ಮ ಸಂಸ್ಥೆಯ ಮೊದಲ ಚಿತ್ರವಿದು. ಕಥೆ ಕೇಳಿದಾಗ ತುಂಬಾ ಇಷ್ಟ ಆಯ್ತು. ಮೊದಲು ನಾಯಕನ ಪಾತ್ರಕ್ಕೆ ಬೇರೆ ನಟರಿದ್ದರು. ನಂತರ ನನ್ನ ಮಗನೇ ಹೀರೋ ಆಗಬೇಕಾಯಿತು. ಚಿತ್ರ ನಾವಂದುಕೊಂಡದ್ದಕ್ಕಿಂತ ಅದ್ಭುತವಾಗಿ ಮೂಡಿಬಂದಿದೆ, ಮೇಕಿಂಗ್ ಚಿತ್ರದ ಹೈಲೈಟ್ ಎಂದರು. ಉಳಿದಂತೆ ನಟ ಯಶ್ ಶೆಟ್ಟಿ, ವರ್ಧನ್, ಕಾಕ್ರೋಜ್ ಸುಧೀ ತಂತಮ್ಮ ಪಾತ್ರಗಳ ಕುರಿತು ಮಾತನಾಡಿದರು. ಸಂಗೀತ ನಿರ್ದೇಶಕ ವಿಜಯ್ ಅರಳಿ ಮಾತನಾಡಿ ಚಿತ್ರದಲ್ಲಿ ನಾಲ್ಕು ವಿಭಿನ್ನ ಶೈಲಿಯ ಹಾಡುಗಳಿವೆ ಎಂದು ಹೇಳಿದರು.


'ಓಂ ಶಿವ' ಚಿತ್ರದಲ್ಲಿ ಭಾರ್ಗವ ಕೃಷ್ಣ ವಿರಾಣಿಕಾ ಶೆಟ್ಟಿ

ಭಕ್ತಿ ಪ್ರಧಾನ 'ಸಿಂಹರೂಪಿಣಿ' ಟೀಸರ್



ಬಹಳ ದಿನಗಳ ನಂತರ ಗ್ರಾಮ ದೇವತೆ ಮಾರಮ್ಮ ದೇವಿಯ ಪವಾಡ, ಮಹಿಮೆಗಳನ್ನು ಹೇಳುವ ಸಿಂಹರೂಪಿಣಿ ಎಂಬ ಭಕ್ತಿ ಪ್ರಧಾನ ಚಿತ್ರ ತೆರೆಗೆ ಬರುತ್ತಿದ್ದು, ಸಾಹಿತಿ ಕಿನ್ನಾಳ್‌ರಾಜ್ ಅವರು ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದಾರೆ. ಮೂಲತಃ ವೈದ್ಯರು ಹಾಗೂ ದೇವಿಯ ಭಕ್ತರಾದ ಕೆ.ಎಂ.ನಂಜುಂಡೇಶ್ವರ ಈ ಸಿನಿಮಾಗೆ ಕಥೆ ಬರೆದು ಬಂಡವಾಳ ಹೂಡಿದ್ದಾರೆ. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಕ್ಯಾರೆಕ್ಟರ್ ಟೀಸರ್‌ನ್ನು ಸಂಗೀತ ನಿರ್ದೇಶಕ ರವಿ ಬಸ್ರೂರು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ನಿರ್ದೇಶಕ ಜಡೇಶ್ ಹಂಪಿ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದರು. ಅಂಕಿತಾ ಗೌಡ, ಸಾಗರ್, ಯಶಸ್ವಿನಿ, ಖುಷಿ ಬಸ್ರೂರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ,

ಚಿತ್ರದ ಕುರಿತಂತೆ ಮಾತನಾಡಿದ ಕಿನ್ನಾಳರಾಜ್, ಪುನೀತ್ ಅವರ ಅಂಜನಿ ಪುತ್ರ ಮೂಲಕ ನಾನು ಸಾಹಿತಿಯಾಗಿ ಚಿತ್ರರಂಗಕ್ಕೆ ಬಂದೆ. ಸಿಂಹರೂಪಿಣಿ ನನ್ನ ನಿರ್ದೇಶನದ ಎರಡನೇ ಚಿತ್ರ. ದೇವಿಯನ್ನು ನಂಬಿದ ಕುಟುಂಬಕ್ಕೆ ಎದುರಾದ ಕಷ್ಟಗಳನ್ನು ಹೇಗೆ ದೇವಿ ಪರಿಹರಿಸಿದಳು ಎಂದು ಚಿತ್ರದಲ್ಲಿ ಹೇಳಿದ್ದೇವೆ, 120ರಿಂದ 130 ಜನ ಕಲಾವಿದರು ನಟಿಸಿರುವುದು ಈ ಚಿತ್ರದ ವಿಶೇಷ. ಹಾಡು ಬರೆಯಲು ಹೋಗಿದ್ದ ನನಗೆ ನಿರ್ದೇಶನದ ಜವಾಬ್ದಾರಿ ವಹಿಸಿದರು. ದೇವಿಯ ಅನುಗ್ರಹದಿಂದ ಈವರೆಗೆ ಯಾವುದೇ ಅಡೆತಡೆಗಳಿಲ್ಲದೆ ಚಿತ್ರದ ಕೆಲಸಗಳು ನಡೆದಿವೆ, ಆಕೆಯೇ ಮುಂದೆ ನಿಂತು ಎಲ್ಲಾ ಕೆಲಸಗಳನ್ನು ಮಾಡಿಸುತ್ತಿದ್ದಾಳೆ. ಚಿತ್ರದಲ್ಲಿ 15 ನಿಮಿಷಗಳ ಗ್ರಾಫಿಕ್ಸ್ ಇದೆ. ಯರಪ್ಪನಹಳ್ಳಿ ಎಂಬ ಊರಲ್ಲಿ ಸೆಟ್ ಹಾಕಿ ಚಿತ್ರದ ಶೂಟಿಂಗ್ ಮಾಡಿ ದ್ದೇವೆ. ಇನ್ನು ಪೋಸ್ಟರ್‌ನಲ್ಲಿರುವಂತೆ ಕಥೆಯಲ್ಲಿ ಕೋಣ ಏಕೆ, ಹೇಗೆ ಬರುತ್ತೆ ಎಂಬುದಕ್ಕೆ ತೆರೆಯ ಮೇಲೇ ಉತ್ತರ ಸಿಗುತ್ತೆ ಎಂದು ಹೇಳಿದರು.

ನಂತರ ನಿರ್ಮಾಪಕ ನಂಜುಂಡೇಶ್ವರ ಮಾತನಾಡುತ್ತ, ಪ್ರತಿಯೊಬ್ಬರ ಜೀವನದಲ್ಲೂ ಒಂದೊಂದು ಅನುಭವಗಳಾಗಿರುತ್ತೆ, ಇವತ್ತು ನಾನಿಲ್ಲಿ ನಿಂತಿದ್ದೇನೆ ಅಂದರೆ ಅದಕ್ಕೆ ಕಾರಣವೇ ಮಾರಮ್ಮ. ನಾನೊಬ್ಬ ಡಾಕ್ಟರ್ ಆದರೂ ದೇವಿಯ ಮೇಲೆ ಅಷ್ಟೊಂದು ನಂಬಿಕೆ ಇಟ್ಟಿದ್ದೇನೆಂದರೆ ಅದಕ್ಕೆ ಆಕೆಯೇ ಕಾರಣ. ಚಿತ್ರದಲ್ಲಿ ನಟಿಸಿರುವ ಎಲ್ಲ 130 ಜನ ಕಲಾವಿದರೂ ಬೆನ್ನೆಲುಬಾಗಿದ್ದಾರೆ ಎಂದು ಹೇಳಿದರು, ಉಳಿದಂತೆ ಚಿತ್ರದಲ್ಲಿ ಹಿರಿಯನಟ ಸುಮನ್, ದಿನೇಶ್ ಮಂಗಳೂರು, ವಿಜಯ ಚೆಂಡೂರು, ವರ್ಧನ್, ದಿವ್ಯಾ ಆಲೂರು, ಜ್ಯೋತಿ ಮರೂರು ಮುಂತಾದವರು ನಟಿಸಿದ್ದಾರೆ.

ಸಿನಿಪದಬಂಧ-536



ಉಮ್ಮತ್ತೂರು ಇಂದುಶೇಖರ್
ಮೊ.9880820462

1				2		■	■	■	■	■
	■	■	■		■	3	■	4	5	■
	■	6						■		■
■	■		■		■		■	■		■
7					■	■	8			■
	■		■	■	9	■		■	■	10
	■	11						■	12	
	■		■	■		■		■	■	
	■	■	13	■	14		■	15		
16				■		■	■		■	
	■	■		■	17				■	■

ಹೆಸರು ______
ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ವಿಷ್ಣುವರ್ಧನ್ - ಆರತಿ ಬೆಲೆಬಾಳುವ ವಸ್ತುವಿನಿಂದ ನಿರ್ಮಿಸಿದ ಬ್ರಿಡ್ಜ್ ! 6
4. ಕುಮಾರ್ ಬಂಗಾರಪ್ಪ ಹೊಳೆಯುತ್ತಿದ್ದಾನೆ 2
6. ಕೋಟಿ ನಿರ್ಮಾಪಕನ "ಸ್ವಪ್ನದರಸಿ" 6
7. ಮೂಕಾಂಬಿಕೆ ನೆಲೆಯಲ್ಲಿ ಶಶಿಕುಮಾರ್ ಪ್ರತ್ಯಕ್ಷ! 5
8. ಉಪೇಂದ್ರನ "ದೀಪಿಕಾ ಪಡುಕೋಣೆ" 3
11. ಆಟಿಕೆಗಳು ಪ್ರೀತಿಸುವ ಕಾಲವೂ ಬಂದೋಗಿದೆ 6
12. ಗೀತೆ ಹಾಡಿದ 'ಪಕ್ಷಿ' 2
14. ಗಿರೀಶ್ ಕಾಸರವಳ್ಳಿಯ "ಗೃಹ" 2
15. ಕೊಡಲಿ ಹಿಡಿದ ನಿರ್ದೇಶಕ 3
16. ಸಂಚು ಚಿತ್ರದ ನಾಯಕಿ 4
17. ನಮ್ಮ ಪಕ್ಕದ ರಾಜ್ಯದಲ್ಲಿನ ಪುಣ್ಯಕ್ಷೇತ್ರ ಕಿಚ್ಚನಿಗೂ ಸಂಬಂಧಿಸಿದೆ 4

ಮೇಲಿನಿಂದ ಕೆಳಕ್ಕೆ

1.ಹೆಸರಿನಲ್ಲಿ ಒಳ್ಳೆಯ ಗೆಳೆಯನೊಂದಿರುವ ನಟಿ 3
2.ಶರತ್ ಬಾಬು - ಆರತಿ ಅಭಿನಯಕ್ಕೆ ಯಂಡಮೂರಿ ವೀರೇಂದ್ರನಾಥ್ ಅವರ ಕಥೆಯಿದೆ 5
3.ಕೆ.ಎಂ. ಚೈತನ್ಯ ನಿರ್ದೇಶನದಲ್ಲಿ ಶುಭಾ ಪೂಂಜಾ ಕಾಲ್ಕಿತ್ತಿದ್ದಾಳೆ 3
5 ಶ್ರೀಲಂಕಾದ ಮಾಜಿ ಕ್ರಿಕೇಟಿಗನನ್ನು ಈ ಚಿತ್ರ ನೆನಪಿಸುತ್ತಿದೆ 4
6.ನಾಗರಹಾವು ಚಿತ್ರದ ಹಾಡೊಂದರ ಆರಂಭದಲ್ಲೇ ರಮೇಶ್-ಶೃತಿ ಅಭಿನಯವಿದೆ 6
7.ಕಾಫಿಯ ನಾಡಿನಿಂದ ಹರಿದು ಬಂದ ಜೀವನದಿ 7
8.ಇಂಗ್ಲೀಷಿನಲ್ಲಿ "ನಾ ನಿನ್ನ ಪ್ರೀತಿಸುವೆ" 4
9.ಪಾಕ ಪ್ರವೀಣನಿಗೆ ವಿದರ್ಭ ರಾಜ್ಯದ ರಾಜಕುಮಾರಿ ಜೊತೆಯಾಗಿದ್ದಾಳೆ 6
10.ಶಂಕರನಾಗ್ - ದೀಪಿಕಾಳ ನೂತನ ಬದುಕು 5
13.ಸಿರಿ "ಶ್ರೀಗಂಧ" 3
15.ವಿಷ್ಣುವರ್ಧನ್ ಪತ್ನಿಯಲ್ಲಿ ತೂಕವಿದೆ 3

ಸಿನಿ ಪದಬಂಧ 535ರ ಉತ್ತರ

ಅ	ಜ	ರಾ	ಮ	ರ	■	ಭಾ	■	■	ಕಾ	ಮ
ಳಿ	■	ಮ	■	ಜ	ನ್ಮ	ರ	ಹ	ಸ್ಯ	■	ಹೇ
ಮ	ಣ್ಣ	ರಾ	■	ತ	■	ತಿ	■	■	■	ಶ್ವ
ಯ್ಯ	■	ಜ್ಯ	■	ಗಿ	■	ಸು	ಖ	ಸಂ	ಸಾ	ರ
■	ಮ	ದ	ನಾ	ರಿ	■	ತ	■	ಪ	■	■
■	■	ಲ್ಲಿ	■	■	ವೀ	■	ಮು	ತ್ತು	ರಾ	ಜ
■	ವೀ	ರಾ	ಧಿ	ವೀ	ರ	■	ಗ್ದ	■	■	■
ಕ	■	ಕ್ಷ	■	■	ಮ	■	ಮಾ	■	ಜೀ	■
ರ	■	ಸ	■	ಕಂ	ದ	ಯ್ಯ	ನ	ಗು	ವಾ	ಗ
ಟ	ಗ	ರು	■	■	ಕ	■	ವ	■	■	ಲಾ
ಕ	■	■	ಶಿ	ಕಾ	ರಿ	■	■	ಕ	ರಾ	ಟೆ

ವಿಜೇತರು: ಯಮುನಾ, ಹುಣಸೂರು ರಸ್ತೆ, ಹಿನಕಲ್, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕಂಪಲಾಪುರದಲ್ಲಿ ಮದ್ಯವರ್ಜನ ಶಿಬಿರ



ಮದ್ಯವರ್ಜನ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಕಂಪಲಾಪುರ, ಜು.25– ಗ್ರಾಮದ ಶ್ರೀಕರ ಕಂಠೇಶ್ವರ ದೇವಸ್ಥಾನ ಆವರಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದಲ್ಲಿ ಮದ್ಯ ವರ್ಜನ ಶಿಬಿರ ನಡೆಯಿತು.

ಶಿಬಿರದಲ್ಲಿ ಮದ್ಯವರ್ಜನ ಶಿಬಿರದ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಕೆ.ಬಿ.ಮಂಜುಳಾರಾಜ್, ಗೌರವಾಧ್ಯಕ್ಷರಾಗಿ ಕೆ.ಎನ್.ಗಿರೀಶ್, ಉಪಾಧ್ಯಕ್ಷರಾಗಿ ಕೆ.ಆರ್.ಸಂತೋಷ್, ಕೃಷ್ಣೇಗೌಡ, ನೇತ್ರಾವತಿ, ಗೋಪಾಲ್, ಗೀತಾ, ಕೋಶಾಧಿಕಾರಿಯಾಗಿ ಜ್ಯೋತಿ, ಗೌರವ ಸಲಹೆಗಾರರಾಗಿ ಡಿ.ಪದ್ಮರಾಜ್, ಸ್ವಾಮಿಗೌಡ, ಸಣ್ಣತಮ್ಮೇಗೌಡ, ಗುರುಸಿದ್ದಪ್ಪ, ಪ್ರಕಾಶ್ ಗೌಡ, ಪಿ.ಎಂ.ರಾಜು, ನಾಗರಾಜ್ ಕೆ.ಎಂ, ರಾಜಣ್ಣ, ಶಿವಕುಮಾರ್, ಜಯಣ್ಣ, ಶ್ರೀಕಂಠ ಆಯ್ಕೆಯಾಗಿದ್ದಾರೆ.

ಈ ವೇಳೆ ಉಡುಪಿ ಪ್ರಾದೇಶಿಕ ಕಚೇರಿ ಜನಜಾಗೃತಿ ಯೋಜನಾಧಿಕಾರಿ ಗಣೇಶ್, ತಾಲೂಕು ಯೋಜನಾಧಿಕಾರಿ ರವಿ, ಕೊಡಗು ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಷಣ್ಮುಖರಾವ್, ಮಂಜುಳಾರಾಜ್, ಯ.ಸ್ವಾಮಿಗೌಡ, ಒಕ್ಕೂಟದ ಅಧ್ಯಕ್ಷೆ ರಾಣಿ, ವಲಯ ಮೇಲ್ವಿಚಾರಕಿ ರವಿಕಲಾ ಶೆಟ್ಟಿ ಸೇರಿದಂತೆ ಗ್ರಾಮಸ್ಥರು, ಸೇವಾಪ್ರತಿನಿಧಿಗಳು, ಮಹಿಳಾ ಸಂಘದ ಸದಸ್ಯರು ಹಾಜರಿದ್ದರು.

ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ

ಡಿ.ಬಿ.ಕುಪ್ಪೆ ಗ್ರಾಪಂ ಎದುರು ಆದಿವಾಸಿ ಮಹಿಳೆಯರ ಪ್ರತಿಭಟನೆ



ಆದಿವಾಸಿ ಮಹಿಳೆಯರು ಮಳೆಯಲ್ಲೇ ಛತ್ರಿ ಹಿಡಿದು ಪ್ರತಿಭಟನೆ ಮಾಡಿದರು.

ಹೆಚ್.ಡಿ.ಕೋಟೆ, ಜು.25– ಆದಿವಾಸಿ ಜನರಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಡಿ.ಬಿ.ಕುಪ್ಪೆ ಗ್ರಾಪಂ ಎದುರು ಆದಿವಾಸಿ ಮಹಿಳೆಯರು ಮಳೆಯಲ್ಲೇ ಛತ್ರಿ ಹಿಡಿದು ಪ್ರತಿಭಟನೆ ನಡೆಸಿದರು.

ಆದಿವಾಸಿ ಮಹಿಳೆ ಗಂಗೆ ಮಾತನಾಡಿ, ಕೇರಳ ಗಡಿ ಭಾಗವಾದ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಬಹುತೇಕ ಆದಿವಾಸಿಗಳು ಜೀವನೋಪಾಯಕ್ಕಾಗಿ ಅರಣ್ಯದ ಕಿರುಉತ್ಪನ್ನಗಳ ಸಂಗ್ರಹಣೆ ಹಾಗೂ ಕೃಷಿ ಭೂಮಿ ಇಲ್ಲದಿರುವುದರಿಂದ ಕೇರಳ ಹಾಗೂ ಕೊಡಗಿನ ಎಸ್ಟೇಟ್‌ಗಳಿಗೆ ವಲಸೆ ಹೋಗಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಅನಕ್ಷರತೆ, ಅಪೌಷ್ಟಿಕತೆ, ಬಡತನ ಹಾಗೂ ಕಾನೂನಿನ ಅರಿವಿಲ್ಲದ ಮುಗ್ಧರಾಗಿದ್ದಾರೆ. ವಾಸಿಸಲು ಯೋಗ್ಯವಾದ ಮನೆ, ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ರಸ್ತೆ ಇನ್ನಿತರ ಮೂಲ ಸೌಕರ್ಯಗಳು ಸಿಗದೆ ವಂಚಿತರಾಗಿದ್ದಾರೆ ಎಂದು ಆರೋಪಿಸಿದ ಅವರು ಈ ಕೂಡಲೇ ಹಾಡಿಗಳಿಗೆ ಮೂಲ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತ ಜನಾಧಿಕಾರ ಸುರಕ್ಷಾ ಸಮಿತಿ (ಎಐಜೆಎಎಸ್‌ಸಿ) ಮುಖಂಡ ಟಿ.ಆರ್.ಸುನೀಲ್ ಮಾತನಾಡಿ, ತಾಲೂಕಿನ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ ವಾಸಿಸುವ ಬಹುತೇಕ ಜನರು ಪರಿಶಿಷ್ಟ ಪಂಗಡ ಹಾಗೂ ಅರಣ್ಯ ಆಧಾರಿತ ಮೂಲ ಬುಡಕಟ್ಟು ಜನಾಂಗವರಾಗಿದ್ದಾರೆ. ಸರ್ಕಾರದಿಂದ ಮನೆ ಮಂಜೂರಾದರೂ ಅರಣ್ಯ ಇಲಾಖೆ ಹಕ್ಕು ಪತ್ರದ ನೆಪ ಹೇಳಿ ಮನೆ ಕಟ್ಟಲು ಬಿಡುತ್ತಿಲ್ಲ. ಅಲ್ಲದೇ ಅಡಿಪಾಯ ಹಾಕುವುದರಿಂದ ಛಾವಣಿ ಹಾಕುವವರೆಗೂ ಲಂಚ ಇಲ್ಲದೆ ಒಂದು ಕೆಲಸವೂ ಮುಂದೆ ಹೋಗುವುದಿಲ್ಲ ಎನ್ನುವ ಪರಿಸ್ಥಿತಿ ಇದೆ. ಮನೆ ಕಟ್ಟಲೇಬೇಕಾದ ಅನಿವಾರ್ಯತೆ ಇರುವ ಮುಗ್ಧ ಜನರ ಅಸಹಾಯಕತೆ ಬಳಸಿಕೊಂಡು ಅಧಿಕಾರಿಗಳು, ಜನಪ್ರತಿನಿಧಿಗಳು ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಘೋಷಣೆಯಾಗಿಯೇ ಉಳಿದ ಸ್ವಚ್ಛ ಭಾರತ: ಸ್ವಚ್ಛ ಭಾರತ ಬರೀ ಘೋಷಣೆಯಾಗಿಯೇ ಉಳಿದಿದ್ದು, ಇಂದಿಗೂ ಈ ಭಾಗದ ಮಹಿಳೆಯರು, ಮಕ್ಕಳು, ಜನರು ಬಯಲಿನಲ್ಲೇ ಶೌಚಾಲಯಕ್ಕೆ ಹೋಗುವ ಪರಿಸ್ಥಿತಿ ಇದೆ. ಆದಿವಾಸಿಗಳು ಇರುವ ಕಡೆ ಕೇವಲ ಸೋಲಾರ್ ದೀಪಗಳನ್ನು ಹಾಕಿದ್ದು, ಈಗ ಅವು ಸಹ ಕೆಟ್ಟು ನಿಂತಿವೆ ಎಂದರು.

ಆದಿವಾಸಿ ಮಹಿಳೆ ಪೊನ್ನಮ್ಮ ಮಾತನಾಡಿ, ಅರಣ್ಯ ಇಲಾಖೆಯವರು ನಮಗೆ ಮನೆ ಕಟ್ಟಲು ಬಿಡುವುದಿಲ್ಲ. ರಸ್ತೆ ನಿರ್ಮಿಸಲು ಬಿಡುವುದಿಲ್ಲ. ಆದರೆ ಮದ್ಯದ ಅಂಗಡಿಗೆ ಮಾತ್ರ ಪರ್ಮಿಷನ್ ಕೊಡುತ್ತಾರೆ. ಒಂದೇ ಗ್ರಾಪಂ ವ್ಯಾಪ್ತಿಯಲ್ಲಿ 4 ಮದ್ಯದಂಗಡಿ ಇರುವ ಗ್ರಾಪಂ ಇಡೀ ರಾಜ್ಯದಲ್ಲಿ ಇದೊಂದೆ ಇರಬಹುದೇನೋ ಎಂದ ಅವರು ಆದಿವಾಸಿ ಮಕ್ಕಳಿಗೆ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ, ಪೌಷ್ಟಿಕ ಆಹಾರ ಸಿಗದಿದ್ದರೂ ಅವರ ಜೀವನ ಹಾಳುಗೆಡುವ ಅಂಶಗಳಿಗೆ ಸಿಗುವ ಅವಕಾಶ ಅವರನ್ನು ಮೇಲೆತ್ತುವ ಕೆಲಸಕ್ಕೆ ಅರಣ್ಯ ಅಧಿಕಾರಿಗಳು ನೀಡುತ್ತಿಲ್ಲ ಎಂದು ದೂರಿದರು.

ಪ್ರತಿಭಟನೆಯಲ್ಲಿ ಗೌರಿ, ಪುಟ್ಟಿ, ಕಾಳಿ, ಅಶೋಕ, ಮಣಿ, ಪೊನ್ನಮ್ಮ, ಕಣ್ಣ, ಮೀನಾಕ್ಷಿ, ವಾಣಿ, ಮೂಲೆಯೂರು ಹಾಡಿ, ವಡಕನಮಾಳ, ಮಳ್ಳೂರು, ತಿಮ್ಮನ ಹೊಸಳ್ಳಿ ಜನರು ಭಾಗವಹಿಸಿದ್ದರು.

ನಾಯಕತ್ವ ಬೆಳೆಸುವಲ್ಲಿ ಸೇವಾದಳ ಪಾತ್ರ ಅಪಾರ

ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ ಕುಮಾರ್

ಹುಣಸೂರು, ಜು.25– ವಿದ್ಯಾರ್ಥಿಗಳಲ್ಲಿ ನಾಯಕತ್ವ ಮತ್ತು ಮಾನವೀಯ ಮೌಲ್ಯ ಬೆಳೆಸುವಲ್ಲಿ ಭಾರತ ಸೇವಾದಳದ ಪಾತ್ರ ಅಪಾರ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ ಕುಮಾರ್ ತಿಳಿಸಿದರು.

ನಗರದ ಗುರುಭವನದಲ್ಲಿ ನಡೆದ ತಾಲೂಕಿನ ದೈಹಿಕ ಶಿಕ್ಷಣ ಶಿಕ್ಷಕರಿಗೆ ಒಂದು ದಿನದ ಪುನಶ್ಚೇತನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1950ರಲ್ಲಿ ನಾ.ಸು.ಹರ್ಡಿಕರ್ ಅವರಿಂದ ಸ್ಥಾಪನೆಯಾದ ಭಾರತ ಸೇವಾದಳ ಇಲ್ಲಿವರೆಗೂ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಸೇವಾದಳ ವಿವಿಧ ಸಮಾಜಸೇವಾ ಕಾರ್ಯಕ್ರಮಗಳೊಂದಿಗೆ ರಾಷ್ಟ್ರೀಯ ಭಾವೈಕ್ಯತೆ ಮೂಡಿಸಲು ಪ್ರೌಢಶಾಲಾ ಹಂತದಿಂದ ಕಾಲೇಜು ಶಿಕ್ಷಣದವರೆಗೂ ತನ್ನ ಶಾಖೆಗಳನ್ನು ಹೊಂದಿದೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರಗೀತೆ, ರಾಷ್ಟ್ರಧ್ವಜ ಮತ್ತು ಭಾವೈಕ್ಯತೆಯ ಸಂದೇಶ ತಿಳಿಸಲು ಭಾರತ ಸೇವಾ ದಳ ಒಂದು ಅತ್ಯುತ್ತಮ ಸಾಧನವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ರಾಜ್ಯ ಸಂಪನ್ಮೂಲ ಶಿಕ್ಷಕ ಡಿ.ಆರ್.ಶೇಷಾಚಲ ಮಾತನಾಡಿದರು. ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಲೋಕೇಶ್ ಸಂಪನ್ಮೂಲ ವ್ಯಕ್ತಿ ರಮೇಶ್ ರಾಷ್ಟ್ರಧ್ವಜ ಆರೋಹಣ, ಅವರೋಹಣ ಮಾಡಿದರು. ಶಿಬಿರಾರ್ಥಿಗಳು ಭಾವೈಕ್ಯತೆ ಗೀತೆಗಳು, ಧ್ವಜವಂದನೆ, ಪಥ ಸಂಚಲನ, ಬ್ಯಾಂಡ್ ಸೆಟ್, ಕವಾಯತು, ಸಾಮೂಹಿಕ ನೃತ್ಯ ಮುಂತಾದ ಪ್ರಾತ್ಯಕ್ಷಿತೆ ನೀಡಿದರು. 50 ದೈಹಿಕ ಶಿಕ್ಷಣ ಶಿಕ್ಷಕರು ಶಿಬಿರದಲ್ಲಿ ಪಾಲ್ಗೊಂಡು ಶಿಬಿರ ಯಶಸ್ವಿಗೊಳಿಸಿದರು. ಈ ವೇಳೆ ವಲಯ ಸಂಘಟಕ ಕೆ.ಈರಯ್ಯ, ತ್ರಿನೇಶ್, ಪ್ರಭಾಕರ್, ಶಿಕ್ಷಕರ ಸಂಘದ ನಿರ್ದೇಶಕಿ ಸುಧಾ ಇದ್ದರು.

ದೇವರಾಯಶೆಟ್ಟಿಪುರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ದೇವರಾಯಶೆಟ್ಟಿಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆಂಪಣ್ಣ, ಉಪಾಧ್ಯಕ್ಷೆಯಾಗಿ ಮಂಜುಳಾ ಅವಿರೋಧವಾಗಿ ಆಯ್ಕೆಯಾದರು.

ಮಲ್ಲುಂಡಿ, ಜು.25– ನಂಜನಗೂಡು ತಾಲೂಕಿನ ದೇವರಾಯಶೆಟ್ಟಿಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆಂಪಣ್ಣ, ಉಪಾಧ್ಯಕ್ಷೆಯಾಗಿ ಮಂಜುಳಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆಂಪಣ್ಣ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಹೊಸವೀಡು ಗ್ರಾಮದ ಮಂಜುಳಾ ಸಿದ್ದರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಸಾದ್ ಘೋಷಿಸಿದರು.

ನೂತನ ಅಧ್ಯಕ್ಷ ಕೆಂಪಣ್ಣ ಮಾತನಾಡಿ, ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಸಂಘದ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ರೈತರಿಗೆ ತಲುಪಿಸವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ನಿರ್ದೇಶಕರಾದ ಶಿವನಾಗಪ್ಪ, ಶಿವಪ್ರಸಾದ್, ಜ್ಯೋತಿ, ಹೇಮ, ಮಲ್ಲೇಶ, ಕೀರ್ತಿ, ಮಹದೇವಸ್ವಾಮಿ, ಮಹೇಶ್, ರಮೇಶ್, ನಾಗಮ್ಮ, ಕುಮಾರ, ಬಸವಣ್ಣ, ಗೌರಮ್ಮ, ವೀರಭದ್ರಪ್ಪಸ್ವಾಮಿ, ಮುಖಂಡರಾದ ಪಟೇಲ್ ರಾಜಶೇಖರಮೂರ್ತಿ, ಶಿವರಾಜಪ್ಪ, ಮಹದೇವಪ್ಪ, ವಸಂತ ಕುಮಾರ್, ಮಂಜು ಪಾಟೀಲ್, ಸುರೇಶ್, ಮಂಜುನಾಥ್, ಪರಮೇಶ, ಶಿವರುದ್ರ, ಸಿದ್ದರಾಜು, ಗ್ರಾಪಂ ಉಪಾಧ್ಯಕ್ಷ ಬಿ.ಟಿ.ಕುಮಾರ್, ನಂದೀಶ್ ಸೇರಿದಂತೆ ಇತರರಿದ್ದರು.

ಶಂಖಹಳ್ಳಿಯಲ್ಲಿ ಯಂತ್ರಶ್ರೀ ಭತ್ತ ಬೇಸಾಯದ ತರಬೇತಿ

ಶಂಖಹಳ್ಳಿಯಲ್ಲಿ ಯಂತ್ರಶ್ರೀ ಭತ್ತ ಬೇಸಾಯದ ತರಬೇತಿ ಕಾರ್ಯಕ್ರಮ ನಡೆಯಿತು



ಹೆಚ್.ಡಿ.ಕೋಟೆ, ಜು.25– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಹೆಚ್.ಡಿ.ಕೋಟೆ ವತಿಯಿಂದ ತಾಲೂಕಿನ ಶಂಖಹಳ್ಳಿ ಗ್ರಾಮದಲ್ಲಿ ಯಂತ್ರಶ್ರೀ ಭತ್ತ ಬೇಸಾಯದ ತರಬೇತಿ ಕಾರ್ಯಕ್ರಮ ಆಯೊಜಿಸಲಾಗಿತ್ತು.

ಕಾರ್ಯಕ್ರಮವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಕೇಂದ್ರ ಮಂಡ್ಯ ವಿಭಾಗದ ಯೋಜನಾಧಿಕಾರಿ ಶಶಿಕುಮಾರ್ ಉದ್ಘಾಟಿಸಿ ಮಾತನಾಡಿದ ಅವರು, ಭೂಮಿ ಉಳುಮೆ ಮಾಡಲು ಟ್ರಾಕ್ಟರ್ ಬಳಕೆ ಮತ್ತು ಭತ್ತ ಕಟಾವು ಮಾಡಲು ಕಟಾವು ಯಂತ್ರದ ಬಳಕೆಗೆ ರೈತರು ಹೊಂದಿಕೊಂಡಿದ್ದಾರೆ. ಅದರಂತೆ ನಾಟಿ ಮಾಡಲು ಮತ್ತು ಕಳೆ ನಿಯಂತ್ರಣ ಯಂತ್ರಗಳನ್ನು ಬಳಸಿದರೆ ಸಂಪೂರ್ಣ ಯಾಂತ್ರೀಕೃತ ಭತ್ತ ಬೇಸಾಯ ಮಾಡಬಹುದು ಎಂದರು.

ಭತ್ತ ನಾಟಿ ಯಂತ್ರ ಬಳಕೆಯಿಂದ ಸಮಯಕ್ಕೆ ಸರಿಯಾಗಿ, ಸರಿಯಾದ ಆಳ ಮತ್ತು ಅಂತರದಲ್ಲಿ ನಾಟಿ ಮಾಡಬಹುದು. ನಾಟಿ ಯಂತ್ರಕ್ಕೆ ಟ್ರೈ ಮೂಲಕ ಸಸಿಮಡಿ ಮಾಡುವುದರಿಂದ ಸೂಕ್ತ ಪ್ರಮಾಣದಲ್ಲಿ ಬಿತ್ತನೆ ಬೀಜ ಬಳಕೆಯಾಗುತ್ತದೆ ಎಂದರು.

ಕೃಷಿ ಮೇಲ್ವಿಚಾರಕ ಬಿ.ಜೆ.ರಾಜು ಮಾತನಾಡಿ, ಯಾಂತ್ರೀಕೃತ ಭತ್ತ ಬೇಸಾಯ ಮಾಡುವ ರೈತರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತರಬೇತಿ, ಅಧ್ಯಯನ ಪ್ರವಾಸ, ಅನುಭವವುಳ್ಳ ರೈತರಿಂದ ಮಾಹಿತಿ ಮತ್ತು ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಕೇಂದ್ರದ ಮೂಲಕ ಯಂತ್ರೋಪಕರಣ ಮತ್ತು ಟ್ರೈ ಒದಗಿಸಿಕೊಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಬಂಧಕ ಪ್ರಭು, ಕೃಷಿ ಮೇಲ್ವಿಚಾರಕ ರಾಜು ಬಿ.ಜೆ, ನಾಟಿ ಯಂತ್ರ ಬ್ಯಾಂಕ್ ಕೃಷಿ ಮೇಲ್ವಿಚಾರಕ ನವೀನ್ ಕುಮಾರ್, ವಲಯ ಮೇಲ್ವಿಚಾರಕಿ ವೀಣಾ, ಕೆ.ಬೆಳ್ತೂರು ಗ್ರಾಪಂ ಸದಸ್ಯ ವರದನಾಯಕ, ಊರಿನ ಗುಡಿಗೌಡ ರಾಜಪ್ಪ, ಸೇವಾಪ್ರತಿನಿಧಿ ಭಾಗ್ಯಮ್ಮ, ಮಂಜುನಾಥ್, ಯಂತ್ರಶ್ರೀಯೋಧ ಕುಮಾರ್, ಊರಿನ ರೈತರು ಉಪಸ್ಥಿತರಿದ್ದರು.

ಕೆಬ್ಬೇಪುರ ಶಾಲೆಯಲ್ಲಿ ಸಿಕಲ್ ಸೆಲ್ ತಪಾಸಣೆ ಶಿಬಿರ



ಕೆಬ್ಬೇಪುರ ಆಶ್ರಮ ಶಾಲೆಯಲ್ಲಿ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಶಿಬಿರ ನಡೆಯಿತು.

ಸರಗೂರು, ಜು.25– ತಾಲೂಕಿನ ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಕೆಬ್ಬೇಪುರ ಆಶ್ರಮ ಶಾಲೆಯಲ್ಲಿ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಶಿಬಿರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಸಿಕಲ್ ಸೆಲ್ ಅನಿಮಿಯಾ ಕಾಯಿಲೆಯನ್ನು ಕುಡುಗೋಲು ಅಥವಾ ಕುಡ್ಲು ಕಾಯಿಲೆ ಎಂದು ಕರೆಯುತ್ತಾರೆ. ಈ ರೋಗದಲ್ಲಿ ಕೆಂಪು ರಕ್ತಕಣಗಳು ಕುಡುಗೋಲು ಆಕಾರಕ್ಕೆ ಪರಿವರ್ತನೆಗೊಂಡು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಇದು ಹೆಚ್ಚಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಒಂದು ಅನುವಂಶಿಕ ಕಾಯಿಲೆ ಆದರೂ ಆರೋಗ್ಯವಂತ ಪೋಷಕರಿಗೆ ಸಿಕಲ್‌ಸೆಲ್ ಕಾಯಿಲೆ ಇರುವ ಮಕ್ಕಳು ಹುಟ್ಟಬಹುದು. ಪದೇ ಪದೇ ಜ್ವರ, ತೀವ್ರ ಮೂಳೆ ನೋವು, ತೀವ್ರ ಹೊಟ್ಟೆ ನೋವು, ಆಗಾಗ ಕಾಮಲೆ ರೋಗ, ರಕ್ತ ಹೀನತೆ, ವಾಸಿಯಾಗದ ಹುಣ್ಣುಗಳು, ಲಕ್ವ ಈ ರೋಗದ ಲಕ್ಷಣಗಳು ಎಂದರು.

ಮಕ್ಕಳಲ್ಲಿ ರೋಗದ ಲಕ್ಷಣಗಳು ಕಂಡು ಬಂದಲ್ಲಿ ಅಥವಾ ಯಾರಲ್ಲಾದರೂ ಸಿಕಲ್ ಸೆಲ್ ಕಾಯಿಲೆ ಇದ್ದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಆರೋಗ್ಯ ಸಿಬ್ಬಂದಿಯಿಂದ ರಕ್ತ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬಹುದು ಎಂದ ಅವರು, ಮಕ್ಕಳಿಗೆ ಸಿಕಲ್ ಸೆಲ್ ಕಾಯಿಲೆ ದೃಢಪಟ್ಟಲ್ಲಿ ಕುಟುಂಬದ ಎಲ್ಲಾ ಸದಸ್ಯರು ಮತ್ತು ಸಂಬಂಧಿಕರು ಪರೀಕ್ಷೆಗೆ ಒಳಪಡಬೇಕು. ಅಲ್ಲದೇ ರೋಗವನ್ನು ಬೇಗ ಗುರ್ತಿಸುವುದರಿಂದ ಮಗುವಿನ ಜೀವ ಉಳಿಸಬಹುದು. ಒಂದು ವೇಳೆ ಚಿಕಿತ್ಸೆ ಪಡೆಯದಿದ್ದರೆ ಜೀವಕ್ಕೆ ಅಪಾರ ಎದುರಾಗಬಹುದು ಎಂದು ತಿಳಿಸಿದರು.

ಹೀಗಾಗಿ ರೋಗದ ಲಕ್ಷಣಗಳು ಕಂಡುಬಂದ ಕೂಡಲೇ ಆರಂಭದಲ್ಲೇ ಚಿಕಿತ್ಸೆ ಪಡೆದು ಅದರಿಮದಾಗುವ ಅಪಾಯದಿಂದ ಪಾರಾಗುವಂತೆ ಸಲಹೆ ನೀಡಿದರು.

ಸಿಕಲ್ ಸೆಲ್ ಅನಿಮಿಯಾ ಪರೀಕ್ಷೆಯನ್ನು ಪ್ರಸ್ತುತ ಎಲ್ಲಾ ವಸತಿ ಶಾಲೆಗಳಲ್ಲಿ ನಡೆಸಿದ್ದೇವೆ. ಮುಂದಿನ ದಿನಗಳಲ್ಲಿ ಎಲ್ಲಾ ಪರಿಶಿಷ್ಟ ಪಂಗಡ ಸೇರಿದಂತೆ ಜನರು ಮತ್ತು ಮಕ್ಕಳಿಗೆ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಮಾಡಲಾಗುವುದು. ತಪ್ಪದೇ ಎಲ್ಲರೂ ತಪಾಸಣೆಗೆ ಒಳಗಾಗಿ ಎಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಸಿರಾಜ್ ಅಹಮದ್, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಚಂದ್ರ ಶೇಖರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗರಾಜು, ರವಿರಾಜ್, ಕ್ಷಯರೋಗ ಮೇಲ್ವಿಚಾರಕರಾದ ಉಮೇಶ್, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಅನಿತಾ, ಜಲಜ, ವತ್ಸಲ ಆಶಾ ಕಾರ್ಯಕರ್ತೆ ಯರು ಮತ್ತು ಶಾಲೆ ಶಿಕ್ಷಕರು, ಮಕ್ಕಳು ಇನ್ನಿತರರಿದ್ದರು.

ನೇಮಕ



ತಿ.ನರಸೀಪುರ: ಬಿಜೆಪಿ ಮೈಸೂರು ಜಿಲ್ಲಾ ಗ್ರಾಮಾಂತರ ಅಸಂಘಟಿತ ಪ್ರಕೋಷ್ಠ ಸಂಚಾಲಕರಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಹೆಳವರಹುಂಡಿ ಮಹೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದ್ದಾರೆ.

ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಮಹಾಸಭಾ ಸದಸ್ಯರು



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸದಸ್ಯರು ಸುತ್ತೂರುಶ್ರೀಗಳ ಆಶೀರ್ವಾದ ಪಡೆದರು.

ನಂಜನಗೂಡು, ಜು.25– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಂಜನಗೂಡು ತಾಲೂಕು ಘಟಕದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎಸ್.ಎಂ.ಕೆಂಪಣ್ಣ, ನಿರ್ದೇಶಕರು ಸುತ್ತೂರಿನ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದ ಪಡೆದರು.

ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಮಾತನಾಡಿ, ಸುತ್ತೂರಿನ ಶ್ರೀಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ ಮತ್ತು ಮಹಾಸಭಾ ಗೌರವಾಧ್ಯಕ್ಷ ಮಲ್ಲನಮೂಲೆ ಮಠದ ಶ್ರೀಚನ್ನಬಸವ ಸ್ವಾಮೀಜಿಗಳ ಆಶೀರ್ವಾದದೊಂದಿಗೆ ನಂಜನಗೂಡು ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರಾಗಿ ಸಮಾಜದ ಬಂಧುಗಳು ನನ್ನ ಮೇಲೆ ವಿಶ್ವಾಸ ವಿಟ್ಟು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಜೊತೆಗೆ ಮಹಾಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲಾ ಅಭ್ಯರ್ಥಿಗಳೊಂದಿಗೆ ಮಾತುಕತೆ ನಡೆಸಿ ಕೆಲವರನ್ನು ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಗೊಳಿಸಲು ಶ್ರೀಚನ್ನಬಸವ ಸ್ವಾಮೀಜಿ ಶ್ರಮಿಸಿದ್ದಾರೆ. ಅವರ ಕೃಪಾಶೀರ್ವಾದದಿಂದ ತಾಲೂಕಿನಲ್ಲಿ ಸಮಾಜವನ್ನು ಸಂಘಟಿಸಿ, ಸಮಾಜದ ಬಂಧುಗಳ ಜೊತೆಗೂಡಿ ಮಹಾಸಭಾ ಕಾರ್ಯಕ್ರಮಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯ ನಡೆಸುತ್ತೇನೆ. ಸಮಾಜದ ಕಟ್ಟಕಡೆ ವ್ಯಕ್ತಿಯನ್ನು ಸಂಸ್ಥೆಯ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ಸಮಾಜ ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳುತ್ತೇನೆ ಎಂದರು. ಇದೇ ವೇಳೆ ಅಖಿಲ ಭಾರತ ವೀರಶೈವ ಮಹಾಸಭಾ ನಿರ್ದೇಶಕರು ಮತ್ತು ಮಹಾಸಭಾ ಮುಖಂಡರು ಹಾಜರಿದ್ದರು.

ಕಂಪ್ಯೂಟರ್, ನೋಟ್‌ಬುಕ್, ಲೇಖನ ಸಾಮಗ್ರಿ ಕೊಡುಗೆ



ಅರಸು ಕಲ್ಲಹಳ್ಳಿ ಸರ್ಕಾರಿ ಹಿರಿಯ ಶಾಲೆಗೆ ಕಂಪ್ಯೂಟರ್, ನೋಟ್‌ಬುಕ್, ಲೇಖನ ಸಾಮಾಗ್ರಿ ಕೊಡುಗೆ ನೀಡಲಾಯಿತು.

ಹನಗೋಡು, ಜು.25– ಅರಸು ಕಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಿರಿಯ ವಿದ್ಯಾರ್ಥಿ ಎಂ.ಮಂಜುನಾಥ್ ಕಂಪ್ಯೂಟರ್, ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ಮತ್ತು ಲೇಖನ ಸಾಮಗ್ರಿಗಳನ್ನು ಕೊಡುಗೆ ನೀಡಿದರು.


ಮಂಜುನಾಥ್ ಮಾತನಾಡಿ, ಇಂದು ನಾವು ಎಷ್ಟೇ ವಿದ್ಯಾವಂತರಾಗಿದ್ದರೂ ನಮಗೆ ಬಾಲ್ಯದಲ್ಲಿ ಶಿಕ್ಷಣ ನೀಡಿದ ಶಾಲೆಯನ್ನು ಮರೆಯಬಾರದು. ಇತ್ತೀಚಿನ ದಿನಗಳಲ್ಲಿ ಪುಸ್ತಕದ ವಿದ್ಯೆ ಕಲಿತರೂ, ಕಂಪ್ಯೂಟರ್ ಜ್ಞಾನವಿಲ್ಲದಿದ್ದರೆ ಉಪಯೋಗವಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಎಲ್ಲಾ ಕ್ಷೇತ್ರವು ಡಿಜಿಟಲೀಕರಣಗೊಳ್ಳುತ್ತಿರುವ ಈ ಸಂದರ್ಭ ನಮ್ಮ ಗ್ರಾಮೀಣ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಪ್ರಾಥಮಿಕ ಹಂತದಲ್ಲೇ ಕಂಪ್ಯೂಟರ್‌ಗಳ ಪರಿಚಯ ಮಾಡಿಕೊಡಬೇಕಿದೆ. ಅದರಲ್ಲೂ ನಮ್ಮ ಊರಿನ ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿ ಹೊಂದಬೇಕು. ಸರ್ಕಾರಿ ಶಾಲಾ ಮಕ್ಕಳು ಯಾರಿಗೂ ಕಮ್ಮಿ ಇಲ್ಲದಂತೆ ಸ್ಪರ್ಧಾತ್ಮಕ ಯುಗದಲ್ಲಿ ಬದುಕಲು ತಂತ್ರಜ್ಞಾನದ ಅವಶ್ಯಕತೆ ಅರಿಯಲೆಂದು ವೈಯಕ್ತಿಕವಾಗಿ ಶಾಲೆಗೆ ಕಂಪ್ಯೂಟರ್ ಅನ್ನು ಕೊಡುಗೆ ನೀಡಿದ್ದೇನೆ ಎಂದರು.


ಈ ವೇಳೆ ಮುಖ್ಯಶಿಕ್ಷಕ ಚಂದ್ರಶೇಖರ್, ಗ್ರಾಮಸ್ಥರಾದ ನೇತ್ರಾವತಿ, ಚಂದ್ರು, ದೇವರಾಜು, ಹೆಚ್.ಎನ್.ಮಂಜು, ಹರೀಶ್ ಸೇರಿದಂತೆ ಎಸ್‌ಡಿಎಂಸಿ ಸದಸ್ಯರು ಮತ್ತು ಹಿರಿಯ ವಿದ್ಯಾರ್ಥಿ ಬಳಗದವರು ಹಾಗೂ ಸಹಶಿಕ್ಷಕರು ಇದ್ದರು.

ನಾಳೆ ಸರ್ವ ಸದಸ್ಯರ ಸಭೆ

ಮೈಸೂರು: ಕೆ.ಆರ್.ಪೇಟೆ ತಾಲೂಕು ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸರ್ವ ಸದಸ್ಯರ ಸಭೆ ಜು.27ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಮೈಸೂರಿನ ಲಕ್ಷ್ಮೀಕಾಂತ ನಗರದಲ್ಲಿರುವ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ನಡೆಯಲಿರುವ ಸಭೆಯ ಸಾನಿಧ್ಯವನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಗಳು ವಹಿಸಲಿದ್ದು, ಕೆ.ಅರ್.ಪೇಟೆ ಶಾಸಕ ಹೆಚ್.ಟಿ.ಮಂಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಘದ ಅಧ್ಯಕ್ಷ ಕೆ.ಟಿ.ಚಂದ್ರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆ: ವಿಜೃಂಭಣೆಯಿಂದ ಆಚರಿಸಲು ನಿರ್ಧಾರ





ತಿ.ನರಸೀಪುರದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆ ನಡೆಯಿತು.

ತಿ.ನರಸೀಪುರ, ಜು.25– ತಾಲೂಕು ಕಚೇರಿ ಆವರಣ ಅಥವಾ ಮುಂಭಾಗದ ಮುಖ್ಯ ರಸ್ತೆಯಲ್ಲಿ ಸುಸಜ್ಜಿತ ವೇದಿಕೆ ನಿರ್ಮಿಸಿ ಪ್ರಮುಖ ರಸ್ತೆಗಳಲ್ಲಿ ಶಾಲಾ ಮಕ್ಕಳಿಂದ ಜಾಥಾ ನಡೆಸಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧಾರ ಕೈಗೊಳ್ಳಲಾಯಿತು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಗುರುವಾರ ತಹಸೀಲ್ದಾರ್ ನೇತೃತ್ವದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆ ಹಾಗೂ ಶ್ರೀನಾರಯಣ ಗುರು ಜಯಂತಿ ಪೂರ್ವಭಾವಿ ಸಭೆಯಲ್ಲಿ ಸಿಎಂ, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದ ಹಾಗೂ ವಿಧಾನ ಪರಿಷತ್ ಸದಸ್ಯರನ್ನು ಕಡ್ಡಾಯವಾಗಿ ಆಹ್ವಾನಿಸಬೇಕು. 2 ದಿನಗಳ ಕಾಲ ಸರ್ಕಾರಿ ಕಚೇರಿ, ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ, ಸಾಧಕರಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡು ಸ್ವಾತಂತ್ರೋತ್ಸವವನ್ನು ಸಂಭ್ರಮ ಸಡಗರದಿಂದ ಆಚರಿಸಲು ತೀರ್ಮಾನಿಸಲಾಯಿತು.

ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಮಾತನಾಡಿ, ಆಡಳಿತಾತ್ಮಕ ಲೋಪದೋಷ ಸರಿಪಡಿಸಿಕೊಂಡು ಸಭೆಯಲ್ಲಿ ಗಣ್ಯರು ನೀಡಿರುವ ಸಲಹೆಗಳಂತೆ ಆ.15 ರಂದು 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುವುದು. ಅಲ್ಲದೇ ಅಧಿಕಾರಿಗಳ ಜೊತೆ ಮತ್ತೆರಡು ಸಭೆಗಳನ್ನು ನಡೆಸಿ ಸ್ವಾತಂತ್ರೋತ್ಸವದ ರೂಪುರೇಷೆಗಳನ್ನು ಅಂತಿಮಗೊಳಿಸಲಾಗುವುದು ಎಂದರು.

ಸಭೆ ಆರಂಭದಲ್ಲೇ ಸಭಾ ನಡವಳಿಯನ್ನು ಸರಿಯಾಗಿ ಇಟ್ಟುಕೊಳ್ಳದ ಕಂದಾಯ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದಿಂದ ಮೆರವಣಿಗೆ ಆರಂಭಿಸಬೇಕು. ಶಾಲಾ ಮಕ್ಕಳು ಸಾಗುವ ರಸ್ತೆಯಲ್ಲಿ ಪುರಸಭೆ ಸ್ವಚ್ಛತೆ ಕಾರ್ಯ ನಡೆಸಿ, ಭದ್ರತೆಗೆ ಪೊಲೀಸರನ್ನು ನಿಯೋಜಿಸಬೇಕು. ಸ್ವಾತಂತ್ರ್ಯ ದಿನಾಚರಣೆ ಸಂಭ್ರಮದಲ್ಲಾದರೂ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕೆಂದು ಸಲಹೆ ನೀಡಿದರು.

ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಮಾತನಾಡಿ, ಸಿಎಂ ಸಿದ್ದರಾಮಯ್ಯ ಮತ್ತು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಶಾಸಕರಾಗಿ ತಾಲೂಕನ್ನು ಪ್ರತಿನಿಧಿಸುವುದರಿಂದ ಅವರನ್ನು ಸ್ಥಳೀಯ ಮುಖಂಡರ ನಿಯೋಗದೊಂದಿಗೆ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ಸಂಸದ ಸುನೀಲ್ ಬೋಸ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಕಡ್ಡಾಯವಾಗಿ ಬರುವಂತೆ ಆಮಂತ್ರಣ ಪತ್ರಿಕೆ ನೀಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಈಡಿಗ ಸಂಘದ ಮುಖಂಡರು ಸಭೆ ನಡೆಸಿ, ಶ್ರೀನಾರಾಯಣ ಗುರು ಜಯಂತಿಗೆ ಪ್ರತ್ಯೇಕ ದಿನಾಂಕ ನಿಗದಿಪಡಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ವೇಳೆ ತಾಪಂ ಆಡಳಿತಾಧಿಕಾರಿ ಜಯಂತಿ, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಬಾಬೂಜಿ ಸಂಘದ ಅಧ್ಯಕ್ಷ ಪುಟ್ಟಯ್ಯ, ಮಾಜಿ ಅಧ್ಯಕ್ಷ ಸಿದ್ದರಾಜು, ಕಾರ್ಯದರ್ಶಿ ಸಿ.ಡಿ.ವೆಂಕಟೇಶ್, ಕೆಪಿಸಿಸಿ ಅಲ್ಪಸಂಖ್ಯಾತರ ಸಂಚಾಲಕ ಬಿ.ಮನ್ಸೂರ್ ಆಲಿ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಬಸಪ್ಪ ನಿಧನ



ಮಲ್ಲುಂಡಿ, ಜು.25– ಸಮೀಪದ ಹಲ್ಲರೆ ಗ್ರಾಮದ ನಿವಾಸಿ ಬಸಪ್ಪ(75) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಂದ್ರ ನಾಯಕ



ಹೆಡತಲೆ, ಜು.25– ಗ್ರಾಮದ ಹೂವಿನ ವ್ಯಾಪಾರಿ ಚಂದ್ರ ನಾಯಕ (50) ಬುಧವಾರ ರಾತ್ರಿ ನಿಧನರಾದರು. ಮೃತರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜು



ನಂಜನಗೂಡು, ಜು.25– ನಗರದ ಅಶೋಕಪುರಂ ಬಡಾವಣೆ ನಿವಾಸಿ ರಾಜು(68) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನಗರದ ಬೈಪಾಸ್ ರಸ್ತೆಯಲ್ಲಿರುವ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತುಂಬಿ ತುಳುಕುತ್ತಿರುವ ಕೆಆರ್‌ಎಸ್, ಕಬಿನಿ ಜಲಾಶಯಕ್ಕೆ ಜೀವಕಳೆ

ಜು.29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಣೆ

- ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾಥ್
- ಬಾಗಿನ ಅರ್ಪಣೆಗೆ ಸಿದ್ಧತಾ ಕಾರ್ಯಗಳು ಚುರುಕು
- ಇಂದು ಸಂಜೆ ಮೈಸೂರಿಗೆ ಮುಖ್ಯಮಂತ್ರಿ
- ತಮಿಳುನಾಡಿಗೆ ಹರಿದ ಬೇಡಿಕೆಗೂ ಅಧಿಕ ನೀರು



ಮಂಡ್ಯ/ಹೆಚ್.ಡಿ.ಕೋಟೆ, ಜು.25 (ಬಿಎಲ್‌ಯು)– ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಜಲಾಶಯ ಭರ್ತಿಯಾಗಿದೆ. ಜೊತೆಗೆ ಕೇರಳದ ವೈನಾಡು ಪ್ರದೇಶದಲ್ಲಿ ವರುಣ ಆರ್ಭಟಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯ ಕೂಡ ತುಂಬಿ ತುಳುಕುತ್ತಿದ್ದು, ಜೀವಕಳೆ ಬಂದಿದೆ. ಈ ಹಿನ್ನೆಲೆಯಲ್ಲಿ ಭರ್ತಿಯಾಗಿರುವ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಸಂಪ್ರದಾಯದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 29ರಂದು ಬಾಗಿನ ಅರ್ಪಿಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಥ್ ನೀಡಲಿದ್ದು, ಈ ಮೊದಲು ಜು.27ಕ್ಕೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ, ಈಗ ಜುಲೈ 29ಕ್ಕೆ ಮುಂದೂಡಿಕೆಯಾಗಿದೆ.

ಮೈಸೂರಿನಿಂದ ಕೆಆರ್‌ಎಸ್‌ಗೆ ಹೆಲಿಕಾಪ್ಟರ್‌ನಲ್ಲಿ ಆಗಮಿಸುವ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅಂದು ಬೆಳಗ್ಗೆ 11 ಗಂಟೆಗೆ ಬಾಗಿನ ಅರ್ಪಿಸಲಿದ್ದಾರೆ. ನಂತರ ಹೆಲಿಕಾಪ್ಟರ್‌ನಲ್ಲೇ ಕಬಿನಿ ಜಲಾಶಯಕ್ಕೂ ತೆರಳಿ ಅಲ್ಲಿ ಕೂಡ ಬಾಗಿನ ಅರ್ಪಿಸಲಿದ್ದಾರೆ. ಇದಕ್ಕಾಗಿ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಸಂಜೆಯೇ ಮೈಸೂರಿಗೆ ಆಗಮಿಸಲಿದ್ದು, ಜುಲೈ 29 ರವರೆಗೆ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಈ ಮೂರು ದಿನ ಸ್ಥಳೀಯವಾಗಿ ಹಲವು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಈತನಕ ಭಾರಿ ಮಳೆಯಾಗುತ್ತಿದ್ದು, ಜೀವನದಿ ಕಾವೇರಿ ಉಕ್ಕಿ ಹರಿಯುತ್ತಿದೆ. ಇದರಿಂದ ಕೃಷ್ಣರಾಜ ಸಾಗರ ಜಲಾಶಯ ಪೂರ್ಣ ಭರ್ತಿಯಾಗಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಈ ಗರಿಷ್ಠ ಮಟ್ಟ ತಲುಪಿದೆ. ಈಗ ಕೆಆರ್‌ಎಸ್‌ನಲ್ಲಿ ಲಕ್ಷಾಂತರ ಕ್ಯುಸೆಕ್ ನೀರು ಶೇಖರಣೆಯಾಗಿದೆ. ಜಲಾಶಯಕ್ಕೆ 58,849 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 70,044 ಕ್ಯೂಸೆಕ್ ನೀರನ್ನು ಗುರುವಾರ ರಾತ್ರಿ 8.30ರಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು, ಒಳಹರಿವಿನ ಪ್ರಮಾಣ ಆದರಿಸಿ ಒಂದು ಲಕ್ಷ ಕ್ಯುಸೆಕ್‌ಗೂ ಅಧಿಕ ನೀರನ್ನು ನದಿಗೆ ಬಿಡಲಾಗುವುದು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದ ವೈನಾಡು ಪ್ರದೇಶದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಕಾರಣ ಕಬಿನಿ ಜಲಾಶಯ ಕೂಡ ತುಂಬಿ ತುಳುಕುತ್ತಿದೆ. ಕಬಿನಿ ಗರಿಷ್ಠ ಮಟ್ಟ 2284 ಅಡಿಗಳಾಗಿದ್ದು, ಇಂದಿನ ಮಟ್ಟ 2282 ಅಡಿಗಳಾಗಿದೆ. 19.52 ಟಿಎಂಸಿ ಗರಿಷ್ಠ ಶೇಖರಣೆಯ ಜಲಾಶಯದಲ್ಲಿ 18.37 ಟಿಎಂಸಿ ನೀರು ಈಗ ಶೇಖರಣೆಯಾಗಿದೆ. ಜಲಾಶಯಕ್ಕೆ 15965 ಕ್ಯುಸೆಕ್ ಒಳಹರಿವಿದ್ದು, ಜಲಾಶಯದಿಂದ 16792 ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಈ ನೀರು ಕೂಡ ತಮಿಳುನಾಡಿನ ಮೆಟ್ಟೂರು ಜಲಾಶಯ ತಲುಪುತ್ತಿದೆ.

ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ಪೂರ್ತಿ ಭರ್ತಿಯಾಗಿದ್ದು, ಈಗಾಗಲೇ 33 ಟಿಎಂಸಿಗೂ ಹೆಚ್ಚು ನೀರು ಮೆಟ್ಟೂರು ಜಲಾಶಯ ತಲುಪಿದೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶಿಸಿದ್ದಕ್ಕಿಂತ ಹೆಚ್ಚು ನೀರು ತಮಿಳುನಾಡು ತಲುಪಿದೆ. ಇನ್ನು ಕೂಡ ಅಧಿಕ ನೀರು ಮೆಟ್ಟೂರು ಜಲಾಶಯಕ್ಕೆ ಹರಿದು ಹೋಗುತ್ತಿದೆ. ಇದರಿಂದ ಕರ್ನಾಟಕ ಮತ್ತು ತಮಿಳುನಾಡು ಮಧ್ಯೆ ಸದ್ಯಕ್ಕೆ ಕಾವೇರಿ ನದಿ ವಿವಾದ ತಣ್ಣಗಾಗಿದೆ.



ಮೆಟ್ಟೂರು ಜಲಾಶಯದ ಇಂದಿನ ಮಟ್ಟ 87 ಅಡಿ

ತಮಿಳುನಾಡಿನ ಮೆಟ್ಟೂರು ಜಲಾಶಯದ ಗರಿಷ್ಟ ಮಟ್ಟ 120 ಅಡಿಗಳಾಗಿದ್ದು, ಇಂದಿನ ಮಟ್ಟ 87.72 ಅಡಿಗಳಾಗಿದೆ.

ಜಲಾಶಯದ ಗರಿಷ್ಟ ಶೇಖರಣೆ 93.47 ಟಿಎಂಸಿಗಳಾಗಿದ್ದು, ಇಂದು ಮೆಟ್ಟೂರು ಜಲಾಶಯದಲ್ಲಿ 50.08 ಟಿಎಂಸಿ ನೀರು ಶೇಖರಣೆಯಾಗಿದೆ.

ಮೆಟ್ಟೂರು ಜಲಾಶಯಕ್ಕೆ 34 ಸಾವಿರ ಕ್ಯುಸೆಕ್ ಒಳಹರಿವಿದ್ದು, ಆದರೆ ಜಲಾಶಯ ಇನ್ನು ಭರ್ತಿಯಾಗದ ಕಾರಣ ಕೇವಲ 1 ಸಾವಿರ ಕ್ಯುಸೆಕ್ ನೀರನ್ನು ಮಾತ್ರ ಹೊರ ಬಿಡುತ್ತಿದ್ದು, ಇದು ಕುಡಿಯುವ ನೀರಿಗೆ ಎಂದು ಹೇಳಲಾಗಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಹೆಚ್ಚು ನೀರು ಹರಿದು ಹೋಗುತ್ತಿದೆ. ಈ ಮೂಲಕ ಇನ್ನು ಕೆಲವೇ ದಿನಗಳಲ್ಲಿ ಮೆಟ್ಟೂರು ಜಲಾಶಯದ ಬಾಕಿ 33 ಅಡಿ ಭರ್ತಿಯಾಗಲಿದೆ.

ಕೆಆರ್‌ಎಸ್‌ನಿಂದ 1ರಿಂದ 1.50 ಲಕ್ಷ ಕ್ಯುಸೆಕ್ ನೀರು ಬಿಡಲಾಗುವುದು

ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ಕೆಆರ್‌ಎಸ್ ಜಲಾಶಯಕ್ಕೆ ಅಧಿಕ ಒಳಹರಿವಿದ್ದು, ಜಲಾಶಯದಿಂದ 1 ಲಕ್ಷದಿಂದ 1.50 ಲಕ್ಷ ಕ್ಯುಸೆಕ್ ನೀರು ಬಿಡಲಾಗುವುದು ಎಂದು ಕಾವೇರಿ ನೀರಾವರಿ ನಿಗಮದ ಕೃಷ್ಣರಾಜಸಾಗರ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ. ಜಲಾಶಯಕ್ಕೆ ಒಳಹರಿವು ಹೆಚ್ಚಾದರೆ ಈ ಹೆಚ್ಚುವರಿ ನೀರನ್ನು ನದಿಗೆ ಬಿಡುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆ ಕಾವೇರಿ ನದಿಯ ತಗ್ಗು ಪ್ರದೇಶದ ಹಾಗೂ ನದಿ ಪಾತ್ರದ ಎರಡು ದಂಡೆಯಲ್ಲಿರುವ ಸಾರ್ವಜನಿಕರು ತಮ್ಮ ಆಸ್ತಿ ಪಾಸ್ತಿ ಹಾಗೂ ಜಾನುವಾರು ರಕ್ಷಣೆಗೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ. ಜೊತೆಗೆ ತಗ್ಗು ಪ್ರದೇಶದ ಜನರು ಸುರಕ್ಷಿತ ಸ್ಥಳಗಳಿಗೆ ಹೋಗುವಂತೆಯೂ ತಿಳಿಸಿದ್ದಾರೆ.

ಜಾಗದ ವಿಷಯಕ್ಕಾಗಿ ಮಹಿಳೆ ಮೇಲೆ ಹಲ್ಲೆ

ಮೈಸೂರು, ಜು.25(ಜಿಎ)–ಜಾಗದ ವಿಷಯಕ್ಕೆ ಸಂಬಂಧಿಸಿದಂತೆ ಸಾಲಿಗ್ರಾಮ ತಾಲೂಕು ಮಿರ್ಲೆ ಹೋಬಳಿ ಬಾಚನಹಳ್ಳಿ ಗ್ರಾಮದ ಮಾಜಿ ಚೇರ್ಮನ್ ಕಾಳೇಗೌಡರ ಪುತ್ರರಾದ ಪ್ರಕಾಶ್, ಆತನ ಪತ್ನಿ ಹಾಗೂ ಇನ್ನಿತರರು ತಮ್ಮ ತಾಯಿ ದೇವೀರಮ್ಮ ಅವರ ಮೇಲೆ ತೀವ್ರ ಹಲ್ಲೆ ಮಾಡಿದ್ದಾರೆ ಎಂದು ದೇವೀರಮ್ಮ ಅವರ ಪುತ್ರ ಪ್ರಕಾಶ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.14ರಂದು ತಮ್ಮ ಬ್ಯಾರೆಲ್ ಮನೆಯಲ್ಲಿ ತಂಬಾಕು ಹದ ಮಾಡಲೆಂದು ಬಂದ ಅವರನ್ನು ಈ ಸ್ಥಳ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣವಿದ್ದಾಗ ಏಕೆ ಇಲ್ಲಿ ಕೆಲಸ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದಾಗ ದೊಣ್ಣೆ ಮೊದಲಾದವುಗಳಿಂದ ದಾಳಿ ಮಾಡಿದ್ದಾರೆ. ಕುಟುಂಬದ ಸುನಂದ ಎಂಬುವವರ ತಲೆ ಬುರುಡೆ ಸಹಾ ಸೀಳಿದೆ ತಮ್ಮ ತಾಯಿಯ ಹಲ್ಲುಗಳು ಮುರಿದಿವೆ ಈ ಇಬ್ಬರೂ ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಗ್ರಾಮಸ್ಥರೇ ಸಾಲಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು ಎಂದರು.

ವೈದ್ಯರ ಸಲಹೆ ಮೇರೆಗೆ ಮೈಸೂರು ಜಿಲ್ಲಾಸ್ಪತ್ರೆಗೂ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಈ ಸಂಬಂಧ ಸಾಲಿಗ್ರಾಮ ಠಾಣೆಗೆ ದೂರು ನೀಡಲಾಗಿದೆ. ಹೀಗಿದ್ದರೂ ಎಲ್ಲ ಆರೋಪಿಗಳು ರಾಜಾರೋಷವಾಗಿ ತಿರುಗಾಡಿಕೊಂಡಿದ್ದು, ಕೊಲೆ ಬೆದರಿಕೆ ಹಾಕುತ್ತಿದ್ದಾರೆ. ಸಂಬಂಧಪಟ್ಟ ಹಿರಿಯ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಕುಟುಂಬದ ದೇವೀರಮ್ಮ, ಅವರ ಸೊಸೆ ಸುನಂದ, ಚಿಕ್ಕೇಗೌಡ ಉಪಸ್ಥಿತರಿದ್ದರು.

ಪರಿಶ್ರಮದಿಂದ ಮಾತ್ರ ಸಾಧನೆಯ ಗುರಿ ತಲುಪಲು ಸಾಧ್ಯ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಹೆಗ್ಗಡಹಳ್ಳಿ ಗುರುಮಠದ ನಾಗಭೂಷಣಾರಾಧ್ಯ



ಮೈಸೂರಿನ ಚಾಮುಂಡಿಪುರಂನಲ್ಲಿರುವ ಆರಾಧ್ಯ ಮಹಾಸಭಾ ಸಭಾಂಗಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಮೈಸೂರು, ಜು.25–ಸ್ವಂತ ಪರಿಶ್ರಮ ಇದ್ದಾಗ ಮಾತ್ರ ಸಾಧನೆಯ ಗುರಿ ತಲುಪಬಹುದು ಎಂದು ನಿವೃತ್ತ ಉಪನ್ಯಾಸಕರಾದ ಹೆಗ್ಗಡಹಳ್ಳಿ ಗುರುಮಠದ ನಾಗಭೂಷಣಾರಾಧ್ಯ ತಿಳಿಸಿದರು.

ಮೈಸೂರಿನ ಚಾಮುಂಡಿಪುರಂನಲ್ಲಿರುವ ಆರಾಧ್ಯ ಮಹಾಸಭಾ ಸಭಾಂಗಣದಲ್ಲಿ ಉಮಾ ಮಹೇಶ್ವರ ಹಾಗೂ ಪಂಚಾಚಾರ್ಯರ ದೇವಸ್ಥಾನ ವತಿಯಿಂದ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತಮ ಬಾಂಧವ್ಯ ಜೀವನದಿಂದ ಪ್ರೀತಿ ವಿಶ್ವಾಸ ಬೆಳೆದಾಗ ಕುಟುಂಬದ ಅಭಿವೃದ್ಧಿ ಸಾಧ್ಯ, ಹಣದಿಂದ ಎಲ್ಲವನ್ನೂ ಕೊಂಡುಕೊಳ್ಳಲು ಸಾಧ್ಯವಿಲ್ಲ ಎಂದರು.

ಚಾಮರಾಜನಗರ ಆರಾಧ್ಯ ಟ್ರಸ್ಟ್ ಅಧ್ಯಕ್ಷ ಅಗರ ರಾಮಾರಾಧ್ಯ ಮಾತನಾಡಿ, ಶೈಕ್ಷಣಿಕ ಜೀವನದಲ್ಲಿ ಪರಿಶ್ರಮದ ಕಲಿಕೆ ಇದ್ದರೆ ಮಾತ್ರ ಸಾಧನೆಯ ಗುರಿ ತಲುಪಬಹುದು. ಯಾವುದೇ ಕ್ಷೇತ್ರದಲ್ಲಿ ಸಾಧನೆಯ ಗುರಿ ತಲುಪಬೇಕಾದರೆ ನಮ್ಮಲ್ಲಿ ಆತ್ಮವಿಶ್ವಾಸವಿರಬೇಕು ಎಂದು ತಿಳಿಸಿ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನ ಮತ್ತಷ್ಟು ಉನ್ನತವಾಗಿರಲಿ ಎಂದು ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಆರಾಧ್ಯ ಮಹಾಸಭಾ ಗೌರವಾಧ್ಯಕ್ಷ ವಿಜಯಸ್ವಾಮಿ ಮತ್ತು ಅವರ ಪತ್ನಿ ಗಾಯತ್ರಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು, ಮಂಡ್ಯ ಜಿಲ್ಲೆ ಹೆಚ್. ಮಲ್ಲಿಗೆರೆಯ ಸುಮಿತ್ರಮ್ಮ ರಾಮಾರಾಧ್ಯರ ಮಗಳು ದಿವಂಗತ ಉಷಾ ರಾಣಿ (ಉಪನ್ಯಾಸಕಿ) ಇವರ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಯಿತು.

ಪಿರಿಯಾಪಟ್ಟಣ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬೆಕ್ಕರೆ ಸತೀಶ್ ಆರಾಧ್ಯ, ಪತ್ರಕರ್ತ ಗಿರೀಶ್ ಆರಾಧ್ಯ ಸೇರಿದಂತೆ ಸಮಾಜದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ತಹಶೀಲ್ದಾರ್ ಡಿ.ಎಸ್.ಶಿವಕುಮಾರಸ್ವಾಮಿ, ಆರಾಧ್ಯ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷರಾದ ಎ.ಎನ್.ವಿಶ್ವಾರಾಧ್ಯ, ದೇವಸ್ಥಾನ ಸಮಿತಿ ಅಧ್ಯಕ್ಷ ಸೋಮಶೇಖರಾರಾಧ್ಯ, ಆರಾಧ್ಯ ಮಹಾಸಭಾ ಕಾರ್ಯದರ್ಶಿ ಟಿ.ಎನ್ ಮಹೇಶ್ವರರಾಧ್ಯ, ಸಹ ಕಾರ್ಯದರ್ಶಿ ಚನ್ನವೀರಣ್ಣರಾಧ್ಯ, ಖಜಾಂಚಿ ಶಶಿ ಶೇಖರ್, ನಿರ್ದೇಶಕರಾದ ನಂಜುಂಡರಾಧ್ಯ, ನಾಗರತ್ನಮ್ಮ ಮತ್ತಿತರರು ಉಪಸ್ಥಿತರಿದ್ದರು.

ನಿವೃತ್ತ ಸೈನಿಕರು, ಸಾಧಕರಿಗೆ ಸನ್ಮಾನ



ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘದ ವತಿಯಿಂದ ನಿವೃತ್ತ ಸೈನಿಕರಾದ ವಿ.ಟಿ.ಸಿದ್ದಪ್ಪ ಮಧುಕುಮಾರ್ ಹಾಗೂ ವೈದ್ಯ ಡಾ.ಹೆಚ್.ಪಿ.ರಾಘವೇಂದ್ರ ಅವರನ್ನು ಸನ್ಮಾನಿಸಲಾಯಿತು.


ಮೈಸೂರು, ಜು.25(ಎಂಟಿವೈ)– ಮೈಸೂರಿನ ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘದ ವತಿಯಿಂದ ನಿವೃತ್ತ ಸೈನಿಕರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಮಾಡಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಚಾಲನೆ ನೀಡಿ ಮಾತನಾಡಿ, ಸುವರ್ಣ ರಾಜ್ಯ ಶಿವಾರ್ಚಕರ ಪ್ರಗತಿಪರ ಸಂಘವು ನಿವೃತ್ತ ಯೋಧರನ್ನು ಸನ್ಮಾನಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ರವಾನಿಸುತ್ತಿದೆ. ಯೋಧರನ್ನು ಗೌರವಿಸುವ ಪರಿಪಾಠ ಹೆಚ್ಚಾಗಬೇಕು. ಎಲ್ಲರಲ್ಲೂ ದೇಶಭಕ್ತಿ ಗಟ್ಟಿಗೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ನಿವೃತ್ತ ಯೋಧರಾದ ವಿ.ಟಿ.ಸಿದ್ದಪ್ಪ, ಮಧುಕುಮಾರ್ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಾದ ಡಾ.ಹೆಚ್.ಪಿ.ರಾಘವೇಂದ್ರ, ಪ್ರಭು, ದೇವರಾಜು ಗುರೂಜಿ, ಶ್ರೀಕಂಠಪ್ರಸಾದ್, ನಾಗರಾಜು, ನಂಜುಂಡಪ್ಪ ಪ್ರಭು, ರಾಜಶೇಖರ್, ರವೀಂದ್ರ ಕುಮಾರ್, ಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಕೆ.ಆರ್.ಸಾಗರದ ಹೊಸಹುಂಡಿ ಶ್ರೀ ಕ್ಷೇತ್ರ ಶನಿಮಠದ ಅಧ್ಯಕ್ಷ ಡಾ.ರುದ್ರೇಶ್ ಪ್ರಸಾದ್ ಗುರೂಜಿ, ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಶಿವಾರ್ಚಕ ಮಲ್ಲಣ್ಣ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘದ ಬನ್ನೂರು ನಾಗರಾಜು, ವಿಶ್ವಹಿಂದೂ ಪರಿಷತ್ ಅಧ್ಯಕ್ಷ ಸೋಮಣ್ಣ, ಬಸವ ಬಳಗದ ಗೌರವ ಅಧ್ಯಕ್ಷ ಅಂಬಳೆ ಶಿವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

'ತೇಜಸ್ವಿ ಎಂಬ ವಿಸ್ಮಯ' ಸಾಕ್ಷ್ಯಚಿತ್ರ ಸರಣಿ ಭಾನುವಾರ ಬಿಡುಗಡೆ



ಬೆಂಗಳೂರು, ಜು.25 (ಕೆಎಂಶಿ)– ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಬದುಕು, ಬರಹ ಮತ್ತು ವಿಚಾರಧಾರೆಗಳನ್ನು ದೃಶ್ಯ ಮಾಧ್ಯಮದ ಮೂಲಕ ಅನಾವರಣಗೊಳಿಸಲು ಮಾಧ್ಯಮದ ಅನೇಕ ಸಂಸ್ಥೆ ಮುಂದಾಗಿದೆ.

ಸಾಕ್ಷ್ಯಚಿತ್ರದಲ್ಲಿ 30ಕ್ಕೂ ಹೆಚ್ಚು ಗಣ್ಯರು, ಕುಟುಂಬ ಸದಸ್ಯರು ಮತ್ತು ಅವರ ಆಪ್ತ ಸ್ನೇಹಿತರು, ತೇಜಸ್ವಿ ಅವರೊಂದಿಗಿನ ತಮ್ಮ ನೆನಪು, ಅನುಭವ ಮತ್ತು ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

ಆರು ಕಂತುಗಳನ್ನು ಒಳಗೊಂಡ ಸರಣಿಯ ಪ್ರಾಸ್ತಾವಿಕ ಕಂತು 'ತೇಜಸ್ವಿ ಎಂಬ ವಿಸ್ಮಯ' ಸಾಕ್ಷ್ಯ ಚಿತ್ರದ ಮುನ್ನುಡಿ ಈಗಾಗಲೇ ಬಿಡುಗಡೆಯಾಗಿದೆ. ಇದೀಗ ಚಿತ್ರದ ಸರಣಿಯನ್ನು ಜುಲೈ 28ರಂದು ಬೆಳಗ್ಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಬಿಡುಗಡೆ ಮಾಡಲಿದ್ದಾರೆ.

ಬಹುಮುಖ ವ್ಯಕ್ತಿತ್ವ ಹೊಂದಿದ್ದ ತೇಜಸ್ವಿ ಅವರು, ಕನ್ನಡ ಸಾಹಿತ್ಯ ಲೋಕದಲ್ಲಿ ಸಮಷ್ಟಿ ಜೀವಿಗಳಲ್ಲಿನ ಸಮಾನತೆಯನ್ನು ಪ್ರತಿಪಾದಿಸುವ ಪರಿಸರ ಕೇಂದ್ರಿತ ಕಥನಗಳನ್ನು ಕಟ್ಟಿದ್ದಷ್ಟೇ ಅಲ್ಲದೆ, ಪರಿಸರ ಪ್ರಿಯರಾಗಿ, ಕೃಷಿ, ಸಾಹಿತಿ, ಪಕ್ಷಿ ಹಾಗೂ ಪ್ರಕೃತಿ ತಜ್ಞ, ಛಾಯಾಗ್ರಾಹಕ, ವಿಜ್ಞಾನಿ, ವಿದ್ವಾಂಸರಾಗಿ ಹಲವು ಬದುಕುಗಳನ್ನು ಶೋಧಿಸಿ, ಸಾಧಿಸಿ, ಇತರರಿಗೂ ಅರಿವಾಗಲೆಂದು ಕೃತಿಗಳಲ್ಲಿ ದಾಖಲಿಸಿದ್ದಾರೆ.

ಇದೇ ಸಂದರ್ಭದಲ್ಲಿ ತೇಜಸ್ವಿ ಅವರ ಸಮಗ್ರ ಕೃತಿ ಜಗತ್ತು 14 ಸಂಪುಟಗಳು ಬಿಡುಗಡೆಗೊಳ್ಳಲಿವೆ.

ಜುಲೈ 28 ಮತ್ತು 29ರಂದು ಕಲಾಕ್ಷೇತ್ರದಲ್ಲಿ ತೇಜಸ್ವಿ ಸಾಹಿತ್ಯ, ಸಾಂಸ್ಕೃತಿಕ ಹಬ್ಬ, ರಾಷ್ಟ್ರೀಯ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ.

ಬಡ್ತಿಯಲ್ಲಿ ಅನ್ಯಾಯ; ಪ್ರಾಥಮಿಕ ಶಾಲಾ ಶಿಕ್ಷಕರ ಪ್ರತಿಭಟನೆ



ಬಡ್ತಿಯಲ್ಲಾದ ಅನ್ಯಾಯ ಸರಿಪಡಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ಡಿಡಿಪಿಐ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಜು.25(ಎಂಟಿವೈ)– ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿಯಲ್ಲಾಗಿರುವ ಅನ್ಯಾಯ ಸರಿಪಡಿಸಿ, ವರ್ಗಾವಣೆಯಲ್ಲಿ ನ್ಯಾಯ ಒದಗಿಸುವಂತೆ ಆಗ್ರಹಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರತಿಭಟನೆ ನಡೆಸಿದರು.

ಮೈಸೂರಿನ ಡಿಡಿಪಿಐ ಕಚೇರಿ ಆವರಣದಲ್ಲಿ ಗುರುವಾರ ಅಖಿಲ ಕರ್ನಾಟಕ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹಿತರಕ್ಷಣಾ ವೇದಿಕೆ ನೇತೃತ್ವದಲ್ಲಿ ವಿವಿಧ ಪ್ರಾಥಮಿಕ ಶಾಲೆಗಳ ಶಿಕ್ಷಕರು ಪ್ರತಿಭಟನೆ ಮಾಡಿ, ನ್ಯಾಯ ಒದಗಿಸುವಂತೆ ಮನವಿ ಮಾಡಿದರು.

2016ಕ್ಕಿಂತ ಮೊದಲು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಗೊಂಡು 25–30 ವರ್ಷಗಳಿಂದ 1–8ನೇ ತರಗತಿಗೆ ಬೋಧಿಸುತ್ತಿರುವ ಶಿಕ್ಷಕರಿಗೆ ಹಿಂಬಡ್ತಿ ನೀಡುವ ಮೂಲಕ ಅನ್ಯಾಯ ಎಸಗಲಾಗಿದೆ. 2017ರಲ್ಲಿ ರಚಿತವಾದ ನೂತನ ಸಿಎಸ್‌ಆರ್ ನಿಯಮದಲ್ಲಿ 1–5ನೇ ತರಗತಿಗೆ ಸೀಮಿತಗೊಳಿಸಿ ಹಿಂಬಡ್ತಿ ನೀಡಿರುವುದು ಸಾಮಾಜಿಕ ನ್ಯಾಯಕ್ಕೆ ವ್ಯತಿರಿಕ್ತವಾಗಿದೆ. ಇದರಿಂದ ಶಿಕ್ಷಕರಿಗೆ ಕಾಲಮಿತಿ ಬಡ್ತಿ, ಪ್ರೌಢಶಾಲಾ ಶಿಕ್ಷಕರ ಬಡ್ತಿ, ಮುಖ್ಯ ಶಿಕ್ಷಕರ ಬಡ್ತಿಗಳಲ್ಲಿ ಅನ್ಯಾಯವಾಗುತ್ತಿದ್ದು, ವರ್ಗಾವಣೆಯಲ್ಲೂ ತೊಂದರೆಯಾಗುತ್ತಿದೆ ಎಂದು ಆರೋಪಿಸಿದರು.

25–30 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ವರ್ಗಾವಣೆಗೆ ಕಾಯುತ್ತಿದ್ದಾರೆ. ಆದರೆ ಕೌನ್ಸೆಲಿಂಗ್‌ಗೆ ಬರುವ ಶಿಕ್ಷಕರಿಗೆ ವರ್ಗಾವಣೆ ಸಿಗುತ್ತಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕರು 6, 7, 8ನೇ ತರಗತಿಗಳಿಗೆ ಪಾಠ ಮಾಡಬೇಕು. ಆದರೆ, ಜಿಪಿಟಿ ಹುದ್ದೆಗಳಿಗೆ ಸ್ಥಳ ಆಯ್ಕೆ ಮಾಡಿಕೊಳ್ಳುವಂತಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕರು ಅದೇ ಹುದ್ದೆಯ ಸ್ಥಳಕ್ಕೆ ಮಾತ್ರ ಆಯ್ಕೆಗೆ ಅವಕಾಶವಿದೆ. ಬೇರೆ ಶಾಲೆಗೆ ಸ್ಥಳ ಆಯ್ಕೆ ಮಾಡಿಕೊಂಡರೆ ಅವರ ಮೊದಲಿನ ಹುದ್ದೆ ಬದಲಾಗುತ್ತದೆ. ಇದರಿಂದ ಶಿಕ್ಷಕರಿಗೆ ಅನ್ಯಾಯವಾಗುತ್ತಿದೆ. 25–30 ವರ್ಷ ಸೇವೆ ಸಲ್ಲಿಸಿ ದೂರದ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಸ್ಥಳವಿಲ್ಲ. ಜಿಪಿಟಿ ಶಿಕ್ಷಕರು ಕೆಲವೇ ವರ್ಷ ಸೇವೆ ಸಲ್ಲಿಸಿದ್ದರೂ ಮನೆಯಿಂದ ಕೂಗಳತೆ ದೂರದ ಶಾಲೆಗೆ ವರ್ಗಾವಣೆ ಸಿಗುತ್ತಿದೆ. ಇದು ಅವೈಜ್ಞಾನಿಕ ಎಂದು ಕಿಡಿಕಾರಿದರು.

ಅರ್ಹ ಶಿಕ್ಷಕರನ್ನು ಸೇವಾ ಜ್ಯೇಷ್ಠತೆಯೊಂದಿಗೆ ಜಿಪಿಟಿ ಶಿಕ್ಷಕರೆಂದು ಪದನಾಮಕರಣ ಮಾಡಿದರೆ ಖಾಲಿ ಉಳಿದ ಎಲ್ಲ ಜಿಪಿಟಿ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಜತೆಗೆ ಜಿಪಿಟಿ ವೃಂದಬಲ ಹೆಚ್ಚಾಗಿ ತಮ್ಮ ತಮ್ಮ ಸ್ಥಳಗಳನ್ನು ಅದಲು ಬದಲು ಮಾಡಿಕೊಳ್ಳಬಹುದು. ಬಹುತೇಕ ಹುದ್ದೆಗಳು ಏಕಕಾಲದಲ್ಲಿ ಖಾಲಿಯಾಗಿ ವರ್ಗಾವಣೆ ಸಿಗುತ್ತದೆ. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಕರ್ನಾಟಕ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹಿತರಕ್ಷಣಾ ವೇದಿಕೆ ಸಂಚಾಲಕ ಮಂಜುನಾಥ್.ಪಿ.ಎಸ್, ಉಮಾ ಗುಡ್ಡದ, ಶಂಕರ್ ಜೇನಿ, ನೇತ್ರಾವತಿ, ಗೀತಾ, ನಾಗರತ್ನ, ರಮೇಶ್, ಲೋಕೇಶ್.ಎಂ, ಮಹೇಶ್, ಪ್ರವೀಣ್, ಉಷಾ, ಪವಿತ್ರಾವಿ, ಶೋಭಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶಾಸ್ತ್ರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆಡ್‌ಪೂಲ್ & ವೊಲ್ವೆರಿನ್ (ಇಂ)	4 ಪ್ರದರ್ಶನಗಳು
ಸಂಗಂ	
ಕಾಟನ್‌ಪೇಟೆ ಗೇಟ್ (ಕ)	4 ಪ್ರದರ್ಶನಗಳು
ಲಿಡೋ	
ರಾಜಹುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನರಬಲಿ (ತೆ)	4 ಪ್ರದರ್ಶನಗಳು
ಪ್ರಭಾ	
ರಕ್ಷಾಕ್ಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.8ಕ್ಕೆ, ಬೆ.10.40ಕ್ಕೆ, ರಾಯನ್ (ತ): ಮ.1.20ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಕ್ಷಾಕ್ಷ (ಕ): ಬೆ.10.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಮ.12.50ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಲೆವೆಲ್ ಕ್ರಾಸ್ (ಮ): ಬೆ.10.25ಕ್ಕೆ.
ಸ್ಕ್ರೀನ್ 3	ಬ್ಯಾಡ್ ನ್ಯೂಸ್ (ಹಿಂ): ಬೆ.10.30ಕ್ಕೆ, ಸಂ.4.15ಕ್ಕೆ, ರೂಪಾಂತರ (ಕ): ಮ.1.15ಕ್ಕೆ, ಫ್ಯಾಮಿಲಿ ಡ್ರಾಮಾ (ಕ): ರಾ.7.10ಕ್ಕೆ, ರುದ್ರವೀಣಾ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.35ಕ್ಕೆ, ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಮುಖ್ಯಮಂತ್ರಿಗಳಿಂದ ರೋಬೋಟಿಕ್ ನೀ ಮತ್ತು ಹಿಪ್ ಜಾಯಿಂಟ್ ಬದಲಿ ಅಳವಡಿಕೆ ಕೇಂದ್ರ ಉದ್ಘಾಟನೆ

ಮೈಸೂರು, ಜು.25(ಜಿಎ)–ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಕೇಂದ್ರ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನೂತನವಾಗಿ ಅಳವಡಿಸಿರುವ ರೋಬೋಟಿಕ್ ನೀ ಮತ್ತು ಹಿಪ್ ಜಾಯಿಂಟ್ ಬದಲಿ ಅಳವಡಿಕೆ ಕೇಂದ್ರವನ್ನು ಜು.26ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ.

ಆಸ್ಪತ್ರೆ ಮಾಲೀಕ ಗಿರೀಶ್ ಚಂದ್ರ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಅಂದು ಸಂಜೆ 5.45ಕ್ಕೆ ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಚಿವ ಕೆ.ವೆಂಕಟೇಶ್, ಎಂಎಲ್‌ಸಿ ಡಾ.ಯತೀಂದ್ರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಪ್ರಥಮ ಬಾರಿಗೆ ಮೈಸೂರಲ್ಲಿ ರೋಬೋಟಿಕ್ ನೀ ಮತ್ತು ಹಿಪ್ ಜಾಯಿಂಟ್ ಬದಲಿ ಕೇಂದ್ರ ಸ್ಥಾಪನೆಯಾಗಿದೆ. ಇತರೆ ಆಸ್ಪತ್ರೆಗಳಲ್ಲಿ ಸಾಂಪ್ರದಾಯಿಕ ವಿಧಾನದ ಮೂಲಕ ಈ ಶಸ್ತ್ರಚಿಕಿತ್ಸೆ ಮಾಡುತ್ತಿದ್ದು, ಇದರಿಂದ ಚಿಕಿತ್ಸೆ ಪಡೆದವರು ಎರಡೇ ದಿನದಲ್ಲಿ ಚೇತರಿಸಿ ಕೊಂಡು ಓಡಾಡಬಹುದು. ಬೆಂಗಳೂರಿನಲ್ಲಿ ಈ ಸೌಲಭ್ಯ ಪಡೆಯಲು ನಾಲ್ಕು ಲಕ್ಷ ರೂ. ವೆಚ್ಚ ಮೀರುತ್ತದೆ. ಆದರೆ ತಮ್ಮ ಆಸ್ಪತ್ರೆಯಲ್ಲಿ ಇದಕ್ಕಿಂತ ಸುಮಾರು ಒಂದೂವರೆ ಲಕ್ಷ ರೂ. ಕಡಿಮೆಗೆ ಸೌಲಭ್ಯ ದೊರೆಯುತ್ತದೆ ಎಂದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	124.80 ಅಡಿ
ಒಳಹರಿವು	58849 ಕ್ಯೂಸೆಕ್
ಹೊರಹರಿವು	70044 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2282 ಅಡಿ
ಒಳಹರಿವು	20000 ಕ್ಯೂಸೆಕ್
ಹೊರಹರಿವು	20000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2856.77 ಅಡಿ
ಒಳಹರಿವು	15640 ಕ್ಯೂಸೆಕ್
ಹೊರಹರಿವು	12000 ಕ್ಯೂಸೆಕ್

ಹಸಿರು ನಮ್ಮ ಉಸಿರು

ಮುಡಾ ಹಗರಣ: ರಾಜಭವನಕ್ಕೆ ಬಿಜೆಪಿ ನಾಯಕರ ಮೆರವಣಿಗೆ, ರಾಜ್ಯಪಾಲರಿಗೆ ದೂರು ಸಲ್ಲಿಕೆ!

ಮೆರವಣಿಗೆಯಲ್ಲಿ ರಾಜಭವನಕ್ಕೆ ತೆರಳಿದ ಬಿಜೆಪಿ, ಜೆಡಿಎಸ್ ಶಾಸಕರು



ಬಿಜೆಪಿ ಶಾಸಕರು ಮುಡಾ ನಿವೇಶನ ಹಗರಣ ಕುರಿತು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಿದರು

ಬೆಂಗಳೂರು: ಬಿಜೆಪಿ ಶಾಸಕರು ಗುರುವಾರ ರಾಜಭವನವರೆಗೂ ಮೆರವಣಿಗೆ ನಡೆಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಿವೇಶನ ಹಗರಣ ಕುರಿತು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಿದರು. ಉಭಯ ಸದನಗಳಲ್ಲಿ ಈ ವಿಷಯ ಪ್ರಸ್ತಾಪಿಸಲು ಆಡಳಿತಾರೂಢ ಕಾಂಗ್ರೆಸ್ ಅವಕಾಶ ನೀಡಲಿಲ್ಲ ಎಂದು ಅವರು ದೂರಿದ್ದಾರೆ.

ವಿಧಾನಮಂಡಲದ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ನಂತರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಶಾಸಕರು, ಶಾಸಕರು ಭಿತ್ತಿಪತ್ರಗಳು ಮತ್ತು ಘೋಷಣೆಗಳೊಂದಿಗೆ ರಾಜಭವನಕ್ಕೆ ಮೆರವಣಿಗೆ ನಡೆಸಿದ ಪಕ್ಷದ ನಾಯಕರು, ರಾಜ್ಯಪಾಲರನ್ನು ಭೇಟಿ ಮಾಡಿ ಹಗರಣದ ವಿವರಗಳನ್ನು ನೀಡುವ ಮನವಿ ಪತ್ರ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ನೇರವಾಗಿ ಭಾಗಿಯಾಗಿರುವ ಮುಡಾ ಹಗರಣದ ಬಗ್ಗೆ ಮಾತನಾಡಲು ಆಡಳಿತಾರೂಢ ಕಾಂಗ್ರೆಸ್ ಅವಕಾಶ ನೀಡಲಿಲ್ಲ ಎಂದು ಆರೋಪಿಸಿದರು. ಈ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿರುವುದು ಈಗ ಜಗತ್ತಿಗೆ ಗೊತ್ತಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಆಡಳಿತ ಪಕ್ಷಕ್ಕೆ ಇಂತಹ ಅವಮಾನ ಎದುರಾಗಿರಲಿಲ್ಲ. ಹಗರಣಗಳ ನಂತರ ಹಗರಣಗಳು ಮುನ್ನೆಲೆಗೆ ಬಂದಿವೆ ಎಂದು ಟೀಕಿಸಿದರು.

187 ಕೋಟಿ ರೂ. ಮೊತ್ತದ ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಟಿ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಜೆಡಿಎಸ್ ಹೋರಾಟದಿಂದ ಕಾಂಗ್ರೆಸ್ ಶಾಸಕ ಬಿ ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಈಗ ಜೈಲಿ ನಲ್ಲಿದ್ದಾರೆ ಹಲವಾರು ಅಧಿಕಾರಿಗಳು ಕೂಡ ಜೈಲಿನಲ್ಲಿದ್ದು, ಮತ್ತೊಬ್ಬ ಶಾಸಕ ಜೈಲಿಗೆ ಹೋಗಲಿದ್ದಾರೆ ಎಂದು ಅವರು ಹೇಳಿದರು.

ಇದೇ ವೇಳೆ ಮುಡಾ ಹಗರಣ ಕುರಿತು ಮಾತನಾಡಿದ ಅಶೋಕ್, 1990ರ ದಶಕದಲ್ಲಿ ಜೆ ಎಚ್ ಪಟೇಲ್ ಸರಕಾರದಲ್ಲಿ ಸಿದ್ದರಾಮಯ್ಯ ಉಪಮುಖ್ಯ ಮಂತ್ರಿಯಾಗಿದ್ದಾಗ ಹಗರಣ ನಡೆದಿತ್ತು. 50:50 ಯೋಜನೆಯಡಿ ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು ಮುಡಾ ಹಗರಣದಲ್ಲಿ ಒಂದು ಲಕ್ಷ ಚದರ ಅಡಿ ಭೂಮಿಯನ್ನು ಕಬಳಿಸಿದ್ದಾರೆ ಎಂದು ಆರೋಪಿಸಿದರು.

ರಾಜ್ಯಪಾಲರ ಸಮ್ಮುಖದಲ್ಲಿ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುವುದಾಗಿ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿಗಳು ಸಂವಿಧಾನವನ್ನು ಉಲ್ಲಂಘಿಸುತ್ತಿದ್ದಾರೆ, ಅದರಲ್ಲಿ ಸಿದ್ದರಾಮಯ್ಯ ನೇರವಾಗಿ ಭಾಗಿಯಾಗಿದ್ದಾರೆ ಎಂಬುದಕ್ಕೆ ನನ್ನ ಬಳಿ ದಾಖಲೆಗಳಿವೆ. ಮುಡಾ ನಿವೇಶನಕ್ಕಾಗಿ 86 ಸಾವಿರ ಜನ ಸರದಿ ಸಾಲಿನಲ್ಲಿದ್ದಾಗ 14 ನಿವೇಶನಗಳನ್ನು ಸಿದ್ದರಾಮಯ್ಯ ಕುಟುಂಬಕ್ಕೆ ನೀಡಲಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ವಿಧಾನಮಂಡಲದ ಉಭಯ ಸದನಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಬಿಜೆಪಿ ಶಾಸಕರಿಗೆ ಅನುಮತಿ ನಿರಾಕರಿಸಲಾಗಿದೆ. ಬಿಜೆಪಿ ಮತ್ತು ಅದರ ಮಿತ್ರ ಪಕ್ಷ ಜೆಡಿಎಸ್ ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸುತ್ತಿವೆ ಎಂದು ಅವರು ಹೇಳಿದರು.

ಭೋವಿ ನಿಗಮದ ಹಗರಣ: ನಿಗಮದ ಕಚೇರಿ ಅಧೀಕ್ಷಕ ಪಿ.ಡಿ.ಸುಬ್ಬಪ್ಪ ಬಂಧನ

ಬೆಂಗಳೂರು, ಜು.25– ವಾಲ್ಮೀಕಿ ಅಭಿವೃದ್ಧಿ ನಿಗಮ, ಮುಡಾ ಮತ್ತಿತರ ಹಗರಣಗಳನ್ನು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಹಗರಣಗಳ ತನಿಖೆ ತೀವ್ರಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುಡುಗಿದ ಬೆನ್ನಲ್ಲೇ ರಾಜ್ಯ ಭೋವಿ ನಿಗಮದ ಕೋಟ್ಯಂತರ ರೂ. ಅವ್ಯವಹಾರ ಪ್ರಕರಣ ಸಂಬಂಧ ನಿಗಮದ ಕಚೇರಿ ಅಧೀಕ್ಷಕ ಪಿ.ಡಿ.ಸುಬ್ಬಪ್ಪ ಅವರನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

2021–22ನೇ ಸಾಲಿನಲ್ಲಿ ಭೋವಿ ಸಮುದಾಯದ ಉದ್ಯಮಿಗಳಿಗೆ ನಿಗಮವು ನೀಡುವ ಆರ್ಥಿಕ ಸಾಲ ಯೋಜನೆಯಲ್ಲಿ ಕೋಟ್ಯಂತರ ರೂ. ಮೊತ್ತದ ಅಕ್ರಮ ನಡೆದಿದೆ ಎಂದು ಆರೋಪಿಸಿ ಬೆಂಗಳೂರು ನಗರದ ಸಿದ್ದಾಪುರ, ಕಲಬುರಗಿ ಜಿಲ್ಲೆಯ ಕಾಳಗಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರವು, ಕೆಲ ದಿನಗಳ ಹಿಂದೆ ಸಿಐಡಿ ತನಿಖೆಗೆ ಆದೇಶಿಸಿತ್ತು. ತನಿಖೆಗಿಳಿದ ಸಿಐಡಿ, ನಿಗಮದ ಅಧೀಕ್ಷಕ ಸುಬ್ಬಪ್ಪ ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಿ ವಿಚಾರಣೆ ಸಲುವಾಗಿ ಆರೋಪಿಯನ್ನು ನಾಲ್ಕು ದಿನಗಳ ಕಾಲ ವಶಕ್ಕೆ ಪಡೆದಿದೆ. ಈ ಅವ್ಯವಹಾರ ಆರೋಪ ಕೇಳಿ ಬಂದ ಕೂಡಲೇ ಸುಬ್ಬಪ್ಪ ಅವರು ಸುಮಾರು 200ಕ್ಕೂ ಹೆಚ್ಚಿನ ಕಡತಗಳನ್ನು ಕಳವು ಮಾಡಿ ಬಚ್ಚಿಟ್ಟಿದ್ದರು. ಈಗ ಆ ಕಡತಗಳನ್ನು ಮರಳಿ ಪಡೆಯಲಾಗುತ್ತಿದೆ ಎಂದು ಸಿಐಡಿ ಅಧಿಕಾರಿಗಳು ಹೇಳಿದ್ದಾರೆ.

ಕಡತ ನಾಪತ್ತೆ ಮಾಡಿದ್ದ ಸುಬ್ಬಪ್ಪ?: 2021–23ವರೆಗೆ ರಾಜ್ಯ ಭೋವಿ ನಿಗಮದ ಕೇಂದ್ರ ಕಚೇರಿಯ ಅಧೀಕ್ಷಕರಾಗಿ ಸುಬ್ಬಪ್ಪ ಕಾರ್ಯನಿರ್ವಹಿಸಿದ್ದರು. ಭೋವಿ ನಿಗಮದಿಂದ ಆ ಸಮುದಾಯದ ಉದ್ಯಮಿಗಳಿಗೆ ಆರ್ಥಿಕ ನೆರವು ನೀಡಲು ಸಾಲ ಯೋಜನೆಗಳನ್ನು ಜಾರಿಗೊಳಿಸಲಾಗಿತ್ತು. ನಿಗಮದ ಉದ್ಯಮಶೀಲತೆ ಹಾಗೂ ನೇರ ಸಾಲ ಯೋಜನೆಗಳಲ್ಲಿ ಆರ್ಥಿಕ ನೆರವು ಕೊಡಿಸುವುದಾಗಿ ಕೆಲವರಿಂದ ಮಧ್ಯವರ್ತಿಗಳು ಲಕ್ಷಾಂತರ ರೂ. ಹಣ ಪಡೆದು ವಂಚಿಸಿದ್ದರು. ಅಲ್ಲದೆ ಸಾಲ ಮಂಜೂರಾತಿ ಮಾಡಿರುವ ಬಗ್ಗೆ ನಕಲಿ ದಾಖಲೆ ಸೃಷ್ಟಿಸಿ ನಿಗಮದ ಕೋಟ್ಯಂತರ ಹಣವನ್ನು ಅಧಿಕಾರಿಗಳು ನುಂಗಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು.

ಈ ಅಕ್ರಮದ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಅವರಿಗೆ ಬಿಜೆಪಿ ಮಾಜಿ ಶಾಸಕ ಗೂಳಿಹಟ್ಟಿ ಶೇಖರ್ ಸಹ ದೂರು ಕೊಟ್ಟಿದ್ದರು. ಅಕ್ರಮದ ಕುರಿತು ಮುಖ್ಯಮಂತ್ರಿಗಳಿಗೆ ಸಚಿವ ಶಿವರಾಜ್ ತಂಗಡಗಿ ಮಾಹಿತಿ ನೀಡಿದ್ದರು. ಕೊನೆಗೆ ಭೋವಿ ನಿಗಮದ ಅವ್ಯವಹಾರ ಪ್ರಕರಣದ ಕುರಿತು ಸಿಐಡಿ ತನಿಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಡಿಜಿಪಿ ಆದೇಶಿಸಿದ್ದರು. ಈ ಬಗ್ಗೆ ತನಿಖೆಗಿಳಿದ ಸಿಐಡಿ, ಈಗ ಮೊದಲ ಬೇಟೆಯಾಗಿ ಸುಬ್ಬಪ್ಪ ಅವರನ್ನು ಬಂಧಿಸಿದೆ.

ಮುಖ್ಯಮಂತ್ರಿಗಳ ಲಕ್ಷ ಮನೆ ಯೋಜನೆ ಫಲಾನುಭವಿಗಳಿಗೆ ಸರ್ಕಾರದಿಂದಲೇ ಲಕ್ಷ ರೂ. ನೆರವು



ಬೆಂಗಳೂರು, ಜು.25– ಮುಖ್ಯಮಂತ್ರಿಗಳ ಒಂದು ಲಕ್ಷ ಮನೆ ಯೋಜನೆಯಡಿ ಫಲಾನುಭವಿಗಳಿಗೆ ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಯೂನಿಟ್ ವೆಚ್ಚ ಹೆಚ್ಚಳ ನಿರ್ಧಾರದಿಂದ ಆತಂಕಗೊಂಡಿದ್ದ 12,153 ಕುಟುಂಬಗಳಿಗೆ ಸಿಹಿ ಸುದ್ದಿ ನೀಡಿದ್ದು, ಪ್ರತಿ ಮನೆಗೆ ಒಂದು ಲಕ್ಷ ರೂ. ನಂತೆ 121 ಕೋಟಿ 53 ಲಕ್ಷ ರೂ.ಸರ್ಕಾರವೇ ಭರಿಸಲು ಒಪ್ಪಿಗೆ ನೀಡಿದ್ದಾರೆ.

ವಸತಿ ಸಚಿವ ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಗುರುವಾರ ಸಂಜೆ ವಿಧಾನಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿ ನಗರದ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರು ಮುಖ್ಯಮಂತ್ರಿಯವರ ಮನವೊಲಿಸುವಲ್ಲಿ ಯಶಸ್ವಿಯಾದರು. ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಗೆ 2017, ಸೆಪ್ಟೆಂಬರ್ 23 ರಂದು ಅಧಿಸೂಚನೆ ಹೊರಡಿಸಿ ಘಟಕ ವೆಚ್ಚ 6 ಲಕ್ಷ ರೂ. ನಿಗದಿ ಮಾಡಲಾಗಿತ್ತು.

ಕೇಂದ್ರ ಸರ್ಕಾರ 1.50 ಲಕ್ಷ, ರಾಜ್ಯ ಸರ್ಕಾರ ಸಾಮಾನ್ಯ ವರ್ಗಕ್ಕೆ 1.20 ಲಕ್ಷ, ಎಸ್‌ಟಿ –ಎಸ್‌ಸಿ ವರ್ಗಕ್ಕೆ 2 ಲಕ್ಷ ರೂ. ನಿಗದಿಯಾಗಿತ್ತು. ನಂತರ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಬಿಜೆಪಿ ಸರ್ಕಾರದಲ್ಲಿ ಘಟಕ ವೆಚ್ಚ 10 ಲಕ್ಷದ 60 ಸಾವಿರ ರೂ. ನಿಗದಿ ಮಾಡಲಾಗಿತ್ತು. ಇದಕ್ಕೆ 60 ಸಾವಿರ ರೂ. ಜಿಎಸ್‌ಟಿ ಸೇರಿ 11 ಲಕ್ಷದ 20 ಸಾವಿರ ರೂ. ಆಗಿತ್ತು.

ಇಷ್ಟು ಮೊತ್ತ ಭರಿಸಲು ಕಷ್ಟ ಎಂದು ಫಲಾನುಭವಿಗಳು ಸಚಿವರ ಬಳಿ ಮನವಿ ಮಾಡಿಕೊಂಡಿದ್ದರು. ಇದೀಗ ಸರ್ಕಾರದ ಮಹತ್ವದ ತೀರ್ಮಾನದಿಂದ ಸಬ್ಸಿಡಿ ಹೊರತುಪಡಿಸಿ ಸಾಮಾನ್ಯ ವರ್ಗ 7.50 ಲಕ್ಷ, ಎಸ್‌ಸಿ – ಎಸ್‌ಟಿ ವರ್ಗ 6.70 ಲಕ್ಷರೂ. ಕಟ್ಟಬೇಕಾಗುತ್ತದೆ. ಇದರಿಂದ 12,153 ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ.

ಈ ಹಿಂದೆ ಕ್ರಮವಾಗಿ 8.50 ಲಕ್ಷ ಹಾಗೂ 7.70 ಲಕ್ಷ ರೂ. ಕಟ್ಟಬೇಕಿತ್ತು. ಈ ತೀರ್ಮಾನ 2020 ರಲ್ಲಿ ಘಟಕ ವೆಚ್ಚ ಹೆಚ್ಚಳ ತೀರ್ಮಾನದ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಪ್ರಾರಂಭಿಕ ಠೇವಣಿ ಮೊತ್ತ ಪಾವತಿ ಮಾಡಿರುವ 12,153 ಮಂದಿಗೆ ಮಾತ್ರ ಅನ್ವಯವಾಗಲಿದೆ. ಪ್ರಾರಂಭಿಕ ಠೇವಣಿ ಮೊತ್ತ ಪಾವತಿ ಮಾಡದ ಆನ್‌ಲೈನ್ ಅರ್ಜಿಗಳಿಗೆ ಅನ್ವಯ ಆಗದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಸ್ಪಷ್ಟಪಡಿಸಿದ್ದಾರೆ.

ಫಲಾನುಭವಿಗಳು ಸರ್ಕಾರ ನಿಗದಿಪಡಿಸಿದ ಘಟಕ ವೆಚ್ಚ ತಮಗೆ ಹೊರೆಯಾಗುತ್ತಿರುವ ಬಗ್ಗೆ ಸಚಿವ ಜಮೀರ್ ಅಹಮದ್ ಖಾನ್ ಅವರಲ್ಲಿ ಹಲವಾರು ಬಾರಿ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಈ ಸಂಬಂಧ ಶಾಸಕರ ಜತೆ ಮೂರು ಸಭೆ ನಡೆಸಿದ್ದ ಸಚಿವರು ಅಂತಿಮವಾಗಿ ಮುಖ್ಯಮಂತ್ರಿ ಯವರ ಬಳಿ ಶಾಸಕರನ್ನು ಕರೆದೊಯ್ದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇಂದಿನ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಶಾಸಕರಾದ ಎಸ್.ಟಿ. ಸೋಮಶೇಖರ್, ಎಸ್.ಆರ್. ವಿಶ್ವನಾಥ್, ಮಂಜುಳಾ ಲಿಂಬಾವಳಿ, ಎಂ. ಕೃಷ್ಣಪ್ಪ, ಮುನಿರಾಜು, ಶಿವಣ್ಣ ಪಾಲ್ಗೊಂಡಿದ್ದರು.

ಇಂದು ಪ್ಯಾರಿಸ್ ಒಲಂಪಿಕ್ಸ್‌ಗೆ ಚಾಲನೆ

ಹೈದರಾಬಾದ್, ಜು.25– ಬಹು ನಿರೀಕ್ಷಿತ ಪ್ಯಾರೀಸ್ ಒಲಂಪಿಕ್ಸ್ 2024ಕ್ಕೆ ಜು.26ರಂದು ಶುಕ್ರವಾರ ವರ್ಣರಂಜಿತ ಚಾಲನೆ ಸಿಗಲಿದೆ. ಈ ಬಾರಿಯ



ಈ ಬಾರಿಯ ಒಲಿಂಪಿಕ್ಸ್‌ನಲ್ಲಿ 206 ರಾಷ್ಟ್ರಗಳಿಂದ 10 ಸಾವಿರಕ್ಕೂ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸುತ್ತಿದ್ದು, ಈ ಪೈಕಿ ಭಾರತ 117 ಕ್ರೀಡಾಪಟುಗಳೊಂದಿಗೆ ಪ್ಯಾರಿಸ್‌ಗೆ ಪಯಣಿಸಿದೆ. ಈ ಪೈಕಿ ಅರ್ಧದಷ್ಟು ಭಾರತೀಯ ಕ್ರೀಡಾಪಟುಗಳು ತಮ್ಮ ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದು, 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ಅನುಭವಸ್ಥರು ತಂಡದಲ್ಲಿದ್ದಾರೆ. ಹಾಗಾಗಿ, ಭಾರತ ಹೆಚ್ಚಿನ ಪದಕ ಗೆಲ್ಲುವ ನಿರೀಕ್ಷೆಯಲ್ಲಿದೆ.

ತಂಡದಲ್ಲಿ 70 ಪುರುಷರು ಮತ್ತು 47 ಮಹಿಳಾ ಕ್ರೀಡಾಪಟುಗಳಿದ್ದು, ಈ ಪೈಕಿ 72 ಸ್ಪರ್ಧಾಳುಗಳು ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದಾರೆ.

ವಿವರ: ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವವರ ಪೈಕಿ 11 ಮಹಿಳೆಯರು ಮತ್ತು 18 ಪುರುಷರು ಸೇರಿ ಒಟ್ಟು 29 ಅಥ್ಲೀಟ್‌ಗಳಿದ್ದಾರೆ. ಉಳಿದಂತೆ ಶೂಟಿಂಗ್‌ನಲ್ಲಿ 21 ಸ್ಪರ್ಧಿಗಳು, ಹಾಕಿ (19), ಟೇಬಲ್ ಟೆನಿಸ್‌ನಲ್ಲಿ 8 ಆಟಗಾರರು ಪ್ರತಿನಿಧಿಸುತ್ತಾರೆ. ಬ್ಯಾಡ್ಮಿಂಟನ್‌ನಲ್ಲಿ 2 ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಸೇರಿದಂತೆ ಏಳು ಸ್ಪರ್ಧಿಗಳಿದ್ದಾರೆ. ಕುಸ್ತಿ, ಬಿಲ್ಲುಗಾರಿಕೆ ಮತ್ತು ಬಾಕ್ಸಿಂಗ್‌ನಲ್ಲಿ ತಲಾ ಆರು ಮಂದಿ ಪ್ರತಿನಿಧಿಸಲಿದ್ದಾರೆ. ನಂತರದಲ್ಲಿ ಗಾಲ್ಫ್ (4), ಟೆನಿಸ್ (3), ಈಜು (2) ಮತ್ತು ರೋಯಿಂಗ್ ಮತ್ತು ವೇಟ್ ಲಿಫ್ಟಿಂಗ್, ಕುದುರೆ ಸವಾರಿ, ಜೂಡೋನಲ್ಲಿ ತಲಾ ಒಬ್ಬರು ಪ್ರತಿನಿಧಿಸಲಿದ್ದಾರೆ.

ಮೋದಿ ಭೇಟಿಯಾದ ದೇವೇಗೌಡರು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿ



ನವದೆಹಲಿ, ಜು.25– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮತ್ತು ಅವರ ಪುತ್ರ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, 'ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಭೇಟಿಯಾಗಿದ್ದು ಗೌರವದ ಸಂಗತಿ. ವಿವಿಧ ವಿಷಯಗಳ ಬಗ್ಗೆ ಅವರ ಜಾಣ್ಮೆ ಮತ್ತು ದೃಷ್ಟಿಕೋನವು ಆಳವಾಗಿದ್ದು ಹಾಗೂ ಮೌಲ್ಯಯುತವಾದುದ್ದಾಗಿದೆ. ಭೇಟಿ ವೇಳೆ ನನಗೆ ಕಲಾಕೃತಿಯೊಂದನ್ನು ಉಡುಗೊರೆಯಾಗಿ ನೀಡುವ ಮೂಲಕ ನನ್ನ ಇತ್ತೀಚಿನ ಕನ್ಯಾಕುಮಾರಿ ಭೇಟಿ ನೆನಪಿಸಿದ ಅವರಿಗೆ ಕೃತಜ್ಞನಾಗಿದ್ದೇನೆ' ಎಂದು ಬರೆದುಕೊಂಡಿದ್ದಾರೆ.

PUBLIC NOTICE

The public at large are hereby notified that my client is intending to purchase the property more fully described in the schedule below from Sri. N. Subramany Any person/s, financial or other Institution/s having any right, claim or interest over the schedule property or objections towards the proposed sale are hereby called upon to forward their objections to the undersigned in writing with supporting documents within SEVEN DAYS from the date of this notice. Any claim or objection received after the expiry of the said period will not be binding over the schedule depicted property or my Client.

SCHEDULE

All The Piece And Parcel Of A Vacant Residential Site No. 257,carved out of the Residentially converted lands bearing Survey number 7/3, 14/3, 14/4, 15/2, 15/1, 17/1A, 17/4, 17/1B, 17/3, 17/5, 17/6, 54/2, 90/1, 90/2, 90/3, 14/5, 14/6 and 80/2 in Huyilalu Village, Ilawala Hobli, Mysore Taluk, Mysore District measuring 20 Acres 33.5 Guntas and the layout known as AMRUTHASAGARA, measuring and bound as follows: MEASUREMENT: EAST to WEST: 18.30 Meters. NORTH to SOUTH: 12.20 Meters, Total Area: 223.26 Square Meters, Bound On East by Site No. 247, West by 12.0 Meter Road, North by Site No. 256 and South by 12.0 Meter Road.

Sd/- Rohit Subbayya, Advocate, No. 1230/A, CH 30/A, 2nd Cross, Behind Ramamandira, Krishnamurthypuram, Chamaraja Mohalla, Mysuru-570 004. Mob: 9480004999
Date: 24-7-2024

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ ಲೇಟ್, ಕರೀಗೌಡರವರ ಮಗಳಾದ (1) ಶ್ರೀಮತಿ ಸಿದ್ದಮ್ಮ ಕೋಂ ಶ್ರೀ ನಂಜಯ್ಯ ಮತ್ತು ಲೇಟ್ ಶ್ರೀ ಮಹದೇವ ಬಿನ್ ಲೇಟ್ ಕರಿಗೌಡ ರವರ ಪತ್ನಿ (2) ಶ್ರೀಮತಿ ನಲ್ಲಮ್ಮ ಹಾಗೂ ಇವರ ಮಗಳಾದ (3) ಶ್ರೀಮತಿ ರಾಧ .ಎಂ ಬಿನ್ ಲೇಟ್ ಶ್ರೀ ಮಹದೇವ ಇವರ ಇರಾದೆ ಮೇರೆಗೆ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ :

ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತು ನಮ್ಮ ಕಕ್ಷಿದಾರರ ಸಂಪೂರ್ಣ ಮಾಲೀಕತ್ವಕ್ಕೆ ಒಳಪಟ್ಟ ಸ್ವತ್ತಾಗಿರುತ್ತದೆ. ನಮ್ಮ ಕಕ್ಷಿದಾರರ ಪೈಕಿ ಒಂದನೇಯವರು ದಿ: ಕರಿಗೌಡರ ಮೊದಲನೇ ಪತ್ನಿ ಶ್ರೀಮತಿ ನಂಜಮ್ಮ ರವರ ಮಗಳಾಗಿದ್ದು, ಎರಡು ಮತ್ತು ಮೂರನೇಯವರು ಕ್ರಮವಾಗಿ ಸದರಿ ನಂಜಮ್ಮ ರವರ ಸೊಸೆ ಹಾಗೂ ಮೊಮ್ಮಗಳಾಗಿರುತ್ತಾರೆ. ನಮ್ಮ ಕಕ್ಷಿದಾರರ ಪೈಕಿ ಒಂದನೇಯವರ ತಂದೆ ಶ್ರೀ ಕರೀಗೌಡರವರ ಎರಡನೇ ಪತ್ನಿ ಶ್ರೀಮತಿ ಲಕ್ಷ್ಮಮ್ಮರವರ ಮಗ ರವಿ ಹಾಗೂ ಸದರಿ ಶ್ರೀ ಕರೀಗೌಡರ ಮೂರನೇ ಪತ್ನಿ ಶ್ರೀಮತಿ ರಾಮಮ್ಮ ರವರ ಮಕ್ಕಳುಗಳಾದ ಶ್ರೀ ಸಿದ್ದರಾಮ ಮತ್ತು ಶ್ರೀಮತಿ ಅಂಬಿಕ ರವರು ನಮ್ಮ ಕಕ್ಷಿದಾರರ ಅಸ್ತಿತ್ವವನ್ನು ಮರೆಮಾಚಿ, ಮೂಲ ಸರ್ವೆ ನಂ.182/2ನ್ನು 182/4,5,6 ಎಂಬುದಾಗಿ ಖಾತಾ ವರ್ಗಾವಣೆ ಮಾಡಿಸಿಕೊಂಡು ಸದರಿ ಸ್ವತ್ತನ್ನು ಶ್ರೀಮತಿ ಶಾಂತ ಕೋಂ ಬಸವರಾಜು, ಮನೆ ನಂ.1321, ಮೊದಲನೇ ಕ್ರಾಸ್, ಕುರುಬಾರಹಳ್ಳಿ, ಸಿದ್ಧಾರ್ಥ ನಗರ, ಮೈಸೂರು ಇವರಿಗೆ ಕಾನೂನುಬಾಹಿರವಾಗಿ ನಮ್ಮ ಕಕ್ಷಿದಾರರ ಕಾನೂನೀ ಹಕ್ಕು, ಹಿತಾಸಕ್ತಿಯನ್ನು ಮರೆಮಾಚಿ ಪರಭಾರೆ ಮಾಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಸಂಬಂದ ಮೇಲ್ಕಂಡವರ ಕಾನೂನು ಬಾಹಿರ ನಡವಳಿಕೆಯನ್ನು ಪ್ರಶ್ನಿಸಿ, ಷೆಡ್ಯೂಲ್ ಸ್ವತ್ತಿನ ಸಂಬಂದ ಮೇಲ್ಕಂಡ ವ್ಯವಹರಣೆಗಳನ್ನು ಪ್ರಶ್ನಿಸಿ, ನಮ್ಮ ಕಕ್ಷಿದಾರರೇ ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರೆಂಬ ಬಗ್ಗೆ ಘೋಷಣಾತ್ಮಕ ಪರಿಹಾರವನ್ನು ಕೋರಿ ಘನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು, ಇಲ್ಲಿ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯೂ **ಅಸಲು ದಾವಾ ಸಂಖ್ಯೆ:247/2022** ಎಂಬುದಾಗಿ ದಾಖಲಾಗಿರುತ್ತದೆ. ವಸ್ತು ಸ್ಥಿತಿ ಹೀಗಿದ್ದು, ಮೇಲ್ಕಂಡ **ಶ್ರೀಮತಿ ಶಾಂತ ಕೋಂ ಬಸವರಾಜು** ರವರು ಮೇಲ್ಕಂಡ ದಾವೆಯಲ್ಲಿ ಪಕ್ಷಗಾರರಾಗಿದ್ದರೂ ಷೆಡ್ಯೂಲ್ ಸ್ವತ್ತನ್ನು ಪರಬಾರೆ ಮಾಡಲು ಮುಂದಾಗಿರುತಾರೆಂದು ತಿಳಿದು ಬಂದಿರುತ್ತದೆ. ಆದುದರಿಂದ. ಷೆಡ್ಯೂಲ್ ಸ್ವತ್ತಿನ ಸಂಬಂದ ಯಾವುದೇ ಮೂರನೇ ವ್ಯಕ್ತಿಗಳು ಕ್ರಯ, ವಗೈರೆ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ, ಒಂದು ವೇಳೆ ಷಡ್ಯೂಲ್ ಸ್ವತ್ತಿನ ಸಂಬಂದ ಮುಂದುವರೆಯುವ ಯಾವುದೇ ಬಗೆಯ ವ್ಯವಹಾರಗಳು ನಮ್ಮ ಕಕ್ಷಿದಾರರ ಹಕ್ಕು ಮತ್ತು ಹಿತಾಸಕ್ತಿಯನ್ನು ಬದ್ದಪಡಿಸುವುದಿಲ್ಲಾ ಎಂದು ತಿಳಿಯುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ ಹಾಲಿ ಸರ್ವೆ ನಂ. 182/4, 182/5, 182/6 (ಹಳೆ ನಂ182/2) ರ ವಿಸ್ತೀರ್ಣ 2 ಎಕರೆ ಜಮೀನು ಈ ಜಮೀನಿಗೆ ಚೆಕ್ಕುಬಂದಿ **ಪೂರ್ವಕ್ಕೆ:** ವರುಣಾ ನಾಲೆ, **ಪಶ್ಚಿಮಕ್ಕೆ:** ದೊಡ್ಡ ಜವರೇಗೌಡ ರವರ ಜಮೀನು, **ಉತ್ತರಕ್ಕೆ:** ಜಯಮ್ಮ ರವರ ಜಮೀನು, **ದಕ್ಷಿಣಕ್ಕೆ:** ಚಿಕ್ಕಣ್ಣಮ್ಮ @ ಕರಿಯಮ್ಮ ರವರ ಜಮೀನು.

ಸಹಿ/– ಎಸ್. ವಿವೇಕ್, ವಕೀಲರು
ಕಛೇರಿ: ನಂ. 452, 1 ನೇ ಮಹಡಿ, ಕೊಠಡಿ ಸಂಖ್ಯೆ 5, ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್, ಎಂ.ಜಿ. ರಸ್ತೆ, ಫೋರ್ಟ್ ಮೊಹಲ್ಲಾ, ಮೈಸೂರು–4
ದಿನಾಂಕ: 25–07–2024

ಆಷಾಢ ಮಾಸದ ಅಂಗವಾಗಿ ಚಾಮುಂಡಿಬೆಟ್ಟದ ಮಹಿಳಾ ಸಿಬ್ಬಂದಿಗೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಬಾಗಿನ



ಆಷಾಢ ಮಾಸದ ಅಂಗವಾಗಿ ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮಹಿಳಾ ಸಿಬ್ಬಂದಿಗೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಬಾಗಿನ ಸಮರ್ಪಿಸಲಾಯಿತು. ಚಾಮುಂಡಿಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ, ಫೌಂಡೇಶನ್ ಟ್ರಸ್ಟ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಡಾ.ಆರ್.ಹೆಚ್.ಪವಿತ್ರ, ಸೋಮಣ್ಣ, ಗಿರೀಶ್ ಇನ್ನಿತರರಿದ್ದಾರೆ.

ಮೈಸೂರು: ಆಷಾಢ ಮಾಸದ ಅಂಗವಾಗಿ ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮಹಿಳಾ ಸಿಬ್ಬಂದಿಗೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಸೀರೆ, ಬಳೆ, ಕುಂಕುಮ, ಅರಿಶಿನ, ವಿಳ್ಳೆದೆಲೆ, ಅಡಿಕೆ, ಹೂ, ತೆಂಗಿನಕಾಯಿ ಬಾಗಿನ ಸಮರ್ಪಿಸಲಾಯಿತು.

ಈ ವೇಳೆ ಚಾಮುಂಡಿಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಮಾತನಾಡಿ, ಅಷಾಢ ಮಾಸದ ಸಂದರ್ಭದಲ್ಲಿ ಚಾಮುಂಡಿಬೆಟ್ಟಕ್ಕೆ ದೇಶ–ವಿದೇಶದಿಂದ ಲಕ್ಷಾಂತರ ಭಕ್ತರು ಬರುತ್ತಾರೆ. ಚಾಮುಂಡಿಬೆಟ್ಟದಲ್ಲಿ ಭಕ್ತರ ಅನೂಕೂಲಕ್ಕಾಗಿ ಸಾರಿಗೆ ವ್ಯವಸ್ಥೆ, ಸುಗಮ ದರ್ಶನಕ್ಕೆ ಸರದಿ ಸಾಲು, ಅನ್ನ ದಾಸೋಹ, ಮೂಲಸೌಕರ್ಯ ಗಳನ್ನು ಕಲ್ಪಿಸಲಾಗಿದೆ. ಭಕ್ತರು ಮನೆಯಿಂದಲೇ ಬಟ್ಟೆ ಬ್ಯಾಗ್ ತರುವುದು ಒಳ್ಳೆಯದು. ಬೆಟ್ಟದಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡಬೇಕೆಂದು ಭಕ್ತರಲ್ಲಿ ಮನವಿ ಮಾಡಿದರು. ಪ್ರತಿ ವರ್ಷದಂತೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಈ ಬಾರಿಯೂ ಮಹಿಳೆಯರಿಗೆ ಬಾಗಿನ ಸಮರ್ಪಣೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಶ್ರೀ ದುರ್ಗಾ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಮಾತನಾಡಿ, ಮೈಸೂರು ಪ್ರಾಂತ್ಯದಲ್ಲಿ ಆಷಾಢ ಮಾಸವೆಂದರೆ ದೇವಿ ಆರಾಧನೆಗೆ ಮಹಿಳೆಯರು ಹೆಚ್ಚು ಪ್ರಾಧಾನ್ಯತೆ ನೀಡುತ್ತಾರೆ. ಚಾಮುಂಡಿಬೆಟ್ಟದಲ್ಲಿ ಪ್ರತಿನಿತ್ಯ ಸೇವೆ ಸಲ್ಲಿಸುವ ಮಹಿಳಾ ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿಗೆ ಬಾಗಿನ ಅರ್ಪಿಸುವ ಮೂಲಕ ಅವರಲ್ಲೂ ಸಡಗರ ಉಂಟು ಮಾಡುವ ಏಕೈಕ ಉದ್ದೇಶವಷ್ಟೆ ಅವರಲ್ಲಿ ಮತ್ತಷ್ಟು ಆತ್ಮಸ್ಥೈರ್ಯ ತುಂಬಿದಂತಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಆರ್.ಹೆಚ್.ಪವಿತ್ರ, ದೇವಸ್ಥಾನದ ಅರ್ಚಕರಾದ ಸೋಮಣ್ಣ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಲತಾ ಮೋಹನ್, ಸಮಾಜ ಸೇವಕರಾದ ಶಾಂತ, ಜಿ.ರಾಘವೇಂದ್ರ, ಪವನ್, ಸಿದ್ದರಾಮು, ಕೆಪಿಸಿಸಿ ಸಾಮಾಜಿಕ ಜಾಲತಾಣದ ಸಂಚಾಲಕ ಸಂತೋಷ್ ಕಿರಾಲು, ಭೈರತಿ ಲಿಂಗರಾಜು, ರವಿಚಂದ್ರ, ಹರೀಶ್ ನಾಯ್ಡು ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮಕ್ಕೆ ಸೇರಿದ ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರಾದ ಕೆ.ಯು.ನಿತಿನ್‌ಕುಮಾರ್ ಮೈಸೂರು ರವರು ಖರೀದಿಸುವ ಸಲುವಾಗಿ ನೋಂದಾಯಿತ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಭಾಗಶಃ ಕ್ರಯದ ಪ್ರತಿಫಲವನ್ನು ಭೂಮಾಲೀಕರಿಗೆ ಪಾವತಿಸಿರುತ್ತಾರೆ.

ಸದರಿ ಕರಾರನ್ನು ಮರೆಮಾಚಿ ಷೆಡ್ಯೂಲ್ ಸ್ವತ್ತನ್ನು ಪರಭಾರೆ ಮಾಡಲು ಪ್ರಯತ್ನಿಸುತ್ತಿರುವುದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಸಾರ್ವಜನಿಕರು /ಸಂಘ ಸಂಸ್ಥೆಗಳು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯಲ್ಲಿ ವ್ಯವಹರಿಸಕೂಡದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಕರಾರುಗಳು/ಕ್ಲೈಮುಗಳು ಮುಂದೆ ಬಂದಲ್ಲಿ ಅಂತಹ ತಕರಾರುಗಳು/ಕ್ಲೈಮುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಲ್ಲವೆಂದು ಸಹಾ ತಿಳಿಯುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.112/4ರಲ್ಲಿರುವ 1 ಎಕರೆ 03.08 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ : ಬಸಪ್ಪರವರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ನಿಂಗಮ್ಮರವರ ಸ್ವತ್ತು, ದಕ್ಷಿಣಕ್ಕೆ : ಕಾಳೇಗೌಡರವರ ಜಮೀನು ಈ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸಹಿ/– **ಎನ್.ಕುಮಾರಸ್ವಾಮಿ,** ವಕೀಲರು,
ನಂ.729/1, ಸಾಯಿಮಂದಿರದ ಎದುರು,
ತ್ಯಾಗರಾಜ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು,
ಮೊ.ಸಂ. **9448277346**
ದಿನಾಂಕ: 24–07–2024

ಕರ್ನಾಟಕ ಸರ್ಕಾರ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹಾಸನ.
Email-jdahassan@yahoo.com 09.2021 Phone No:08172-267158
ಸಂ:ಸಕೃನಿಹಾ/ಮಣ್ಣು/ಟೆಂಡರ್/2024–25/5 ದಿನಾಂಕ: 24/07/2024

ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು, ಹಾಸನ ರವರ ಅಧೀನದಲ್ಲಿ ಬರುವ ಮಣ್ಣು ಪರೀಕ್ಷಾ ಪ್ರಯೋಗಾಲಯದ ಬಲವರ್ಧನೆಯಗೆ ಅವಶ್ಯಕತೆಯಿರುವ ವಿವಿಧ ವೈಜ್ಞಾನಿಕ ಉಪಕರಣಗಳಾದ Kjeldahl unit with stabalazer, Ph Meter, Electric Conductivity Meter (EC) , AAS compatable PC and UPS battery, AAS machine Air compressor, Micropipettes, Bottle top Acid Dispensor, Hot plate heater for conical flask, Electronic Weighing Balances, Commercial RO waterpurifier for distillation unit, Commercial Double door Lab Refrigarator ಗಳನ್ನು ಸರಬರಾಜು ಪಡೆಯಲು ಇ–ಟೆಂಡರ್ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ(KTPP) ಅಧಿನಿಯಮ 1999, ನಿಯಮಗಳು 2000ರ ಪ್ರಕಾರ ಆಸಕ್ತ ನೊಂದಾಯಿತ ಮತ್ತು ಅನುಮೋದಿತ ಸಂಸ್ಥೆಗಳಿಂದ Karnataka Public Procurement Portal ಮೂಲಕ ದ್ವಿ–ಲಕೋಟೆ ಪದ್ದತಿಯಂತೆ (Technical & Financial Bids)ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್‌ಗಳನ್ನು Karnataka Public Procurement Portal website https://www.kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಟೆಂಡರ್ ದಾಖಲಾತಿಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ದಿನಾಂಕ: 24.07.2024 ರಿಂದ ಪಡೆಯಬಹುದು/ಡೌನ್ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಹಾಗೂ ವಿವರ 1.ಇ–ಟೆಂಡರ್ ಪ್ರಕಟಣೆ ದಿನಾಂಕ: 24.07.2024. 2.ಪ್ರಿಬಿಡ್ ಸಭೆ ದಿನಾಂಕ: 01.08.2024 ರಂದು ಬೆಳಗ್ಗೆ 11.00 ಗಂಟೆಗೆ 3.ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.08.2024 ಸಂಜೆ 5.30ರ ತನಕ 4.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.08.2024 ಬೆಳಗ್ಗೆ 11.00 ಗಂಟೆಗೆ 5.ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.08.2024 ಬೆಳಗ್ಗೆ 11.00 ಗಂಟೆ ನಂತರ 6.ಇ–ಟೆಂಡರ್ ಅಂದಾಜು ಮೊತ್ತ (Approximent) ರೂ. 21,00,000–00 (ರೂಪಾಯಿ ಇಪ್ಪತ್ತೊಂದು ಲಕ್ಷ) 7.ಇ.ಎಂ.ಡಿ ಮೊತ್ತ ರೂ. 42000–00 (ರೂಪಾಯಿ ನಲವತ್ತೇರಡು ಸಾವಿರ) ಸೂಚನೆ:; ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್‌ನಲ್ಲಿ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಸಂತೇಪೇಟೆ, ಹಾಸನ–573201 ಸಂಪರ್ಕಿಸಬಹುದಾಗಿದೆ.

ಸಹಿ/–ಸಹಾಯಕ ಕೃಷಿ ನಿರ್ದೇಶಕರು, ಹಾಸನ.

ವಾಸಾಸಂಇ/ಹಿಸನಿ/ಹಾಸನ/229/ಕೆಎಸ್ಎಂಸಿಎ/2024–25